
ಸಂಪುಟ 22 ಸಂಚಿಕೆ 48-49
ನವೆಂಬರ್ 26, 2000 ಬೆಲೆ ರೂ. 3.00

ಪೆಕ್ಷ್ಯರಂಗ

ದುಡಿವ ಜನರ ಪ್ರಾಣಮಿತ್ರ




ಕಾಡಿನಿಂದ ನಾಡಿಗೆ ಡಾ।। ರಾಜ್

ಗಂಗಾವತಿ ರೈತರ ಮೇಲೆ ಗೋಲಿಬಾರ್

ಕ್ರಿಕೆಟ್ಟನ್ನು ನುಂಗಿದ ಧನದಾಹ





ವಿದ್ಯುತ್ ದರ ಏರಿಕೆ ವಿರುದ್ಧ ಧರಣಿ

ಕಳೆದ ಸಂಚಿಕೆಯಲ್ಲಿ ಸಿಪಿಐ(ಎಂ) ರಚನೆ ಮತ್ತು ಅದಕ್ಕೊಂದು ಕಾರ್ಯಕ್ರಮ ರೂಪಿಸಿದ ಬಗ್ಗೆ ಓದಿರುವಿರಿ ಈ ಸಂಚಿಕೆಯಲ್ಲಿ ಭ್ರಷ್ಟ ಕಾಂಗ್ರೆಸ್ ವಿರುದ್ಧ ಸಿಪಿಐ(ಎಂ) ನೇತೃತ್ವದಲ್ಲಿ ಎಸ್‌ಯುಸಿ ಸೇರಿ ಪ.ಬಂಗಾಳದಲ್ಲಿ ಸಂಯುಕ್ತ ಎಡರಂಗ ರಚನೆ, ರಾಜ್ಯ ಸರ್ಕಾರದ ವಿರುದ್ಧ 48 ಗಂಟೆಗಳ ಕಾಲ ಮುಷ್ಕರ, ಗಣಶಕ್ತಿ ಸಂಜೆ ದೈನಿಕದ ಉದಯ ಈ ಬಗ್ಗೆ ಓದಿ

ಸಂಯುಕ್ತ ಎಡರಂಗ ಉದಯ

ಸೆಪ್ಟೆಂಬರ್ 22 ಮತ್ತು 23 ರಂದು 48 ಗಂಟೆಗಳ ಐತಿಹಾಸಿಕ, ಸಾರ್ವತ್ರಿಕ ಮುಷ್ಕರವನ್ನು ಪ.ಬಂಗಾಳದಲ್ಲಿ ನಡೆಸಲಾಯಿತು. ಅದು ಅಭೂತಪೂರ್ವವಾಗಿತ್ತು. ಅದರಿಂದ ಉತ್ತೇಜಿತರಾಗಿ, ಕಾಂಗ್ರೆಸ್ ಸರ್ಕಾರ ರಾಜೀನಾಮೆ ಸಲ್ಲಿಸಬೇಕೆಂದು ಒತ್ತಾಯಿಸಿದೆವು. ರಾಜ್ಯ ಸರ್ಕಾರದ ವಿರುದ್ಧ ಇಡೀ ರಾಜ್ಯ ಸಿಡಿದೆದ್ದು ನಿಂತಿತು.

ಇದೆಲ್ಲ ನಡೆಯುತ್ತಿದ್ದಾಗ, ರಾಜ್ಯದ ಕಾರ್ಮಿಕ - ನೌಕರ ವರ್ಗ ಹಾಗೂ ಶಿಕ್ಷಕರು ಜಂಟಿ ಚಳುವಳಿ ನಡೆಸಲು ನಿರ್ಧರಿಸಿದ್ದು ಮಹತ್ವದ ವಿದ್ಯಮಾನವಾಗಿತ್ತು. ಜುಲೈ 12 ಸಮಿತಿ ಎಂದೇ ಖ್ಯಾತವಾದ ಸಂಯುಕ್ತ ರಂಗವೊಂದನ್ನು ರಾಜ್ಯ ಮತ್ತು ಕೇಂದ್ರ ಸರಕಾರಿ ನೌಕರರು ಹಾಗೂ ಶಿಕ್ಷಕರು ರಚಿಸಿದರು. ಕಲ್ಕತ್ತದಲ್ಲಿ ಐತಿಹಾಸಿಕ ಮೆರವಣಿಗೆ ನಡೆದ ಸಂದರ್ಭದಲ್ಲಿ ಈ ರಂಗ ಅಸ್ತಿತ್ವಕ್ಕೆ ಬಂತು. ಅನಂತರ ಸ್ವಾಯತ್ತ ಹಾಗೂ ಸ್ವಯಮಾಡಳಿತ ಸಂಸ್ಥೆಗಳ ನೌಕರರು ಮತ್ತು ಕಾರ್ಮಿಕರು ಕೂಡ ಸೇರುವುದರೊಂದಿಗೆ ಈ ಚಳುವಳಿ ವ್ಯಾಪಕಸ್ವರೂಪ ಪಡೆಯಿತು.

'ಗಣಶಕ್ತಿ' ಉದಯ

ನಾಲ್ಕನೇ ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿತ್ತು. ದೇಶಾದ್ಯಂತ ನಡೆಯುತ್ತಿದ್ದ ಚಳುವಳಿ ಹಾಗೂ ಹೋರಾಟಗಳ ಹಿನ್ನೆಲೆಯಲ್ಲಿ ಈ ಚುನಾವಣೆಗೆ ತುಂಬ ಮಹತ್ವ ಬಂದಿತ್ತು. ಇದರ ಜತೆಯಲ್ಲಿ, ಕಮ್ಯುನಿಸ್ಟ್ ಪಕ್ಷ ಒಡೆದದ್ದರಿಂದ, ಮುಖವಾಣಿಯೊಂದರ ಅವಶ್ಯಕತೆ ತುಂಬಾ ಕಾಡುತ್ತಿತ್ತು. ಪರಿಷ್ಕರಣವಾದಿಗಳು ತುಂಬಾ ಹಿಂದೆಯೇ 'ಸ್ವಾಧೀನತಾ' ವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡಿದ್ದರು. ಅದು ಅನಂತರ ಮುಚ್ಚಿತು. ಜನರ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಚಳುವಳಿಯ ಮಹತ್ವವನ್ನು ಮನಗಂಡು 'ಗಣಶಕ್ತಿ' ಎಂಬ ಸಂಜೆ ದೈನಿಕದ ಪ್ರಕಟಣೆ ಆರಂಭಿಸಿದೆವು. ಅದೇ ಹೆಸರಿನ ಮಾಸ ಪತ್ರಿಕೆ ನಮ್ಮಲ್ಲಿ ಮೊದಲೇ ಇತ್ತು. ಆಮೇಲೆ ಅದು ವಾರಪತ್ರಿಕೆಯಾಗಿ ನಂತರ ನಿಂತು ಹೋಯಿತು.

1967 ಜನವರಿ 3 ರಂದು 'ಗಣಶಕ್ತಿ'ಯ ಮೊದಲ ಸಂಚಿಕೆ ಪ್ರಕಟವಾಯಿತು. ಸರೋಜ್ ಮುಖರ್ಜಿ ಸಂಪಾದಕ ಹಾಗೂ ಪ್ರಕಾಶಕರಾಗಿದ್ದರು. ನಾಲ್ಕು ಪುಟಗಳ ಪತ್ರಿಕೆ ಬೆಲೆ ಹತ್ತು ಪೈಸೆ ಆಗಿತ್ತು.

'ಗಣಶಕ್ತಿ'ಯ ಪ್ರಥಮ ಸಂಪಾದಕೀಯ ಈ ಮಾತುಗಳಿಂದ ಕೊನೆಗೊಂಡಿತ್ತು -

"ಕಾಂಗ್ರೆಸ್ ಆಡಳಿತಗಾರರನ್ನು ಜನತೆ ಶಿಕ್ಷಿಸದೆ ಬಿಡುವುದಿಲ್ಲ. ಅಂತಿಮ ವಿಜಯವೂ ಜನರದ್ದೇ ಆಗಿರುತ್ತದೆ. ಅದು ಐತಿಹಾಸಿಕ ಪ್ರಾಥಮಿಕ ಪಾಠವಾಗಿದೆ. ಆದರೆ ಈ ಹೋರಾಟಕ್ಕಾಗಿ ಜನತೆ ಕಷ್ಟಪಡಬೇಕಾಗುತ್ತದೆ ಹಾಗೂ ಸಂಕಷ್ಟಮಯ ಪ್ರಯಾಣವನ್ನು ಮುಂದುವರಿಸಬೇಕಾಗುತ್ತದೆ. ಪಕ್ಷದ ಮುಖವಾಣಿ 'ಗಣಶಕ್ತಿ' ಈ ಪರಂಪರೆಯನ್ನು ಮುಂದುವರಿಸಲು ಶ್ರಮಿಸುತ್ತದೆ. ಅದು ಕಾರ್ಮಿಕರು ಹಾಗೂ ಕಾರ್ಮಿಕ ವರ್ಗದ ಹೋರಾಟದ ಸಂದೇಶವನ್ನು ರಾಜಿ ರಹಿತವಾಗಿ ಬಿತ್ತರಿಸುತ್ತದೆ. ಆಳುವ ಕಾಂಗ್ರೆಸ್ ಪಕ್ಷದ ಎಲ್ಲ ಹುನ್ನಾರಗಳು ಮತ್ತು ಪಿತೂರಿಗಳು ಈ ಅಂಕಣಗಳ ಮೂಲಕ ಅನಾವರಣಗೊಳ್ಳುತ್ತವೆ"

ಗಣಶಕ್ತಿ ಈ ಪರಂಪರೆಯನ್ನು ಮುಂದುವರಿಸುತ್ತಿದೆ. 'ಗಣಶಕ್ತಿ' ಬಗ್ಗೆ ಮಾತಾಡುವಾಗ ನನಗೆ 'ಪೀಪಲ್ಸ್ ಡೆಮಾಕ್ರಸಿ'ಯ ನೆನಪಾಗುತ್ತದೆ. ಅದು ಪಕ್ಷದ ಕೇಂದ್ರ ಸಮಿತಿಯ ಮುಖವಾಣಿ. 1965 ಜೂನ್ 27 ರಂದು ಅದರ ಪ್ರಕಟಣೆ ಆರಂಭ. ದೆಹಲಿಯಲ್ಲಿರುವ ಕೇಂದ್ರ ಸಮಿತಿ ತಾಂತ್ರಿಕವಾಗಿ 'ಪೀಪಲ್ಸ್ ಡೆಮಾಕ್ರಸಿ'ಯ ಕೇಂದ್ರ ಸ್ಥಾನವಾದರೂ ಆ ದಿನಗಳಲ್ಲಿ ಪಿ.ಡಿ.ಯು ಕಲ್ಕತ್ತದಿಂದಲೇ ಪ್ರಕಟಣೆಗೊಳ್ಳುತ್ತಿತ್ತು. 'ಪೀಪಲ್ಸ್ ಡೆಮಾಕ್ರಸಿ' 1965 ರಲ್ಲಿ ಮೊದಲು ಬೆಳಕು ಕಂಡಾಗ ಪಕ್ಷದ ಕೇಂದ್ರ ಸಮಿತಿ ಕಲ್ಕತ್ತದಲ್ಲಿ ಇತ್ತು. ಪಕ್ಷದ ನಿರ್ದೇಶನದ ಮೇರೆಗೆ ನಾನು ಪಿ.ಡಿ.ಯ ಪ್ರಥಮ ಸಂಪಾದಕನಾಗಿ ಆಯ್ಕೆಯಾದೆ. ಕಾಮ್ರೇಡ್ ಬಿ.ಟಿ.ರಣದಿವೆ ನನ್ನ ಉತ್ತರಾಧಿಕಾರಿಯಾದರು.

ಕಾಂಗ್ರೆಸ್ಸೇತರ ಸರಕಾರ ರಚನೆ

ಅದು 1967.

"ಕಾಂಗ್ರೆಸ್ ಸರಕಾರದ ದೇಶ ವಿರೋಧಿ ಮತ್ತು ಜನ ವಿರೋಧಿ ನೀತಿಗಳಿಂದಾಗಿ ಬಿಕ್ಕಟ್ಟು ಉಂಟಾಯಿತು. ಆಹಾರ ಬಿಕ್ಕಟ್ಟು ಮತ್ತು ಜನತೆಯ ಸಂಕಷ್ಟದಲ್ಲಿ ಅದು ಪ್ರತಿಬಿಂಬಿತವಾಗಿತ್ತು. ಪಶ್ಚಿಮ ಬಂಗಾಳ, ಕೇರಳ, ಬಿಹಾರ ಮತ್ತು ಉತ್ತರ ಪ್ರದೇಶದಲ್ಲಿ ಯಶಸ್ವಿಯಾಗಿ ಹಾಗೂ ವ್ಯಾಪಕವಾಗಿ ನಡೆದ ಮುಷ್ಕರ ಮತ್ತು ಚಳುವಳಿಗಳು ಮುಂಬರುವ ದಿನಗಳಲ್ಲಿ ಹೋರಾಟ ಯಾವ ರೀತಿ ಸಾಗಬಹುದು ಎಂಬುದರ ಸೂಚಕವಾಗಿತ್ತು. ವಿದ್ಯಾರ್ಥಿ ಸಮುದಾಯ ಕೂಡ ದೊಡ್ಡರೀತಿಯಲ್ಲಿ ಆಂದೋಲನದಲ್ಲಿ ಧುಮುಕಿತು.

ಚಳುವಳಿಯನ್ನು ಬಗ್ಗು ಬಡಿಯಲು ಸರಕಾರ ಭಯದ ವಾತಾವರಣವನ್ನು ಸೃಷ್ಟಿಸಿತು. ಆದರೆ ದೇಶಾದ್ಯಂತದ ಜನಪರ ಪ್ರಜಾಸತ್ತಾತ್ಮಕ ಚಳುವಳಿಯ ಅಲೆಯನ್ನು ತಡೆಯಲು ಅದಕ್ಕೆ ಸಾಧ್ಯವಾಗಲಿಲ್ಲ. ಆಂಧ್ರ ಪ್ರದೇಶದಲ್ಲಿ ದೊಡ್ಡ ಚಳುವಳಿಗಳು ನಡೆದವು. ರಾಜ್ಯದ (ಆಂಧ್ರ) ಕಲ್ಯಾಣಕ್ಕಾಗಿ ಜನರು ನಡೆಸಿದ ಆಂದೋಲನವನ್ನು ದಮನಿಸಲು ಪೋಲೀಸರು ಗುಂಡಿನ ಮಳೆಗರೆದರು.

ಸ್ವಾತಂತ್ರ್ಯಾನಂತರದಲ್ಲಿ ದೇಶದಲ್ಲಿ ಇಂಥ ಆಂದೋಲನ ಎಂದೂ ನಡೆದಿರಲಿಲ್ಲ. ಅದೇ ರೀತಿ ಪೋಲೀಸರ ಈ ರೀತಿ ದೌರ್ಜನ್ಯವನ್ನು ದೇಶ ಕಂಡಿರಲಿಲ್ಲ ಇಂಥ ಸನ್ನಿವೇಶದಲ್ಲಿ ಚುನಾವಣೆ ಬಂತು. ದೇಶದ ಮೇಲೆ ಹಸಿವಿನ ಹೊರೆ ಹೊರಿಸುತ್ತಿರುವ ಹಾಗೂ ಜನತೆಯ ಮೂಲಭೂತ ಹಕ್ಕುಗಳನ್ನು ನಾಶ ಮಾಡುತ್ತಿರುವ ಒಂದು ಸರಕಾರದಲ್ಲಿ ಜನತೆ ತಮ್ಮ ವಿಶ್ವಾಸವನ್ನು ಮುಂದುವರಿಸುತ್ತಿದೆಯೋ ಎನ್ನುವುದು ನಮ್ಮ ಮುಂದಿದ್ದ ದೊಡ್ಡ ಪ್ರಶ್ನೆಯಾಗಿತ್ತು. ಇದು ಮೂಲಭೂತ ವಿಚಾರವಾಗಿತ್ತು.


ಹೊಸದಾಗಿ ರಚನೆಯಾದ ಸಿಪಿಐ(ಎಂ)ನ ಚುನಾವಣೆ ಪ್ರಣಾಳಿಕೆ ಈ ಮಾತುಗಳೊಂದಿಗೆ ಆರಂಭವಾಗಿತ್ತು.

ಸ್ವಾತಂತ್ರ್ಯ ಬಂದು ಎರಡು ದಶಕಗಳು ಕಳೆದಿವೆ. ಮೂರು ಪಂಚವಾರ್ಷಿಕ ಯೋಜನೆಗಳು ಬಂದು ಹೋಗಿವೆ. ಆದರೆ ದುಡಿಯುವ ಜನರು ನಿರ್ಲಕ್ಷಿತರಾಗಿಯೇ ಉಳಿದಿದ್ದಾರೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲೇ ಬೆಲೆಗಳು ಶೇಕಡ 30 ರಷ್ಟು ಏರಿದವು. ಕಳೆದ ಐದು ವರ್ಷಗಳಲ್ಲಿ ಕಾಂಗ್ರೆಸ್ ಸರಕಾರ 2600 ಕೋಟಿ ರೂಪಾಯಿಗೂ ಹೆಚ್ಚಿನ ತೆರಿಗೆಗಳನ್ನು ಹೇರಿದೆ. ಯೋಜಿತ ಪ್ರಗತಿಯ ಹೆಸರಿನಲ್ಲಿ ಕಾಂಗ್ರೆಸ್ ಆಡಳಿತಗಾರರೂ 4000 ಕೋಟಿ ರೂಪಾಯಿಗೂ ಹೆಚ್ಚಿನ ಸಾಲವನ್ನು ಪಡೆದಿದ್ದಾರೆ. ಸೋವಿಯತ್ ಒಕ್ಕೂಟ ತೋರಿದ ಧಾರಾಳತನವನ್ನು ದೇಶದ ಆರ್ಥಿಕತೆಯನ್ನು ಪಾರು ಮಾಡಲು ಕಾಂಗ್ರೆಸ್ ಸರಕಾರ ಬಳಸಿಕೊಳ್ಳಲಿಲ್ಲ. ಸೋವಿಯತ್ ಒಕ್ಕೂಟ ನೀಡಿದ ನೆರವನ್ನು ಅಮೆರಿಕದ ಜತೆ ವ್ಯವಹರಿಸಲು ಹಾಗೂ ಸಾಮ್ರಾಜ್ಯಶಾಹಿಗಳಿಂದ ಸಾಲವನ್ನು ಪಡೆಯಲು ದಾಳವನ್ನಾಗಿ ಬಳಸಿಕೊಂಡಿದೆ. ಈ ರೀತಿಯಾಗಿ ಸಾಮ್ರಾಜ್ಯಶಾಹಿಗಳ ಮೇಲೆ ಅವಲಂಬಿತವಾಗುವುದರಿಂದ ದೇಶದ ಏಕತೆ ಮತ್ತು ಸಾರ್ವಭೌಮತೆ ಅಪಾಯಕ್ಕೆ ಸಿಲುಕುತ್ತದೆ ಎಂಬ ವಾಸ್ತವತೆಯನ್ನು ಕಾಂಗ್ರೆಸ್ ಸರಕಾರ ಎಂದೂ ಮನವರಿಕೆ ಮಾಡಿಕೊಳ್ಳಲಿಲ್ಲ.

ಆದರೆ ಕಾಂಗ್ರೆಸ್ ಸರಕಾರಗಳ ಅಪಾಯಕಾರಿ ನೀತಿಗಳ ವಿರುದ್ಧ ಜನರು ಆಗಾಗ ದನಿಯೆತ್ತಿದರು. ಈ ವಿಚಾರದಲ್ಲಿ ಪಶ್ಚಿಮ ಬಂಗಾಳ ಹೊಸ ಹಾದಿಯನ್ನೇ ತೋರಿತು.

ಮೊದಲ ಚುನಾವಣೆ

ಸಿಪಿಐ(ಎಂ) ಎದುರಿಸಲಿರುವ ಮೊದಲ ಚುನಾವಣೆ ಇದಾಗಿತ್ತು. ಹೀಗಾಗಿ ಈ ಸಲದ ಚುನಾವಣೆಗೆ ವಿಶೇಷ ಮಹತ್ವ ಬಂದಿತ್ತು. ನಾವೊಂದು ಶಕ್ತಿಯಾಗಿ ಬೆಳೆದಿದ್ದೇವೆಯೇ ಅಥವಾ ಜನತೆಯ ಮುಂದೆ ನಮ್ಮ ವಿಶ್ವಾಸಾರ್ಹತೆಯನ್ನು ಸಾಬೀತುಪಡಿಸಲು ಮತ್ತು ಜನಸಮುದಾಯ ನಮ್ಮನ್ನು ಅಂಗೀಕರಿಸಿದೆಯೇ ಎಂಬುದನ್ನು



ತೋರಿಸಲು ಚುನಾವಣೆ ಅಂತಿಮ ಮಾನದಂಡ. ಚುನಾವಣೆ ಕಣದಲ್ಲಿನ ನಮ್ಮ ಯಶಸ್ಸಿನಿಂದಷ್ಟೇ ಅದನ್ನು ಅಳೆಯಬಹುದು.

ಬಲಪಂಥೀಯ ಕಮ್ಯುನಿಸ್ಟರು ಆ ವೇಳೆಗಾಗಲೇ ಅಪಾಯಕಾರಿ ಸನ್ನಿವೇಶವನ್ನು ಸೃಷ್ಟಿಸಿದ್ದರು ಹಾಗೂ ಚೀನಾದ ಜತೆ ಯುದ್ಧಕ್ಕೆ ಹಾತೊರೆಯುತ್ತಿದ್ದರು ಎನ್ನುವುದನ್ನು ನಾವು ಮರೆಯಬಾರದು. ನಾವು ಈ ನಿಲುವನ್ನು ವಿರೋಧಿಸಿ; ಯುದ್ಧದಲ್ಲಿ ಮಾತುಕತೆಯೊಂದೇ ಪರಿಹಾರ ಮಾರ್ಗ ಎಂದು ಪ್ರತಿಪಾದಿಸಿದ್ದರಿಂದ ಸರಕಾರ ನಮ್ಮ ವಿರುದ್ಧ ಕಠಿಣವಾಗಿ ಕಾರ್ಯಾಚರಿಸಿತು. ಆದರೆ ನಾವು ದೃಢವಾಗಿಯೇ ನಿಂತೆವು. ಜನತೆಯ ಕಲ್ಯಾಣವೇ ನಮ್ಮ ಪ್ರಮುಖ ಗುರಿಯಾಗಿತ್ತು. ಇಂಥ ಒಂದು ದಮನಕಾರಿ ಸನ್ನಿವೇಶದಲ್ಲಿ ನಾವು ಚುನಾವಣೆ ಎದುರಿಸಲು ಸನ್ನದ್ಧರಾದೆವು; ಮತ ಸರ್ವೋನ್ನತ ಪರೀಕ್ಷೆಯಾಗಿತ್ತು.

ಪರಿಷ್ಕರಣವಾದಿಗಳ ಜತೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದರೂ ಕಾಂಗ್ರೆಸ್ಸನ್ನು ಒಗ್ಗಟ್ಟಿನಿಂದ ಎದುರಿಸಬೇಕೆಂಬ ನಿಲುವಿಗೇ ನಾವು ಬದ್ಧರಾಗಿದ್ದೆವು. ಕಾಂಗ್ರೆಸ್ ವಿರೋಧಿ ಮತಗಳು ಒಡೆಯಬಾರದು; ಹಾಗಾದಲ್ಲಿ ಕಾಂಗ್ರೆಸ್‌ಗೆ ಲಾಭವಾಗುತ್ತದೆ ಎಂಬುದು ನಮಗೆ ಗೊತ್ತಿತ್ತು. ಆದರೆ ದುರದೃಷ್ಟವಶಾತ್, ಒಂದು ಸಂಯುಕ್ತ ಚುನಾವಣೆ ರಂಗವನ್ನು ರಚಿಸಲು ಸಾಧ್ಯವಾಗಲಿಲ್ಲ.

ಈ ವಿದ್ಯಮಾನಕ್ಕೆ ಬಲಪಂಥೀಯ ಕಮ್ಯುನಿಸ್ಟರೇ ಹೊಣೆಗಾರರು. ಅವರು ವಿಧಾನಸಭೆಯಲ್ಲಿ ಎಂಟು ಸದಸ್ಯರನ್ನು ಹೊಂದಿದ್ದರು. ಆ ಸ್ಥಾನಗಳ ಸಹಿತ 35 ಸ್ಥಾನಗಳನ್ನು ಅವರಿಗೆ ಬಿಟ್ಟುಕೊಡಲು ನಾವು ಒಪ್ಪಿದೆವು. ಆದರೆ ಅವರೋ 28 ಸೀಟು ಹೆಚ್ಚಿಗೆ ಬೇಕೆಂದು ರೊಚ್ಚಿ ಹಿಡಿದರು. ಅವುಗಳ ಪೈಕಿ 18 ಸ್ಥಾನಗಳ. ಬಗ್ಗೆ ಮಾತನಾಡಲೂ ಅವರಿಗೆ ಹಕ್ಕಿರಲಿಲ್ಲ. ಈ ಕ್ಷೇತ್ರಗಳಲ್ಲಿ ಅವರಿಗೆ ಯಾವುದೇ ರೀತಿಯ ಪ್ರಭಾವವಿರಲಿಲ್ಲ.

ತಮ್ಮ ಅತಾರ್ಕಿಕ ಬೇಡಿಕೆಗಳಿಗೆ ನಾವು ಮಣಿಯುವುದಿಲ್ಲ ಎಂದು ತಿಳಿದ ಪರಿಷ್ಕರಣವಾದಿಗಳು ಅಜಯ್ ಮುಖರ್ಜಿ ನಾಯಕತ್ವದ ಬಾಂಗ್ಲಾ ಕಾಂಗ್ರೆಸ್ ಮತ್ತು ಫಾರ್ವರ್ಡ್ ಬ್ಲಾಕ್ ನೇತೃತ್ವದಲ್ಲಿ ಪರ್ಯಾಯ ವೇದಿಕೆಯೊಂದನ್ನು ರಚಿಸಲು ಯತ್ನಿಸಿದರು. ಚುನಾವಣೆ ಸಂದರ್ಭದಲ್ಲಿ ಮುಖರ್ಜಿ ಕಾಂಗ್ರೆಸ್ ತೊರೆದು ಹೊಸಪಕ್ಷವನ್ನು ರಚಿಸಿದರು.

ತ್ರಿಕೋನ ಸ್ಪರ್ಧೆ

ಪಶ್ಚಿಮ ಬಂಗಾಳದಲ್ಲಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿತು. ಸಿಪಿಐ(ಎಂ) ಒಳಗೊಂಡ ಸಂಯುಕ್ತ ರಂಗವು ಸಂಯುಕ್ತ ಎಡರಂಗ(ಯುಎಲ್‌ಎಫ್) ಎಂದು ಪರಿಚಿತವಾಯಿತು. ಈ ರಂಗದಲ್ಲಿ ಸಿಪಿಐ(ಎಂ), ಆರ್.ಎಸ್.ಪಿ., ಮಾರ್ಕ್ಸಿಸ್ಟ್ ಫಾರ್ವರ್ಡ್ ಬ್ಲಾಕ್, ಆರ್‌ಸಿಪಿಐ, ಎಸ್‌ಎಸ್‌ಪಿ, ಎಸ್‌ಯುಸಿ ಮತ್ತು ಕಾರ್ಮಿಕ ಪಕ್ಷ ಇದ್ದವು.

201 ವಿಧಾನಸಭೆ ಮತ್ತು 29 ಲೋಕಸಭೆ ಕ್ಷೇತ್ರಗಳಲ್ಲಿ ರಂಗದ ಅಭ್ಯರ್ಥಿಗಳು ಕಣಕ್ಕಿಳಿದರು. ಆ ಪೈಕಿ ಪಕ್ಷವಾರು ವಿವರ ಹೀಗಿದೆ. ಸಿಪಿಐ(ಎಂ)-135, ಆರ್‌ಎಸ್‌ಪಿ-15, ಮಾರ್ಕ್ಸಿಸ್ಟ್ ಫಾರ್ವರ್ಡ್ ಬ್ಲಾಕ್-1, ಆರ್‌ಸಿಪಿಐ-2, ಎಸ್‌ಯುಸಿ-8 ಮತ್ತು ಎಸ್‌ಎಸ್ ಪಿ-26. 12 ಪಕ್ಷೇತರರೂ ನಮ್ಮ ಬೆಂಬಲದೊಂದಿಗೆ ಸ್ಪರ್ಧಿಸಿದ್ದರು.

ಬಾಂಗ್ಲಾ ಕಾಂಗ್ರೆಸ್ ಮತ್ತು ಬಲಪಂಥೀಯ ಕಮ್ಯುನಿಸ್ಟರು ಪಿಯುಎಲ್‌ಎಫ್ ರಚಿಸಿಕೊಂಡರು. ಅದರಲ್ಲಿ ಕಮ್ಯುನಿಸ್ಟ್ ಪಕ್ಷ(ಬಲಪಂಥೀಯ), ಬಾಂಗ್ಲಾ ಕಾಂಗ್ರೆಸ್ ಮತ್ತು ಫಾರ್ವರ್ಡ್ ಬ್ಲಾಕ್ ಇದ್ದವು. ಅವರು ಒಟ್ಟು 192 ಸ್ಥಾನಗಳಲ್ಲಿ ಸ್ಪರ್ಧಿಸಿದರು. ಕಾಂಗ್ರೆಸ್ ಪಕ್ಷ ವಿಧಾನಸಭೆಯ ಎಲ್ಲ 280 ಸ್ಥಾನಗಳಿಗೆ ಸ್ಪರ್ಧಿಸಿತು.

ತುರ್ತುಪರಿಸ್ಥಿತಿಯಂಥ ಸನ್ನಿವೇಶವನ್ನು ಕೊನೆಗಾಣಿಸಬೇಕು, ಡಿಐಆರ್ ಮತ್ತು ಪಿಡಿ ಕಾನೂನಿನಂಥ ಕರಾಳ ಕಾಯಿದೆಗಳನ್ನು ವಾಪಸು ಪಡೆಯಬೇಕು, ಜನತೆಯ ಹಕ್ಕುಗಳನ್ನು ಮರಳಿ ಸ್ಥಾಪಿಸಬೇಕು, ವಿಚಾರಣೆಯಿಲ್ಲದೆ ಬಂಧಿಸಬಾರದು, ಧಾರ್ಮಿಕ, ಮಾತನಾಡುವ, ಸಭೆ ಸೇರುವ, ಮುಷ್ಕರ ನಡೆಸುವ ಹಾಗೂ ಸಂಘಟನೆ ಮಾಡುವ ಪೂರ್ಣ ಸ್ವಾತಂತ್ರ್ಯ ಹಾಗೂ ದೇಶಾದ್ಯಂತ ಮುಕ್ತವಾಗಿ ಸಂಚರಿಸುವ ಹಕ್ಕನ್ನು ನೀಡಬೇಕು ಎಂದು ಸಿಪಿಐ(ಎಂ) ಚುನಾವಣಾ ಪ್ರಣಾಳಿಕೆ ಒತ್ತಾಯಿಸಿತು.

ರಾಜ್ಯದ ಜಾತ್ಯಾತೀತ ಸ್ವರೂಪವನ್ನು ಕಾಯ್ದುಕೊಳ್ಳುವುದು, ಸೆಕಂಡರಿ ಹಂತದವರೆಗೆ ಉಚಿತ ಶಿಕ್ಷಣ, ಶಿಕ್ಷಕರ ವೇತನ ಶ್ರೇಣಿ ಪರಿಷ್ಕರಣೆ, ಭೂರಹಿತರಿಗೆ ಉಚಿತವಾಗಿ ಜಮೀನು ಹಂಚಿಕೆ, ವಸತಿ ಸೌಲಭ್ಯ, ಸೂಕ್ತ ಪಡಿತರ ವ್ಯವಸ್ಥೆ, ಕಡಿಮೆ ಬೆಲೆಗಳು, ತೆರಿಗೆ ಹೊರೆಯಲ್ಲಿ ಕಡಿತ, ಅಮೆರಿಕದ ನೆರವನ್ನು ಹೆಚ್ಚಾಗಿ ಪಡೆಯುವುದಕ್ಕೆ ಪೂರ್ಣ ವಿರಾಮ ಇವೇ ಮೊದಲಾದ ಬೇಡಿಕೆಗಳೂ ಪ್ರಣಾಳಿಕೆಯಲ್ಲಿ ಇದ್ದವು.

ವಿದೇಶಿ ಸಾಲಗಳನ್ನು ನಿರ್ವಹಿಸುವ ಎಲ್ಲ ಪ್ರಮುಖ ಕೈಗಾರಿಕೆಗಳನ್ನು ರಾಷ್ಟ್ರೀಕರಣಗೊಳಿಸಬೇಕು, ಟ್ರೇಡ್ ಯೂನಿಯನ್ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಹಾಗೂ ಮುಷ್ಕರ ನಡೆಸುವ ಹಕ್ಕಿಗೆ ಖಾತರಿ ನೀಡಬೇಕು, ಸಾಮ್ರಾಜ್ಯಶಾಹಿಗೆ ತೀವ್ರ ಪ್ರತಿರೋಧ ಒಡ್ಡಬೇಕು, ಇತರ ದೇಶಗಳ ಜತೆ ಶಾಂತಿಯುತ ಸಹಬಾಳ್ವೆ, ಬ್ರಿಟಿಷ್ ಕಾಮನ್‌ವೆಲ್ತ್ ಜತೆಗಿನ ಸಂಬಂಧ ಕಡಿತ, ಸಮಾಜವಾದಿ ಚೀನಾ ಜತೆಗಿನ ವಿವಾದಗಳಿಗೆ ಶಾಂತಿಯುತ ಪರಿಹಾರ ಹಾಗೂ ಆ ದೇಶದ ಜತೆ ಮೈತ್ರಿ ಸ್ಥಾಪನೆ, ಪಾಕಿಸ್ತಾನದೊಂದಿಗೆ ಉತ್ತಮ ಸಂಬಂಧ ಮತ್ತು ಅವಿರತ ಹೋರಾಟ ನಿರತ ವಿಯೆಟ್ನಾಂ ಜನರಿಗೆ ಬೆಂಬಲ - ಇವು ಕೂಡ ನಮ್ಮ ಚುನಾವಣೆ ಪ್ರಣಾಳಿಕೆಯಲ್ಲಿದ್ದ ಅಂಶಗಳಾಗಿದ್ದವು.

ಒಂದು ಜನತಾ ಪ್ರಜಾಪ್ರಭುತ್ವ ಸರಕಾರವನ್ನು ಮುನ್ನಡೆಸುವ ಕಾರ್ಮಿಕ ವರ್ಗದ ಆಡಳಿತವನ್ನು ಸ್ಥಾಪಿಸುವುದಕ್ಕೆ ಕರೆ ನೀಡುವುದರೊಂದಿಗೆ ಪ್ರಣಾಳಿಕೆ ಮುಕ್ತಾಯವಾಗಿತ್ತು.

ಜನತೆಯ ವಿಜಯ ಸಾಧಿಸುವವರೆಗೆ ತಾನು ವಿರಮಿಸುವುದಿಲ್ಲ ಎನ್ನುವುದನ್ನು ಜನರಿಗೆ ಸಿಪಿಐ(ಎಂ) ನೆನಪಿಸಿತು.

(ಮುಂದುವರಿಯುವುದು)

ರಾಜ್‌ಕುಮಾರ್ ಬಿಡುಗಡೆ - ಜನತೆಯ ಸಂತಸ

ಕನ್ನಡದ ಅಪ್ರತಿಮ ನಟರಾದ ಡಾ|| ರಾಜ್‌ಕುಮಾರ್‌ರವರು ವನವಾಸದಲ್ಲಿಯೂ ಶತದಿನೋತ್ಸವವನ್ನು ಪೂರೈಸಿ 109 ನೇ ದಿನ ಬಿಡುಗಡೆಯಾಗಿದ್ದಾರೆ. 3 ತಿಂಗಳುಗಳಿಗೂ ಮೀರಿದ ಈ ಅವಧಿಯಲ್ಲಿ ಆತಂಕದಿಂದ, ದುಃಖದಿಂದ ರಾಜ್‌ಕುಮಾರ್‌ರವರ ಬಿಡುಗಡೆಯನ್ನು ನಿರೀಕ್ಷಿಸುತ್ತಿದ್ದ ಕರ್ನಾಟಕದ ಜನತೆಯ ಸಂತಸದ ಹೊನಲು ಉಕ್ಕಿ ಹರಿದಿದೆ. ಬೆಂಗಳೂರಿನಲ್ಲಿ ರಾಜ್‌ಕುಮಾರ್‌ರವರು ಅಡಿಯಿರಿಸಿದಲ್ಲೆಲ್ಲಾ ಜನಸಂದಣಿ ತುಂಬಿ ತುಳುಕಿತ್ತು. ಬೆಂಗಳೂರು ಸೇರಿದಂತೆ ಹಲವಾರು ನಗರಗಳಲ್ಲಿ ಪಟಾಕಿ, ಬಿರುಸುಬಾಣಗಳನ್ನು ಹಚ್ಚಿ, ಕುಣಿದು, ನಲಿದು ರಾಜೋತ್ಸವ(ರಾಜ್ ಉತ್ಸವ)ವನ್ನು ಆಚರಿಸಿದ್ದಾರೆ.

ಕರ್ನಾಟಕ ವಿಧಾನಸಭೆ, ವಿಧಾನಪರಿಷತ್ತುಗಳು, ಕರ್ನಾಟಕದ ಚಲನಚಿತ್ರೋದ್ಯಮ, ಹಲವು ಸಂಘ ಸಂಸ್ಥೆಗಳು ಈ ಸಂತಸದಲ್ಲಿ ಭಾಗಿಯಾಗಿದ್ದಾರೆ. ಕರ್ನಾಟಕದ ದುಡಿಯುವ ಜನರ ಪ್ರಾಣ ಮಿತ್ರ 'ಐಕ್ಯರಂಗ'ವೂ ತನ್ನ ಸಂತಸವನ್ನು ವ್ಯಕ್ತಪಡಿಸುತ್ತದೆ.

ತಮ್ಮ 72 ರ ಇಳಿವಯಸ್ಸಿನಲ್ಲಿಯೂ ಕೂಡ 109 ದಿನಗಳ ಕಾಲ ದಿನ ದಿನವೂ ನಡೆಯುತ್ತಾ ಅಲ್ಪ ಆಹಾರದಲ್ಲಿ ಕಾಡಿನ ವಾಸದ ಶ್ರಮವನ್ನು ನಿಭಾಯಿಸಿದ್ದಾರೆಂದರೆ ಅವರು ದೀರ್ಘಕಾಲದಿಂದ ನಿರಂತರ ವ್ಯಾಯಾಮ ಹಾಗೂ ನಿಯಮಿತ ಆಹಾರದಿಂದ ತಮ್ಮ ಶರೀರವನ್ನು ಹುರಿಗೊಳಿಸಿಕೊಂಡಿದ್ದರೆಂಬುದರಿಂದ ಮಾತ್ರವೇ ಎಂಬುದರಲ್ಲಿ ಸಂಶಯವಿಲ್ಲ.

- ಸಂಪಾದಕರು

ರಾಜಕುಮಾರ್ ಅಪಹರಣ-ಬಿಡುಗಡೆ-ಹಲವು ಪ್ರಶ್ನೆಗಳು

ಜಿ.ಎನ್.ನಾಗರಾಜ್

ರಾಜಕುಮಾರ್ ಅಪಹರಣ ಹಾಗೂ ಬಿಡುಗಡೆ ಎಂಬ ಇಡೀ ಪ್ರಕರಣದ ಬಗ್ಗೆ ಚಿಂತಿಸಲು ಇದು ಸಕಾಲ. ರಾಜಕುಮಾರವರ ಅಪಹರಣ- ಬಿಡುಗಡೆಗಾಗಿ ಮಾಡಿದ ಪ್ರಯತ್ನ ಮತ್ತು ಅಂತಿಮವಾಗಿ ಬಿಡುಗಡೆಯಾದ ರೀತಿ ಇವೆಲ್ಲವೂ ಹಲವು ಪ್ರಶ್ನೆಗಳನ್ನು ಎತ್ತುತ್ತದೆ. ರಾಜಕುಮಾರ್ ಬಿಡುಗಡೆಗಾಗಿ ಎಷ್ಟು ಹಣ ನೀಡಲಾಗಿದೆ? ವೀರಪ್ಪನ್‌ನ ಯಾವ ಶರತ್ತುಗಳಿಗೆ ಒಪ್ಪಿಕೊಳ್ಳ ಲಾಗಿದೆ? ಇದರಲ್ಲಿ ಕರ್ನಾಟಕದ ಸರ್ಕಾರದ ಪಾತ್ರವೇನು? ತಮಿಳುನಾಡು ಸರ್ಕಾರದ ಪಾತ್ರವೇನು? ರಾಜಕುಮಾರ್‌ರವರ ಬಿಡುಗಡೆಯಲ್ಲಿ ನೆಡುಮಾರನ್ ಮೊದಲಾದ ಎಲ್‌ಟಿಟಿಇ ಸಹಚರರ ಪಾತ್ರವೇನು? ಡಾ. ಭಾನು, ರಾಮಕುಮಾರ್, ಶಣ್ಮುಗಂ ಸುಂದರಂ, ಮಣಿ ಇವರೆಲ್ಲಾ ಯಾರು? ಇವರ ಪಾತ್ರವೇನು? ಸರ್ಕಾರಗಳಿಗೂ ಇವರು ವಹಿಸಿದ ಪಾತ್ರಕ್ಕೂ ಏನು ಸಂಬಂಧ? ನಕ್ಕೀರನ್ ಗೋಪಾಲನ್ ನಿರುಪಯುಕ್ತನಾದನೇಕೆ? ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಮೀರಿ ಟಾಡಾ ಬಂಧಿಗಳ ಬಿಡುಗಡೆ, ವೀರಪ್ಪನ್‌ನ ಮೇಲೆ ಮುಂದಿನ ಕಾರ್ಯಾಚರಣೆ ಏನು? ಸುಪ್ರೀಂ ಕೋರ್ಟ್‌ನ ತೀರ್ಪು ಬಿಡುಗಡೆಯ ಮೇಲೆ ಬೀರಿದ ಪ್ರಭಾವವೇನು? ಕೇಂದ್ರ ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡೀಸ್ ಈ ಮಧ್ಯೆ ಚೆನ್ನೈನಲ್ಲಿ ನೆಡುಮಾರನ್, ಕುರುಣಾನಿಧಿ ಇವರ ಜೊತೆ ನಡೆಸಿದ ಮಾತುಕತೆ ಏನು? ಮಾಜಿ ಡಿಜಿಪಿ ರಾಮಲಿಂಗಂ ಅವರ ಪುತ್ರ ಮತ್ತೊಬ್ಬ ಮಾಜಿ ಡಿಜಿಪಿ ಟಿ.ಶ್ರೀನಿವಾಸಲು ಇವರ ಪಾತ್ರವೇನು? ರಾಜ್‌ಕುಮಾರ್ ಅಸ್ವಸ್ಥನೆಂದು ನಟಿಸಬೇಕೆಂದು ನೆಡುಮಾರನ್ ಹಾಗೂ ಡಾ(?) ಭಾನು ಅವರಿಗೆ ಹೇಳಿದರೆ? ಹಾಗೆ ರಾಜಕುಮಾರ್ ನಟಿಸಿದರೆ? ಮೊದಲು ಈ ವಿಷಯವನ್ನು ತಾವೇ ಸ್ವಯಂ ಸ್ಫೂರ್ತಿಯಿಂದ ಹೇಳಿ ನಂತರ ಅಲ್ಲಗಳೆದರೇಕೆ? ಇತ್ಯಾದಿ ಇತ್ಯಾದಿ ಅನೇಕ ಪ್ರಮುಖ ಮತ್ತು ಕ್ಷುಲ್ಲಕ ಪ್ರಶ್ನೆಗಳು ಎದುರಾಗುತ್ತವೆ.

ಈ ಎಲ್ಲಾ ಪ್ರಶ್ನೆಗಳಲ್ಲಿ ಅಪಹರಣದಿಂದ ಬಿಡುಗಡೆಯವರೆಗೂ ಅತ್ಯಂತ ಪ್ರಮುಖ ವಾಗಿರುವುದು ತಮಿಳು ಉಗ್ರಗಾಮಿಗಳ ಪಾತ್ರ. ವೀರಪ್ಪನ್ ರಾಜಕುಮಾರರನ್ನು ಅಪಹರಿಸಲು ಬಂದಾಗ ಈ ಅಪರಾಧದಲ್ಲಿ ಅವನ ಜೊತೆಗಾರರಾಗಿದ್ದ ವರು ತಮಿಳು ಉಗ್ರಗಾಮಿಗಳು. ಬಿಡುಗಡೆಗಾಗಿ ವೀರಪ್ಪನ್ ವಿಧಿಸಿದ ಮೊದಲ ಶರತ್ತುಗಳಲ್ಲಿ ಅವನಿಗೆ ನೇರವಾಗಿ ಸಂಬಂಧಿಸಿದ ಟಾಟಾ ಬಂಧಿಗಳ ಬಿಡುಗಡೆಯ ಹೊರತು ಉಳಿದೆಲ್ಲಾ ಶರತ್ತುಗಳನ್ನು ಹಾಕಿದ್ದವರು ವೀರಪ್ಪನ್ ಅಲ್ಲ, ವೀರಪ್ಪನ್‌ನ ಸಹಚರರಾಗಿದ್ದ ತಮಿಳು ಪ್ರತ್ಯೇಕತಾವಾದಿಗಳು. ಹಿಂದಿನ ಎಲ್ಲಾ ಬಿಡುಗಡೆಯ ಸಂದರ್ಭಗಳಲ್ಲಿ ವೀರಪ್ಪನ್ ಜೊತೆ ಸಂಧಾನ ನಡೆಸಿ ಸಫಲನಾಗಿದ್ದ ನಕ್ಕೀರನ್ ಗೋಪಾಲ್ ಈ ಸಂಧಾನದಲ್ಲಿ ವಿಫಲನಾಗಿದ್ದರ ಕಾರಣವೇ ನಕ್ಸಲ್‌ವಾದಿಗಳೆಂದು ಹೇಳಿಕೊಳ್ಳುವ ತಮಿಳು ಪ್ರತ್ಯೇಕತಾವಾದಿಗಳು. ಇದು ಹಲವಾರು ಸಂಗತಿಗಳಿಂದ ಸಾಬೀತಾಗುತ್ತದೆ. ಮೊದಲನೆಯದಾಗಿ ಗೋಪಾಲ್ ಎರಡು ಭೇಟಿಗಳ ನಂತರ ಸ್ಪಷ್ಟವಾಗಿಯೇ ಹೇಳಿದ "ಈಗ ವೀರಪ್ಪನ್ ಮೊದಲಿನಂತಿಲ್ಲ, ಬದಲಾಗಿದ್ದಾನೆ. ಈಗ ಅವನು ತಮಿಳು ಪ್ರತ್ಯೇಕವಾದಿಗಳ ಹಿಡಿತದಲ್ಲಿದ್ದಾನೆ" ಎಂದು. ನೆಡುಮಾರನ್‌ರವರನ್ನು ಸಂಧಾನಕಾರರ ನ್ನಾಗಿ ಕಳುಹಿಸಬೇಕೆಂದು ಕೋರಬೇಕೆಂಬ ಸಲಹೆಯನ್ನು ನೀಡಿದ್ದ ಸ್ವತಃ ವೀರಪ್ಪನ್ ಎಂದು ರಾಜಕುಮಾರ್ ಹೇಳಿದ್ದಾರೆ. ಅಂದರೆ ವೀರಪ್ಪನ್‌ಗೆ ತನ್ನ ಜೊತೆಯಲ್ಲಿದ್ದ ಉಗ್ರಗಾಮಿ ಸಹಚರರನ್ನು ರಾಜಕುಮಾರ್ ಬಿಡುಗಡೆಯ ಬಗ್ಗೆ ಮನವೊಲಿಸಲಾಗಲಿಲ್ಲ. ಆದುದರಿಂದ ಅವರಮೇಲೆ ಪ್ರಭಾವ ಬೀರಲು ನೆಡುಮಾರನ್ ಮಾತ್ರ ಸಾಧ್ಯ ಎಂದು ಅವನನ್ನು ಸಂಧಾನಕ್ಕೆ ಕರೆಯಿಸಿಕೊಂಡ.

ನೆಡುಮಾರನ್ ಎಲ್‌ಟಿಟಿಇ ಸಹಚರ, ನೆಡುಮಾರನ್ ಹಾಗೂ ಕರುಣಾನಿಧಿಯವರ ನಡುವೆ ಒಳ್ಳೆಯ ಸಂಬಂಧವಿದೆ. ಇವರ ಜೊತೆಯಲ್ಲಿ ಬೆಂಗಳೂರಿನ ಮೂವರು ಡಾ.(?) ಭಾನು, ರಾಮಕುಮಾರ್(ಮಾಜಿ ಡಿಜಿಪಿ ರಾಮಲಿಂಗಂ ಪುತ್ರ) ಹಾಗೂ ಶಣ್ಮುಗಂ ಸುಂದರಂ ಮತ್ತು ತಮಿಳು ನಾಡಿನ ಕೊಳತ್ತೂರು ಮಣಿ ಎಂಬ ಒಂದು ಪ್ರತ್ಯೇಕ ಗುಂಪು ಬಿಡುಗಡೆಯ ವಿಷಯದಲ್ಲಿ ಪ್ರಮುಖ ಪಾತ್ರವಹಿಸಿದೆ ಎಂಬ ವಿಷಯ ಹೊರಬಿದ್ದಿದೆ. ಅದರಲ್ಲಿ ಕೊಳತ್ತೂರು ಮಣಿ ರಾಜೀವ್ ಗಾಂಧಿ ಕೊಲೆಗಾರನಾದ ಶಿವರಾಸನ್ ಮೊದಲಾದವರನ್ನು ಬೆಂಗಳೂರಿಗೆ ಕರೆತಂದು ಬಚ್ಚಿಟ್ಟವನು ಮತ್ತು ಅಷ್ಟು ದೊಡ್ಡ ಮಟ್ಟದಲ್ಲಿ ಎಲ್‌ಟಿಟಿಇ ಉಗ್ರಗಾಮಿಗಳ ಜೊತೆಗಾರ. ಭಾನುವೂ ಕೂಡ ಎಲ್‌ಟಿಟಿಇ ಸಹಚರಿ ಎಂಬುದು ಹೊರಬಿದ್ದಿದೆ. ಆದ್ದರಿಂದಾಗಿ ಅಪಹರಣಕಾರರು, ಅಪಹರಣಕಾರರ ಹಲವು ಶರತ್ತುಗಳ ಬಿಡುಗಡೆಯಲ್ಲಿ ಪ್ರಧಾನಪಾತ್ರ ವಹಿಸಿದವರೆಲ್ಲಾ ಭಯೋತ್ಪಾದಕ ಹಾಗೂ ಕೊಲೆಗಡುಕ ಎಲ್‌ಟಿಟಿಇ ಸಂಬಂಧವಿರುವ ಉಗ್ರಗಾಮಿಗಳು ಅಥವಾ ಸಹಚರರು.

ಇದು ಸ್ಪಷ್ಟವಾಗಿ ಕಾಣುತ್ತಿರುವಂತೆಯೇ ಇನ್ನೂ ಇತರ ಪಾತ್ರಧಾರಿಗಳ ವಿಷಯವನ್ನು ಮುಖ್ಯ ಎಲ್‌ಟಿಟಿಇಯ ರಾಜಕೀಯ ಬೆಂಬಲಿಗರ ಬಗ್ಗೆ ವಿಶ್ಲೇಷಿಸೋಣ. ಡಿ.ಎಂ.ಕೆ. ಮತ್ತು ಅದರ ನಾಯಕ ಕರುಣಾನಿಧಿಯವರು ಶ್ರೀಲಂಕಾದಲ್ಲಿ ಭಯೋತ್ಪಾದಕ ಚಟುವಟಿಕೆಗಳು ಆರಂಭವಾದ ದಿನಗಳಿಂದಲೂ ಎಲ್‌ಟಿಟಿಇ ಮತ್ತು ಇತರ ಉಗ್ರಗಾಮಿ ಸಂಘಟನೆಗಳ ಬೆಂಬಲಿಗರು ತಮಿಳುನಾಡಿನಲ್ಲಿ ಅವರಿಗೆ ಆಶ್ರಯಕೊಟ್ಟವರು. ಆಗಿನ ದಿನಗಳಲ್ಲಿ ಕೂಡ ಇವರು ಮುಖ್ಯಮಂತ್ರಿ. ಈ ಪ್ರಕರಣದಲ್ಲಿ ಮತ್ತೊಬ್ಬ ಪ್ರಮುಖ ರಾಜಕೀಯ ನಾಯಕರು, ಕರ್ನಾಟಕ ಮಾಧ್ಯಮಗಳ ಯಾವ ಚರ್ಚೆಯಲ್ಲಿಯೂ ಬಯಲಿಗೆ ಬಾರದವರು ದೇಶದ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡೀಸ್. ಅವರು ರಾಜ್ ಕುಮಾರ್ ಬಿಡುಗಡೆಗೆ ಕೆಲವು ದಿನಗಳ ಮುಂಚೆ ಚೆನ್ನೈಗೆ ಭೇಟಿ ನೀಡಿದ್ದು ನೆಡುಮಾರನ್ ಹಾಗೂ ಕರುಣಾನಿಧಿಯವರ ಜೊತೆ ಚರ್ಚಿಸಿದ್ದು ತಮಿಳುನಾಡಿನಲ್ಲಿ ಬಹಿರಂಗವಾಗಿರುವ ವಿಷಯ. ಅಷ್ಟೇ ಪ್ರಸಿದ್ಧವಾದದ್ದು ಅವರು ರಾಜೀವ್ ಗಾಂಧಿಯ ಕೊಲೆಗಾರರ ಬಿಡುಗಡೆಗಾಗಿ ಶತಪ್ರಯತ್ನ ಮಾಡಿದ ಹಾಗೂ ಈ ಪ್ರಯತ್ನದ ಸಮಿತಿಯೊಂದರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ವಿಷಯ. ಅದೇ ಸಮಯದಲ್ಲಿ ಅಡ್ಮಿರಲ್ ವಿಷ್ಣು ಭಾಗವತ್‌ರವರು ಹೊರಗೆಡವಿದಂತೆ ಭಾರತ-ಶ್ರೀಲಂಕಾ ನಡುವಿನ ಕಡಲಲ್ಲಿ ಸಿಕ್ಕ ಬಿದ್ದ ಹಡಗುಗಳನ್ನು ತಪಾಸಣೆ ಮಾಡುವ ವಿಷಯದಲ್ಲಿ ಜಾರ್ಜ್ ಫರ್ನಾಂಡೀಸ್ ರವರೇ ಮಧ್ಯ ಪ್ರವೇಶಿಸದ ವಿಷಯ. ಹೀಗಾಗಿ ರಕ್ಷಣಾ ಸಚಿವರಾಗಿ ಇಂದೂ ಕೂಡ ಎಲ್‌ಟಿಟಿಇ ಯ ಕಾರ್ಯಾಚರಣೆಗಳಲ್ಲಿ ಮಹತ್ವದ ಪಾತ್ರವಹಿಸುವ ಸ್ಥಿತಿಯಲ್ಲಿರುವ ಜಾರ್ಜ್ ಫರ್ನಾಂಡೀಸ್‌ರು ಇನ್ನು ಈ ಅಪಹರಣ ಪ್ರಕರಣವನ್ನು ಮತ್ತೂ ಉದ್ದಕ್ಕೆ ಎಳೆಯಬೇಡಿ ಎಂದು ಆದೇಶಿಸಿದ ಮೇಲೆಯೇ ಈ ಪ್ರಕರಣ ಕೊನೆಗೊಂಡಿತೆ? ಎಂಬುದು ನಿಷ್ಪಕ್ಷಪಾತವಾದ ತನಿಖೆಗೆ ಒಳಗಾಗಬೇಕಾಗಿರುವ ವಿಷಯ.

ಕರ್ನಾಟಕ-ತಮಿಳು ನಾಡುಗಳ ವಿಶೇಷ ಕಾರ್ಯಾಚರಣೆ ಪಡೆಗಳೆರಡೂ ಸೇರಿ ವೀರಪ್ಪನ್‌ನ ಸಹಚರರನ್ನು ಹಿಡಿದು ಬಂಧಿಸಿ ಅಥವಾ ಕಾರ್ಯಾಚರಣೆಗಳಲ್ಲಿ ಗುಂಡಿಗೆ ಬಲಿಯಾಗಿ ಕೇವಲ ಏಳಕ್ಕೆ ಮಾತ್ರ ಇಳಿಸಿ ಅವನನ್ನು ನಿಶ್ಶಕ್ತನನ್ನಾಗಿ ಮಾಡಿದ್ದರು. ಅವನ ಬಲಗೈ ಭಂಟನಾಗಿದ್ದ ತಮ್ಮ ಅರ್ಜುನ್ ಮೊದಲಾದವರನ್ನು ವೀರಪ್ಪನ್ ಕಳೆದುಕೊಂಡಿದ್ದು. ಇಂತಹ ಸಂದರ್ಭದಲ್ಲಿ ಅವನ ಜೊತೆಗೆ ಸೇರಿಕೊಂಡ ತಮಿಳು ಉಗ್ರಗಾಮಿಗಳು ಎಲ್ಲಿಂದಬಂದರು? ತಮಿಳು ನಾಡಿನ ಕಾರ್ಯಾಚರಣೆ ಪಡೆ ಆಗ ಏನು ಮಾಡುತ್ತಿತ್ತು? ಇದರಲ್ಲಿ ತಮಿಳುನಾಡು ಸರ್ಕಾರದ ರಾಜಕೀಯ ಧುರೀಣರ ಪಾತ್ರವೇನು? ಎಂಬುದು ತನಿಖೆಗೆ ಒಳಗಾಗಬೇಕು.

ಈ ಉಗ್ರಗಾಮಿಗಳ ಜೊತೆಗೆ ರಾಮಲಿಂಗಂ ಮಗನಸಂಬಂಧವೇನು? ಯಾವ ಕಾಲದಿಂದ? ರಾಮಲಿಂಗಂ ಬಹಳ ಕಾಲ ಬೆಂಗಳೂರಿನ ಪೋಲೀಸ್ ಕಮಿಷನರ್ ಆಗಿದ್ದು ನಂತರ ಕರ್ನಾಟಕದ ಡಿಜಿಪಿಯಾಗಿದ್ದವರು. ಅವರ ಅಧಿಕಾರದ ಕಾಲಕ್ಕೂ ಈಗಿನ ಈ ಸಂಬಂಧಗಳಿಗೂ ಏನಾದರೂ ಸಂಬಂಧವಿದೆಯೇ? ಹಾಗೆಯೆ ನೆಡುಮಾರನ್ ನವೆಂಬರ್ 17 ರಂದು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದ ಟಿ.ಶ್ರೀನಿವಾಸಲುರವರು ಉತ್ತಮ ಸಲಹೆ, ಮಾರ್ಗದರ್ಶನ ನೀಡಿದರೆಂದು ಪ್ರಶಂಸೆಗೆ ಪಾತ್ರರಾದರು. ಇವರ ಪಾತ್ರವೇನು? ಎಲ್‌ಟಿಟಿಇ ಸಹಚರರಜೊತೆ ಇವರ ಸಂಬಂಧವೇನು? ಎಂಬದು ಕೂಡ ತೀವ್ರ ತನಿಖೆಗೆ ಒಳಗಾಗಬೇಕಾದ ವಿಷಯ.

ಇವುಗಳ ಜೊತೆಗೆ ಮತ್ತೊಂದು ಪ್ರಮುಖ ವಿಷಯವೆಂದರೆ ಡಾ||(?) ಭಾನು, ರಾಮಲಿಂಗ ರವರ ಮಗ ರಾಮಕುಮಾರ್ ವೀರಪ್ಪನ್ ಹಿಡಿತದಲ್ಲಿರುವ ಕಾಡಿನ ಪ್ರದೇಶಗಳಲ್ಲಿ ಗ್ರಾನೈಟ್ ಗಣಿಗಾರಿಕೆ ನಡೆಸುತ್ತಿರುವವರು. ಇವರಿಗೆ ಗ್ರಾನೈಟ್ ಗಣಿಗಾರಿಕೆಗೆ ಅವಕಾಶ ನೀಡುವಲ್ಲಿ ವೀರಪ್ಪನ್ ಪಾತ್ರವೇನು? ಎಲ್‌ಟಿಟಿಇ ಸಹಚರಿ ಡಾ.(?)ಭಾನು ಗಣಿಗಾರಿಕೆಗೆ ಈ ಪ್ರದೇಶದಲ್ಲಿಯೇ ತೊಡಗಿದ್ದೇಕೆ? ವೀರಪ್ಪನ್‌ನ ಮೇಲೆ ಇವರು ಪ್ರಭಾವ ಬೀರಿದ್ದಾರೆಂದರೆ ಈ ಪ್ರಭಾವಕ್ಕೆ ಕಾರಣವೇನು? ಇದೇ ಪ್ರದೇಶದಲ್ಲಿಯೇ ರಾಜಕುಮಾರ್‌ರವರ ಕೊನೆಯ ಮಗ ಪುನೀತ್ ರಾಜಕುಮಾರ್ ಗಣಿಗಾರಿಕೆಗೆ ತೊಡಗಿದ್ದಾನೆಂಬ ವರದಿಗಳಿವೆ. ಪುನೀತ್ ಹಾಗೂ ವೀರಪ್ಪನ್, ಪುನೀತ್ ಹಾಗೂ ಭಾನು, ರಾಮಕುಮಾರ್‌ರವರ ನಡುವಿನ ಸಂಬಂಧವೇನು? ಇವೂ ಕೂಡ ಬಹಿರಂಗಗೊಳ್ಳಬೇಕಾಗಿರುವ ವಿಷಯಗಳು.

ಈ ಎಲ್ಲಾ ತನಿಖೆಗಳನ್ನು ಎರಡು ರಾಜ್ಯಗಳ ಸರ್ಕಾರಗಳು ತ್ವರೆಯಿಂದ ಕೈಗೊಳ್ಳಬೇಕು. ದೇಶದ ಹಾಗೂ ರಾಜ್ಯಗಳ ಭದ್ರತೆಗೆ ಕ್ರಮಗಳನ್ನು ಕೈಗೊಳ್ಳಬೇಕು.

ಎಲ್ಲಕ್ಕಿಂತ ಮೊದಲಾಗಿ ಯಾವ ಸಡಿಲತೆಗೂ ಅವಕಾಶವೀಯದೆ ವೀರಪ್ಪನ್ ಹಾಗೂ ಸಹಚರರ ಮೇಲೆ ತಕ್ಷಣ ಕಾರ್ಯಾಚರಣೆ ಆರಂಭಿಸಬೇಕು ಹಾಗೂ ಕಾನೂನಿನಂತೆ ಕ್ರಮ ಕೈಗೊಳ್ಳಬೇಕು. ○

ಬಂಡವಾಳಶಾಹಿ ಸಮಾಜದ ಕುಷ್ಠರೋಗ - ಕಾಡುಗಳ್ಳ ವೀರಪ್ಪನ್

ಜೂನ್ 6, 1993 ರ 'ಐಕ್ಯರಂಗ' ಸಂಚಿಕೆಯಿಂದ

ಕಾಡುಗಳ್ಳ ವೀರಪನ್‌ನ್ನು ಇನ್ನೂ ಕರ್ನಾಟಕ ಸರ್ಕಾರ ಬಂಧಿಸಲಾಗಿಲ್ಲ. ಕರ್ನಾಟಕ, ತಮಿಳುನಾಡು, ಆಂಧ್ರ ಸರ್ಕಾರಗಳು ಸೇರಿದರೂ ಇನ್ನೂ ಬಂದಿಸಲಾಗಿಲ್ಲ. ಅಷ್ಟು ಮಾತ್ರವಲ್ಲ ಐವತ್ತಮೂರು ಪೋಲಿಸ್ ಸಿಬ್ಬಂದಿಯನ್ನು ಬಲಿತೆಗೆದುಕೊಂಡಿದ್ದಾನೆ.

ವೀರಪ್ಪನ್‌ನನ್ನು ಬಂಧಿಸುವ ವೀರಾವೇಶದ ಮಾತುಗಳು ಈಗ್ಗೆ ಹಲವು ಬಾರಿ ಕೇಳಿಬಂದಿದೆ. ವಿರೇಂದ್ರ ಪಾಟೀಲ ಸರಕಾರದಿಂದ ವೀರಪ್ಪ ಮೋಯಿಲಿಯವರೆಗೆ ಈ ಬಗ್ಗೆ ಸರ್ಕಾರದ ಆಟಾಟೋಪಗಳಿಗೆ ಲೆಕ್ಕವೇ ಇಲ್ಲ. "ಉತ್ತರನ ಪೌರುಷ ಒಲೆಯ ಮುಂದೆ" ಎಂಬಂತೆ ಈಗ ರೋಷದ ಮಾತುಗಳೆಲ್ಲಾ ಮುಗಿದ ಮೇಲೆ ಕೇಂದ್ರ ಸರ್ಕಾರದ ಗಡಿ ಭದ್ರತಾ ಪಡೆಯ(ಬಿಎಸ್‌ಎಫ್) ಸಹಾಯ ಕೋರಲಾಗಿದೆ. ಈಗಾಗಲೇ ಈ ಪಡೆಗಳು ಬಂದಿಳಿದಿವೆ.

ವೀರಪ್ಪನ್ ಫೆನಾಮೆನನ್ (ಪ್ರಕರಣ) ಭಾರತಕ್ಕೆ ಹೊಸದಲ್ಲ. ಕಾನೂನು, ಸುವ್ಯವಸ್ಥೆಯ ಅಡಿಗಲ್ಲಿನ ಮೇಲೆ ಕಟ್ಟಿದಂತಹ ಸಮಾಜ, ಕಾನೂನಿನ ಕಣ್ಣಿನಲ್ಲಿ ಎಲ್ಲರೂ ಒಂದೇ ಎನ್ನುವ ಸಮಾಜ ಎಂಬ ಹೆಗ್ಗಳಿಕೆಯನ್ನು ದಿನ ಬೆಳಗಾದರೆ ತುತ್ತೂರಿಯೂದುವ ಪತ್ರಿಕೆಗಳು, ಇತರ ಮಾಧ್ಯಮಗಳು ಇದೇ ನಮ್ಮ ಜೀವನತತ್ವ ಎನ್ನುವ ಆಡಳಿತಗಾರರು ಇವರುಗಳ ನಡುವೆಯೇ ಹಲವಾರು ವೀರಪ್ಪನ್‌ಗಳು ಮೊಳಕೆಯೊಡೆದು ಚಿಗುರಿ ಆಳುವ ವರ್ಗದ ರಾಜಕಾರಣಿಗಳಿಗೆ ಸುಖದ ಸುಪ್ಪತಿಗೆಯ ಏಣಿಯಾಗುತ್ತಾರೆ. ಅಧಿಕಾರಿಗಳ ನೆಂಟರಾಗುತ್ತಾರೆ. ಪತ್ರಿಕೆಗಳ ಮಾರಾಟ ಹೆಚ್ಚು ಮಾಡುವ ಗ್ರಾಸವಾಗುತ್ತಾರೆ(ಈಗಂತೂ ತಮಿಳಿನ 'ನಕ್ಕೀರನ್' ಪತ್ರಿಕೆ ಹಾಗೂ ಇಂಗ್ಲಿಷಿನ 'ಇಂಡಿಯಾ ಟುಡೆ'ಪತ್ರಿಕೆಗಳ ನಡುವೆ ಒಂದು ಸ್ಪರ್ಧೆಯೇ ನಡೆದಿದೆ. ವೀರಪ್ಪನ್‌ಗಳ ಸಂದರ್ಶನ ಪಡೆದಿದ್ದು ನಾನು ಮೊದಲು, ತಾನು ಮೊದಲು ಎಂದು)

ಕಾಡುಗಳ ಕಂಟ್ರಾಕ್ಟರುಗಳೇ ಕಾಡುಗಳ್ಳರಾಗುವುದು, ಕಾಡಿನ ಸಂರಕ್ಷಣಾಧಿಕಾರಿಗಳೇ ಕಾಡನ್ನು ಮೇಯುವುದು ಅದರಿಂದಲೇ ಅರಣ್ಯ ಇಲಾಖೆಯ ಫಲವತ್ತಾದ ಇಲಾಖೆಯೆಂದು ಹೆಸರು ಪಡೆದಿರುವುದು ಮಂತ್ರಿಗಳ ನಡುವೆ ಲೋಕೋಪಯೋಗಿ ಇಲಾಖೆಯಾಗದಿದ್ದರೆ ಅರಣ್ಯ ಇಲಾಖೆಯನ್ನಾದರೂ ಪಡೆಯಲು ತುರುಸಿನ ಸ್ಪರ್ಧೆ ನಡೆಯುವುದು, ಇವು ಯಾವುದೂ ಗುಟ್ಟಲ್ಲ.

ಇದೇ ರೀತಿ ಕಡಲ ತಡಿಯ ಅಸಂಖ್ಯ ಜಾಗಗಳಲ್ಲಿ ಸ್ಮಗ್ಲರ್‌ಗಳ ಗುಂಪು ಗುಂಪುಗಳೇ ನಿರಂತರ ಕಾರ್ಯಾಚರಣೆಯಲ್ಲಿ ತೊಡಗುವುದೂ ಹೊಸತಲ್ಲ. ಮಂಗಳೂರು, ಭಟ್ಕಳ, ಕಾರವಾರಗಳ ಸಣ್ಣ ಗುಂಪುಗಳು ಇತ್ತೀಚಿಗೆ ಅಲ್ಲಿ ನಡೆದ ಕೋಮುಗಲಭೆಗಳನ್ನು ನಡುವಿನ ವೈರ ತೀರಿಸಿಕೊಳ್ಳಲು ಬಳಸಿಕೊಂಡಿದ್ದು ಹೊಸತಲ್ಲ. ಈ ಗುಂಪು ಬಡಿದಾಟದಲ್ಲಿ ಹತ್ತಾರು ಸಾಮಾನ್ಯ ಜನರು ಕೋಮು ಗಲಭೆಗಳ ಹೆಸರಲ್ಲಿ ಆಹುತಿಯಾಗುತ್ತಿರುವಾಗ ಈ ಕಳ್ಳರ ಜೊತೆ ಸಂಬಂಧ ಬೆಸೆದ ಪೋಲೀಸ್-ಬಂಡವಾಳಶಾಹಿ ರಾಜಕಾರಣಿಗಳು ಮೂಕಪ್ರೇಕ್ಷಕರಂತೆ ನಿಂತದ್ದೂ ಹೊಸತಲ್ಲ. ಇದೆಲ್ಲದರ ಶಿಖರ ಪ್ರಾಯವಾಗಿ ಮೆಮನ್ ಗ್ಯಾಂಗ್‌ನಿಂದ ಬಾಂಬೆಯಲ್ಲಿ ಸ್ಫೋಟಗಳು.

ಇವು ದಿನನಿತ್ಯ ನಡೆಯುತ್ತಿದ್ದರೂ, ಬೆಳೆಯುತ್ತಿದ್ದರೂ ಆ ಕಡೆಗೆ ಕಣ್ಣು ಹಾಯಿಸದ ಪತ್ರಿಕೆಗಳು ಅದರ ಅಂತರ್‌ಸಂಬಂಧಗಳನ್ನು ತೋರಗೆಡುವ ಸಮಾಜದ ಈ ಕುಷ್ಠ ರೋಗಕ್ಕೆ ಮದ್ದನ್ನರೆಯಲು ಪ್ರಯತ್ನಿಸದ ಪತ್ರಿಕೆಗಳು ಹತ್ತಾರು ವೀರಪನ್‌ಗಳ ನಡುವೆ ಒಬ್ಬ ವೀರಪ್ಪನ್ ಪ್ರಕರಣ ಸ್ಫೋಟವಾದಾಗ ಅದನ್ನು ಹಿಂಜಿ ಹಿಂಜಿ ರೋಚಕವಾಗಿ ಬಣ್ಣಿಸಿ, ಅವರುಗಳನ್ನು ಹೀರೋ ಆಗಿ ಮೆರೆಸಿಅದರ ಬಿಸಿಯಲ್ಲಿ ತಮ್ಮ ಪ್ರಸಾರ ಹೆಚ್ಚಳದ ಬೇಳೆ ಬೇಯಿಸಿಕೊಳ್ಳುತ್ತವೆ.

ಇದೇ ಮಾಫಿಯಾ ಗುಂಪುಗಳು ಹೂಡಿದ ಕಳ್ಳ ಹಣದಿಂದ 'ಗಾಡ್‌ಫಾದರ್', 'ನಾಯಗನ್', 'ವೀರಪ್ಪನ್' ಚಿತ್ರಗಳು ತಯಾರಾಗಿ ಕಾದಂಬರಿಗಳು ಬರೆಯಲ್ಪಟ್ಟು ಜನರನ್ನು ಮರುಳು ಮಾಡಿ ಹಣದ ಸೂರೆ ಮಾಡುತ್ತವೆ. ಈ ವೀರಪ್ಪನ್‌ನಂತಹವರನ್ನು ದೇವರೆ ಎಂಬಂತೆ ಚಿತ್ತ ಭ್ರಮೆಯನ್ನುಂಟು ಮಾಡುತ್ತವೆ. ಈ ಭ್ರಮೆಯ ನೆರಳಿನ ಕತ್ತಲೆಯಲ್ಲಿ ಹತ್ತಾರು ವೀರಪ್ಪನ್‌ಗಳು ಕಾನೂನು ಜಾಲದಿಂದ ಪಾರಾಗುತ್ತಾರೆ.ಮತ್ತಷ್ಟು ಮರಿ ವೀರಪ್ಪನ್‌ಗಳು ಬೆಳೆಯತೊಡಗುತ್ತಾರೆ. ಹೀಗೆ ಈ ವೀರಪ್ಪನ್ ಬಂಡವಾಳಶಾಹಿ ಸಮಾಜದ ವ್ರಣ, ಕೀವು ಬಸಿಯುವ ಹುಣ್ಣು, ಕುಷ್ಠರೋಗ ಸಾಂಕ್ರಾಮಿಕರೋಗ. ಇದಕ್ಕೆ ಮದ್ದು ಈ ಪ್ರಕರಣಗಳ ಹುಟ್ಟು ಬೆಳವಣಿಗೆಯ ಬಗ್ಗೆ ಜನರ ತಿಳುವಳಿಕೆಯಿಂದ ಅದನ್ನು ನಾಶ ಮಾಡಲು ಜನರ ಒತ್ತಾಯದಿಂದ ಮಾತ್ರ ಸಾಧ್ಯ.

ಈ ಒಬ್ಬ ವೀರಪ್ಪನನ್ನು ಹಿಡಿಯುವ ಒತ್ತಾಯವನ್ನು ಜನರು ಮಾಡಬೇಕು. ಈ ವೀರಪ್ಪನ್ನೊಂದಿಗೆ ನೀಚ ಸಂಬಂಧ ಹೊಂದಿದ ಬಂಡವಾಳಶಾಹಿ ರಾಜಕಾರಣಿಗಳು, ಅಧಿಕಾರಿಗಳ ಸಂಬಂಧ ಬಯಲಾಗಬೇಕು. ವೀರಪ್ಪನ್‌ನ್ನು ಬೆಳೆಸಿದವರಿಗೆ ಶಿಕ್ಷೆ ದೊರಕಬೇಕು. ಅದರಜೊತೆ ಜೊತೆಯಲ್ಲಿಯೇ ಈಗಲೂ ಪಶ್ಚಿಮ ಘಟ್ಟಗಳ ಕರಾವಳಿಯ ಇನ್ನಿತರ ಕಡೆಗಳಲ್ಲಿನ ಸಮಾಜದ್ರೋಹಿಗಳತ್ತ ಸಮಾಜದ ಕಣ್ಣು ತಿರುಗಬೇಕು. ಆಗ ಮಾತ್ರ ವೀರಪ್ಪನ್‌ಗಳನ್ನು ಬಲಿ ಹಾಕಲು ಸಾಧ್ಯ. ಸಮಾಜ ಈ ಕುಷ್ಠರೋಗದಿಂದ ಪಾರಾಗಲು ಸಾಧ್ಯ. ○

ವಿಶ್ವಬ್ಯಾಂಕ್ ಅಧ್ಯಕ್ಷ ವಾಪಸ್ಸು ಹೋಗು!

ತಿಮಿಂಗಲಗಳಿಗಿಂತ ಕೂಪಮಂಡೂಕಗಳೇ ಉತ್ತಮ

ಜಿ.ವಿ. ಶ್ರೀರಾಮರೆಡ್ಡಿ

ಕಳೆದ ಎರಡು ತಿಂಗಳ ಹಿಂದೆ ಭಾರತಕ್ಕೆ ಭೇಟಿ ಕೊಟ್ಟಿದ್ದ ರಷ್ಯಾದ ಅಧ್ಯಕ್ಷ ಪುಟಿನ್‌ಗೂ ಸಿಕ್ಕದಷ್ಟು ವ್ಯಾಪಕ ಪ್ರಚಾರವನ್ನು ಪಡೆದ ವಿಶ್ವಬ್ಯಾಂಕಿನ ಅಧ್ಯಕ್ಷ ಜೇಮ್ಸ್ ಡಿ ವೂಫೆನ್‌ಸನ್ ಅವರು ನವೆಂಬರ್ 9 ರಂದು ಬೆಂಗಳೂರಿನಲ್ಲಿ ರಾಜ್ಯದ ಮುಖ್ಯಮಂತ್ರಿಗಳೊಂದಿಗೆ ಜಂಟೀ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ ವಿಶ್ವಬ್ಯಾಂಕ್ ತೃತೀಯ ರಾಷ್ಟ್ರಗಳ ಅಭಿವೃದ್ಧಿಗಿಂತ ಹೆಚ್ಚಾಗಿ ಜಾಗತೀಕರಣ ಮತ್ತು ಅಂತರರಾಷ್ಟ್ರೀಯ ವ್ಯಾಪಾರದ ಉತ್ತೇಜನಕ್ಕೆ ಹೆಚ್ಚು ಒತ್ತು ಕೊಡುತ್ತಿದೆ ಎಂಬ ಆರೋಪದ ಬಗ್ಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಬಹಳ ಖಾರವಾಗೇ ಉತ್ತರಿಸಿದರು. ಜಾಗತೀಕರಣದ ಬಗ್ಗೆ ಇಂತಹ ಟೀಕೆಗಳನ್ನು ಮಾಡುವವರು 'ಕೂಪಮಂಡೂಕಗಳೆಂದು ವ್ಯಾಖ್ಯಾನ ಮಾಡಿದರು. ಮಂಡೂಕವೆಂದರೆ ಅದು ಚಿಕ್ಕನೀರಿನ ಹೊಂಡದಲ್ಲಿದ್ದುಕೊಂಡು ಪ್ರಪಂಚ ಎಂದರೆ ಇಷ್ಟೇ ಎಂಬ ಅಜ್ಞಾನವನ್ನು ಪ್ರದರ್ಶಿಸುತ್ತದೆ ಎಂದು ಎಲ್ಲರ ಅಭಿಪ್ರಾಯ. ಅದೇ ರೀತಿಯಲ್ಲಿ ಅಜ್ಞಾನಿಗಳನ್ನು ಸಾಮಾನ್ಯವಾಗಿ ಮಂಡೂಕಕ್ಕೆ ಹೋಲಿಸುತ್ತಾರೆ. ಆದರೆ ಇಡೀ ಜಗತ್ತಿನ ತೃತೀಯ ಮತ್ತು ಬಡ ದೇಶಗಳನ್ನು ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ಹೆಸರಿನಲ್ಲಿ ಸಾರಾಸಗಟಾಗಿ ನುಂಗಲು ಎಲ್ಲಾ ರೀತಿಯಾದಂತಹ ಭ್ರಮೆಗಳ ಬಲೆಗಳನ್ನು ಹಾಕುತ್ತಿರುವ ತಿಮಿಂಗಲಗಳು ಇಡೀ ಮಾನವ ಜನಾಂಗದ, ಅದರಲ್ಲೂ ಮುಖ್ಯವಾಗಿ ತೃತೀಯ ದೇಶಗಳನ್ನು ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಪ್ರಥಮ ಶತ್ರುಗಳಾಗಿದ್ದಾರೆ.

ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳವನ್ನು ಜಾಗತೀಕರಣಗೊಳಿಸಿ ಯಾವ ದೇಶದ ಯಾವ ರಂಗದಲ್ಲಿ ಹೆಚ್ಚಿನ ಲಾಭವನ್ನು ಪಡೆಯಲು ಸಾಧ್ಯವಾಗುತ್ತದೋ ಅದರಲ್ಲಿ ಮಾತ್ರ ಬಂಡವಾಳ ಹೂಡಿ ಹೆಚ್ಚಿನ ಲಾಭವನ್ನು ಪಡೆಯುವ ಉದ್ದೇಶದಿಂದಲೇ ಜಾಗತೀಕರಣವನ್ನು ಜಾರಿಗೆ ತಂದಿದೆ. ಇದರ ಮುಖಾಂತರ ತೃತೀಯ ಜಗತ್ತಿನ ದೇಶಗಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಸಿಕ್ಕ ಶ್ರಮಶಕ್ತಿಯನ್ನು ಮತ್ತು ಕಚ್ಚಾವಸ್ತುಗಳನ್ನು ಉಪಯೋಗಿಸಿ ಈ ದೇಶಗಳ ಸಂಪತ್ತನ್ನು ಲೂಟಿ ಹೊಡೆಯುವುದು ಒಂದು ಉದ್ದೇಶವಾದರೆ, ಈ ದೇಶಗಳಲ್ಲಿ ಒಳ್ಳೆಯ ಲಾಭ ಗಳಿಸಲು ಸಾಧ್ಯವಿರುವ ಎಲ್ಲಾ ರಂಗಗಳಲ್ಲಿ ಬಂಡವಾಳ ಹೂಡಿ ಲಾಭವನ್ನು ಕೊಳ್ಳೆ ಹೊಡೆಯುವುದೇ ಜಾಗತೀಕರಣದ ಮುಖ್ಯ ಉದ್ದೇಶ. ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ದಲ್ಲಾಳಿ ಕೆಲಸವನ್ನು ಮಾಡುವುದೇ ವಿಶ್ವಬ್ಯಾಂಕ್‌ನ ಪ್ರಮುಖ ಕರ್ತವ್ಯ. 1991 ರಿಂದ ಜಾಗತೀಕರಣ ಪ್ರಾರಂಭವಾದ ಮೇಲೆ ನಮ್ಮ ದೇಶಕ್ಕೆ ಹೆಚ್ಚು ವಿದೇಶಿ ಬಂಡವಾಳ ಹರಿದು ಬರುತ್ತದೆ. ಈ ದೇಶದಲ್ಲಿ ಸ್ವರ್ಗವೇ ಸೃಷ್ಟಿಯಾಗುತ್ತದೆ ಎಂದು ಹೇಳಿ ಭ್ರಮೆ ಹುಟ್ಟಿಸಲಾಗಿತ್ತು. ಆದರೆ ಕಳೆದ 10 ವರ್ಷಗಳಲ್ಲಿ ಈ ದೇಶಕ್ಕೆ ಹರಿದು ಬಂದಿರುವ ಬಂಡವಾಳವೆಷ್ಟು? ಅದರಲ್ಲಿ ಯಾವ ಯಾವ ರಂಗದಲ್ಲಿ ಎಷ್ಟು ಹಣವನ್ನು ತೊಡಗಿಸಿದ್ದಾರೆಂಬುದರ ಅಂಶಗಳನ್ನು ನೋಡಿದರೆ ಇವರ ನಿಜ ಸ್ವರೂಪ ಗೊತ್ತಾಗುತ್ತದೆ. ಈ ಹತ್ತು ವರ್ಷಗಳಲ್ಲಿ ಭಾರತಕ್ಕೆ ಬಂದಿರುವ ಒಟ್ಟು ವಿದೇಶಿ ಬಂಡವಾಳದಲ್ಲಿ ಶೇಕಡ 82.1 ಭಾಗ ಶೇರು ಮಾರುಕಟ್ಟೆ, ಕನ್ಸೂಮರ್ ಮಾರುಕಟ್ಟೆ ಮತ್ತು ಸಾಫ್ಟ್‌ವೇರ್ ಇಂಡಸ್ಟ್ರಿಗಳಿಗೆ ಬಂದಿದೆ. ಆದರೆ ಭಾರತ ದೇಶದಲ್ಲೇ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಲು ಮತ್ತು ಉದ್ಯೋಗವಕಾಶಗಳನ್ನು ಹೆಚ್ಚಿಸುವ ಉತ್ಪಾದನೆ ಆಧಾರಿತ ಉದ್ಯಮಗಳಿಗೆ ಯಾವುದೇ ಬಂಡವಾಳವನ್ನು ಹಾಕಿಲ್ಲವೆಂಬುದು ಬಹಳ ಸ್ಪಷ್ಟ. ಇದರಿಂದಾಗಿ ಜಾಗತೀಕರಣದ ಹೆಸರನಲ್ಲಿ ಲಾಭ ಮಾಡುವ ಉದ್ದೇಶವಲ್ಲದೆ ಬೇರೇನಿದೆ ಎಂಬುದು ಕೂಪ ಮಂಡೂಕಗಳಿಗೆ ಅರ್ಥವಾಗುತ್ತದೆ. 1993 ರಲ್ಲಿ ಲ್ಯಾಟಿನ್ ಅಮೆರಿಕಾ ದೇಶಗಳಲ್ಲಿ ಅದರಲ್ಲೂ ಮುಖ್ಯವಾಗಿ ಮೆಕ್ಸಿಕೋದಲ್ಲಿ ಹಾಕಿದ್ದ ಎಲ್ಲಾ ಬಂಡವಾಳವನ್ನು ರಾತ್ರೋರಾತ್ರಿ ಕಳ್ಳರ ರೀತಿ ಹಿಂದಕ್ಕೆ ಪಡೆದಿದ್ದು ಯಾಕೆ ಎಂದು ಈ ವಿಶ್ವ ಬ್ಯಾಂಕ್ ಅಧ್ಯಕ್ಷ ಉತ್ತರ ಕೊಡಬಲ್ಲರೇ? 1996 ರಲ್ಲಿ ಪೂರ್ವ ಏಶಿಯಾ ದೇಶಗಳಲ್ಲಿ ಉಂಟಾದ ಮತ್ತು ಈಗಲೂ ಮುಂದುವರಿಯುತ್ತಿರುವ ತೀವ್ರ ರೀತಿಯ ಆರ್ಥಿಕ ಬಿಕ್ಕಟ್ಟಿಗೆ ಕಾರಣ ಏನೆಂದು ಈ ತಿಮಿಂಗಲ ಉತ್ತರಿಸಬಲ್ಲದೆ? ಹಾಗೆಯೇ ಸೋಮಾಲಿಯ, ರುವಾಂಡ ಮತ್ತು ಇತರೆ ಆಫ್ರಿಕನ್ ದೇಶಗಳ ಅಧೋಗತಿಗೆ ಯಾರು ಕಾರಣರೆಂದು ಈ ತೋಳಗಳು ಹೇಳಬಲ್ಲವೇ? ಅಂತರ್ರಾಷ್ಟ್ರೀಯ ಹಣಕಾಸಿನ ಲಾಭಕೋರ ದುರಾಸೆಗೆ ಇಂದು ಜಗತ್ತಿನಾದ್ಯಂತ ಮಿಲಿಯಗಟ್ಟಲೆ ಜನರು ಬಲಿಯಾಗುತ್ತಿರುವುದು ಇವರ ನೀಲಿ ಕಣ್ಣುಗಳಿಗೆ ಗೋಚರಿಸಲಿಲ್ಲವೆ. ಇದಕ್ಕಿಂತ ಹೆಚ್ಚಾಗಿ ತೃತೀಯ ಜಗತ್ತಿನ ದೇಶಗಳ ಹಣಕಾಸು ಸಾರ್ವಭೌಮತ್ವವನ್ನು ನುಚ್ಚುನೂರು ಮಾಡುತ್ತಿರುವ ಈ ತಿಮಿಂಗಲಗಳು ತೃತೀಯ ಜಗತ್ತಿನ ಎಲ್ಲಾ ದೇಶಗಳನ್ನು ಸಾಲದ ಕೂಪಕ್ಕೆ ತಳ್ಳುತ್ತಿರುವುದು ಯಾವ ಕಾರಣಕ್ಕಾಗಿ?

ಎರಡು ದಿವಸಗಳ ಕಾಲ ಕರ್ನಾಟಕದಲ್ಲಿ ಪ್ರವಾಸ ಮಾಡಿ ಕಡೆಯಲ್ಲಿ ಕೆರೆ, ನೀರಾವರಿ, ಕುಡಿಯುವ ನೀರು ಸರಬರಾಜು, ಜಲಾನಯನ ಪ್ರದೇಶಗಳ ನಿರ್ವಹಣೆ, ಹೆದ್ದಾರಿ ನಿರ್ಮಾಣ ಸೇರಿದಂತೆ ಹಲವಾರು ಅಭಿವೃದ್ಧಿಕಾರ್ಯಗಳಿಗೆ ಮುಂದಿನ 7 ವರ್ಷಗಳಲ್ಲಿ 12 ಸಾವಿರ ಕೋಟಿ ರೂ.ಗಳನ್ನುಸಾಲವಾಗಿ ನೀಡಲು ವಿಶ್ವಬ್ಯಾಂಕ್ ಅಧ್ಯಕ್ಷರ ಹೇಳಿಕೆ "ಬೆಟ್ಟ ಅಗೆದು ಇಲಿಯನ್ನು ಹಿಡಿದಂತಾಗಿದೆ". 7 ವರ್ಷಗಳಲ್ಲಿ 12 ಸಾವಿರ ಕೋಟಿ ರೂ.ಗಳ ಸಾಲ! ಇದರಲ್ಲಿ ಕರ್ನಾಟಕ ಸರ್ಕಾರ ಯಾವ ಅಭಿವೃದ್ಧಿಯನ್ನು ಸಾಧಿಸುತ್ತದೆ ಎಂದು ನೋಡಬೇಕಾಗಿದೆ. ಅಂತರ್ರಾಷ್ಟ್ರೀಯ ಹಣಕಾಸಿನ ನಿಜವಾದ ಕ್ರೂರ ರೂಪವನ್ನು ಮರೆ ಮಾಚಲು ಬಡತನ ನಿರ್ಮೂಲನದ ಹೆಸರಿನಲ್ಲಿ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಸಾಲ ನೀಡುತ್ತೇವೆ ಮತ್ತು ಸಹಾಯ ಮಾಡುತ್ತೇವೆಂಬ ಭ್ರಮೆಯನ್ನು ಹುಟ್ಟಿಸುತ್ತಿವೆ. ಮೀನು ಹಿಡಿಯುವ ಬೇಟೆಗಾರರು ತಮ್ಮ ಗಾಳಕ್ಕೆ ಎರೆಹುಳವನ್ನು ಸಿಕ್ಕಿಸಿರುತ್ತಾರೆ. ಆ ಹುಳುವಿನ ಆಸೆಗೆ ಬಂದ ಮೀನು ಗಾಳಕ್ಕೆ ಸಿಕ್ಕಿ ಹಾಕಿಕೊಂಡಂತೆ. ತನ್ನ ಲೂಟಿಯನ್ನು ಮರೆ ಮಾಚಲು ವರ್ಷಕ್ಕೆ ಒಂದು ಸಲ ಎರಡು ಸಲ ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಏಜೆಂಟರು ಭಾರತದಲ್ಲಿನ ಹಿಂದುಳಿದ ಹಳ್ಳಿಗಳಿಗೆ ಭೇಟಿ ನೀಡುವುದು ಮಕ್ಕಳು, ಮಹಿಳೆಯರ ಜೊತೆ ಫೋಟೋ ತೆಗೆಸಿಕೊಳ್ಳುವದು ಭಾರತದಲ್ಲಿನ ಹಳ್ಳಿಗಳ ಬಗ್ಗೆ ಮತ್ತು ಅಲ್ಲಿನ ಬಡತನಗಳ ಬಗ್ಗೆ ಮೊಸಳೆ ಕಣ್ಣೀರು ಸುರಿಸುವಂತ ನಾಟಕಗಳನ್ನು ಆಡುವುದು ಇವರಿಗೆ ಪರಿಪಾಠವಾಗಿದೆ. ಆದರೆ ಇವುಗಳ ಹಿಂದಿರುವ ಪೈಶಾಚಿಕ ಉದ್ದೇಶಗಳನ್ನು ಮರೆಮಾಚಲು ಎಷ್ಟೇ ಪ್ರಯತ್ನ ಮಾಡಿದರು ಸತ್ಯಾಂಶ ತಿಳಿಯಲು ಕೂಪಮಂಡೂಕಗಳಿಗೆ ಕಷ್ಟವಾಗಲಾರದು.

ಪುಟ 9 ಕ್ಕೆ

ವಿಶ್ವಬ್ಯಾಂಕ್ ಅಧ್ಯಕ್ಷರ ಭಾರತ ಭೇಟಿ ವಿರೋಧಿಸಿ ಪ್ರತಿಭಟನೆ

ವಿಶ್ವಬ್ಯಾಂಕ್ ಅಧ್ಯಕ್ಷರಾದ ಜೇಮ್ಸ್ ಡಿ.ವೂಫೆನ್ ಸನ್ ಹತ್ತು ದಿನಗಳ ಭೇಟಿಗಾಗಿ ಭಾರತಕ್ಕೆ ಆಗಮಿಸಿದ್ದಾರೆ. ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರ ಮತ್ತು ಅನೇಕ ರಾಜ್ಯ ಸರ್ಕಾರಗಳ ಪ್ರತಿನಿಧಿಗಳು ಈತನಿಗೆ ರತ್ನಗಂಬಳಿ ಹಾಸಿ ಸ್ವಾಗತಿಸುತ್ತಿವೆ. ಬೃಹತ್ ರಾಷ್ಟ್ರವೊಂದರ ಮುಖ್ಯಸ್ಥರಿಗೆ ಸಿಗುವಂತಹ ಗೌರವವನ್ನು ಈ ವಿಶ್ವದ ಮಾರ್ವಾಡಿಗೆ ನೀಡುತ್ತಿದ್ದಾರೆ.

ವಿಶ್ವಬ್ಯಾಂಕ್ ಬಡ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸಾಲನೀಡಿ ತನ್ನದೇ ಆರ್ಥಿಕ ನೀತಿ ಜಾರಿ ಮಾಡುವಂತೆ ಒತ್ತಾಯಿಸುತ್ತಾ ಈ ದೇಶಗಳ ಆರ್ಥಿಕ ದಿವಾಳಿತನಕ್ಕೆ ಕಾರಣವಾಗಿದೆ. ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ನೀತಿಗಳನ್ನು ಜಾರಿಗೆ ತರಲು ಅದು ಶರತ್ತು ವಿಧಿಸಿದೆ. ಸಾರ್ವಜನಿಕ ವಲಯಗಳನ್ನು ಖಾಸಗೀಕರಿಸಬೇಕು, ಕೃಷಿ, ಆಹಾರ ಮತ್ತು ಪಡಿತರ ವ್ಯವಸ್ಥೆಯಡಿ ನೀಡುತ್ತಿರುವ ಸಹಾಯಧನ ಸ್ಥಗಿತಗೊಳಿಸಬೇಕು, ಅಲ್ಲದೆ ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಕುಡಿಯುವ ನೀರು, ಬಡತನ ನಿವಾರಣೆ ಕಾರ್ಯಕ್ರಮಗಳಲ್ಲಿ ಸರಕಾರದ ಹೂಡಿಕೆ ಕಡಿತವಾಗಬೇಕು ಇವು ಆ ಶರತ್ತುಗಳಲ್ಲಿ ಸೇರಿವೆ.

ಈಗಾಗಲೇ ಈ ಶರತ್ತುಗಳನ್ನು ಜಾರಿ ಮಾಡಲು ಹೊರಟ ಅನೇಕ ರಾಷ್ಟ್ರಗಳು ದಿವಾಳಿ ಎದ್ದಿವೆ. ಸೋಮಾಲಿಯಾ, ಮೆಕ್ಸಿಕೋ, ಬುರುಂಡಿ ಇದಕ್ಕೆ ಉದಾಹರಣೆ. ಕೈಗಾರಿಕೆ ನಾಶವಾಗಿದೆ. ಆಹಾರ ಉತ್ಪತ್ತಿ ಕಡಿಮೆಯಾಗಿದೆ. ನಿರುದ್ಯೋಗ ಹೆಚ್ಚಾಗಿದೆ. ಹಸಿವೆಯಿಂದ ಜನರು ನರಳುತ್ತಿದ್ದಾರೆ.

1991 ರಲ್ಲೇ ಭಾರತದಲ್ಲಿ ಈ ನೀತಿಯನ್ನು ಜಾರಿ ಮಾಡಲು ಆಳುವ ವರ್ಗ ಹೊರಟಿದ್ದರು. ದುಡಿಯುವ ಜನರ ಅದರಲ್ಲೂ ಎಡಪಕ್ಷಗಳ ನಿರಂತರ ಹೋರಾಟಗಳಿಂದಾಗಿ ಇದರ ವೇಗಕ್ಕೆ ಕಡಿವಾಣ ಹಾಕಿದ್ದಾರೆ.

ಸೋಮಾಲಿಯದಂತಹ ರಾಷ್ಟ್ರಗಳ ದುಸ್ಥಿತಿ ನಮ್ಮ ಕಣ್ಣ ಮುಂದಿದ್ದರೂ ಆಳುವ ವರ್ಗಗಳು ತಮ್ಮ ಅಲ್ಪಲಾಭಕ್ಕಾಗಿ ವಿಶ್ವಬ್ಯಾಂಕ್‌ನ ಶರತ್ತುಗಳಿಗೆ ತಲೆಬಾಗಿದ್ದಾರೆ. ಈಗಾಗಲೇ 4 ಲಕ್ಷ ಕೋಟಿ ರೂಪಾಯಿಗೂ ಅಧಿಕ ಸಾಲ ಪಡೆದಿರುವ ಭಾರತ ಮತ್ತಷ್ಟು ಸಾಲಕ್ಕೆ ಕೈ ಒಡ್ಡಿದೆ.

ಕೇಂದ್ರದಲ್ಲಿ ವಾಜಪೇಯಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಈ ಜನ ವಿರೋಧಿ ನೀತಿಗಳನ್ನು ವೇಗವಾಗಿ ಜಾರಿಗೆ ತರಲು ಹೊರಟಿದೆ. ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರ ಪೈಪೋಟಿಯ ಮೇಲೆ ಈ ನೀತಿಯನ್ನು ಜಾರಿಗೆ ತರುತ್ತಿದೆ. ದೇಶದ ಎಲ್ಲೆಡೆ ಈ ನೀತಿಗಳ ವಿರುದ್ಧ ವ್ಯಾಪಕವಾದ ಪ್ರತಿರೋಧ ವ್ಯಕ್ತವಾಗುತ್ತಿದೆ.

ಕಳೆದ ಮಂಗಳವಾರ ರಾಜ್ಯಕ್ಕೆ ವಿಶ್ವಬ್ಯಾಂಕ್ ಅಧ್ಯಕ್ಷರು ಆಗಮಿಸಿ ರಾಜ್ಯದಲ್ಲಿ ವಿದ್ಯುತ್, ಶಿಕ್ಷಣ, ನೀರಾವರಿ, ಸಾರಿಗೆ ಮುಂತಾದ ಕ್ಷೇತ್ರಗಳನ್ನು ಖಾಸಗೀಕರಿಸುವ ಕ್ರಿಯೆ ಎಷ್ಟರ ಮಟ್ಟಿಗೆ ಪ್ರಗತಿಯಲ್ಲಿದೆ ಎಂಬುದನ್ನು ಪರಿಶೀಲಿಸಲು ಬಂದಿರುವ ವಿಶ್ವಬ್ಯಾಂಕ್ ಅಧ್ಯಕ್ಷರ ಭೇಟಿಯನ್ನು ಆಳುವವರು ಮತ್ತು ಅದರ ಪರವಾಗಿರುವ ಮಾಧ್ಯಮಗಳು ವಿಜೃಂಭಿಸುತ್ತಿವೆ. ಆದರೆ ರಾಜ್ಯದ ಹಲವೆಡೆ ದುಡಿಯುವ ಜನರು ತೀವ್ರ ಪ್ರತಿರೋಧ ವ್ಯಕ್ತಪಡಿಸಿದ್ದಾರೆ. ಕಳೆದ ಮಂಗಳವಾರ ರಾಜ್ಯಕ್ಕೆ ಕಾಲಿಟ್ಟಾಗಲೇ ಬೆಂಗಳೂರಿನ ವಿಮಾನ ನಿಲ್ದಾಣದಲ್ಲೇ ಕಪ್ಪು ಬಾವುಟ ತೋರಿಸಿ ಸಿಪಿಐ(ಎಂ) ಕಾರ್ಯಕರ್ತರು ಪ್ರತಿಭಟಿಸಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಬಳ್ಳಾರಿ ಜಿಲ್ಲೆಯ ಹಂಪಿಗೆ ಭೇಟಿ ನೀಡಿದಾಗಲೂ ಪ್ರತಿಭಟನೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮವಾಗಿ ನಾಲ್ಕು ಪ್ರಮುಖ ಸಿಪಿಐ(ಎಂ), ಡಿವೈಎಫ್‌ಐ ಕಾರ್ಯಕರ್ತರನ್ನು ಬಂಧಿಸಲಾಗಿತ್ತು.



ವಿಶ್ವಬ್ಯಾಂಕ್ ಅಧ್ಯಕ್ಷರ ವಿರುದ್ಧ ಕಪ್ಪು ಬಾವುಟ ಪ್ರದರ್ಶನ

ರಾಜ್ಯಕ್ಕೆ ಮೂರು ದಿನಗಳ ಭೇಟಿಗಾಗಿ ಆಗಮಿಸಿದ್ದ ವಿಶ್ವಬ್ಯಾಂಕ್ ಅಧ್ಯಕ್ಷ ಜೇಮ್ಸ್ ಡಿ.ವೂಫಿನ್‌ಸನ್ ವಿರುದ್ಧ ಸಿಪಿಐ(ಎಂ) ಕಾರ್ಯಕರ್ತರು ಕಪ್ಪ ಬಾವುಟ ಪ್ರದರ್ಶಿಸಿ ಅವರ ಭೇಟಿಯನ್ನು ವಿರೋಧಿಸಿ ಘೋಷಣೆ ಕೂಗಿದರು.

ರಾಜ್ಯಕ್ಕೆ ಭೇಟಿ ನೀಡಲು ಕಳೆದ ಮಂಗಳವಾರ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ ಸಿಪಿಐ(ಎಂ)ನ ನೂರಾರು ಕಾರ್ಯಕರ್ತರು ವಿಶ್ವಬ್ಯಾಂಕ್‌ನ ಅಧ್ಯಕ್ಷರ ವಿರುದ್ಧ ಘೋಷಣೆ ಕೂಗಿದರು. 'ಇಂಡಿಯಾ ಈಸ್ ನಾಟ್ ಫಾರ್ ಸೇಲ್', 'ವರ್ಲ್ಡ್ ಬ್ಯಾಂಕ್ ಪ್ರೆಸಿಡೆಂಟ್ ಗೋ ಬ್ಯಾಕ್' ಎಂಬ ಬರಹವುಳ್ಳ ಬೃಹತ್ ಬ್ಯಾನರ್ ಹಿಡಿದಿದ್ದ ಪ್ರತಿಭಟನಾಕಾರರು ವಿಶ್ವಬ್ಯಾಂಕ್‌ನ ಶರತ್ತಿಗೆ ಮಣಿಯುತ್ತಿರುವ ವಾಜಪೇಯಿ ನೇತೃತ್ವದ ಸರ್ಕಾರ ಮತ್ತು ಎಸ್.ಎಂ.ಕೃಷ್ಣ ನೇತೃತ್ವದ ಸರ್ಕಾರಗಳ ವಿರುದ್ಧ ಘೋಷಣೆ ಕೂಗುತ್ತಿದ್ದರು.

ಸಂಜೆ ಆರು ಗಂಟೆಯಿಂದಲೇ ಅಧ್ಯಕ್ಷರ ಬರುವಿಕೆಗಾಗಿ ವಿಮಾನ ನಿಲ್ದಾಣದ ಮುಖ್ಯದ್ವಾರದಲ್ಲಿ ಕಾಯುತ್ತಿದ್ದ ಪ್ರತಿಭಟನಾಕಾರರು ರಾತ್ರಿ 9 ಗಂಟೆಗೆ ಆಗಮಿಸಿದಾಗ 'ವಿಶ್ವಬ್ಯಾಂಕ್ ಅಧ್ಯಕ್ಷರೇ ವಾಪಸ್ ಹೋಗಿ' ಎಂಬ ಘೋಷಣೆ ಮುಗಿಲು ಮುಟ್ಟುವಂತಿತ್ತು.

ಸಿಪಿಐ(ಎಂ)ನ ಬೆಂಗಳೂರು ಜಿಲ್ಲಾ ಸಮಿತಿ ಏರ್ಪಡಿಸಿದ್ದ ಈ ಕಾರ್ಯಕ್ರಮದ ನೇತೃತ್ವವನ್ನು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಪ್ರಕಾಶ್, ಹೆಚ್.ಎನ್.ಗೋಪಾಲಗೌಡ, ಇ.ಕೆ.ಎನ್.ರಾಜನ್, ಮೀನಾಕ್ಷಿಸುಂದರಂ, ಮುಂತಾದವರು ವಹಿಸಿದ್ದರು. ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಗುರುಶಾಂತ್ ಭಾಗವಹಿಸಿದ್ದರು.

ವರದಿ: ಸಿದ್ದಯ್ಯ

ಬಿಜೆಪಿ ಕೂಟದಲ್ಲಿ ಬಿರುಕುಗಳು

ಉತ್ತರ ಪ್ರದೇಶದ ಬಿಜೆಪಿ ಸರಕಾರ ನಾಲ್ಕು ವರ್ಷಗಳಲ್ಲಿ ಮೂರು ಮುಖ್ಯಮಂತ್ರಿಗಳನ್ನು ಕಂಡಿದೆ. ಕಲ್ಯಾಣ್ ಸಿಂಗ್, ರಾಮಪ್ರಕಾಶ್ ಗುಪ್ತಾ ಮತ್ತು ಈಗ ರಾಮನಾಥ ಸಿಂಗ್. ಜನತೆಯ ಬೆಂಬಲ ಕಳೆದುಕೊಳ್ಳುತ್ತಿರುವಾಗ ಕಾಂಗ್ರೆಸ್ ಪಕ್ಷ ಸಹ ಹೀಗೆಯೇ ಮುಖ್ಯಮಂತ್ರಿಗಳನ್ನು ಬದಲಾಯಿಸುತ್ತಲೇ ಹೋದ ಅನೇಕ ಉದಾಹರಣೆಗಳಿವೆ. ಉತ್ತರ ಪ್ರದೇಶದಲ್ಲಿ ಬಿಜೆಪಿಯೊಳಗೆ ಎಲ್ಲವೂ ಸರಿಯಿಲ್ಲ. ತನ್ನ ಸಾಂಪ್ರದಾಯಿಕ ಬೆಂಬಲಿಗರನ್ನು ಅಲ್ಲಿ ಕಳೆದುಕೊಳ್ಳುತ್ತಿದೆ

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರ ಕಳೆದುಕೊಳ್ಳುವುದು ಖಚಿತವಾಗುತ್ತಿರುವಂತೆ ಈಗ ದೊಂಬರಾಟ ನಡೆಸಿದೆ. ಉತ್ತರಾಂಚಲ ರಾಜ್ಯ ರಚನೆಯಾದ ನಂತರ ತನ್ನ ಸರ್ಕಾರ ಉಳಿಸಿಕೊಳ್ಳುವುದೇ ಪ್ರಯಾಸದ ಕೆಲಸವಾಗಿದೆ. ತನ್ನ 17 ಶಾಸಕರ ಹೊಸ ರಾಜ್ಯಕ್ಕೆ ವರ್ಗವಾದ ನಂತರ ಬಿಜೆಪಿಯ ಸರ್ಕಾರ ನಿಂತಿರುವುದು ಕೇವಲ 3 ಜನ ಶಾಸಕರ ಅಂತರದಿಂದ. ರಾಜನಾಥ್ ಸಿಂಗ್‌ರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡುವ ಉದ್ದೇಶವೆಂದರೆ ಮೇಲ್ಜಾತಿಯ ತನ್ನ ಬೆಂಬಲ ಕ್ರೋಢೀಕರಿಸಿಕೊಳ್ಳುವದು. ಮುಖ್ಯಮಂತ್ರಿ ಹಾಗೂ ಬಿಜೆಪಿ ರಾಜ್ಯ ಅಧ್ಯಕ್ಷ ಇಬ್ಬರೂ ಮೇಲ್ ಜಾತಿಯವರೇ.

ರಾಜ್ಯದಲ್ಲಿ ದಲಿತರ ಸ್ಥಿತಿ-ಗತಿಗಳ ಬಗ್ಗೆ ಸದಾ ಸುದ್ದಿ ಮಾಡುತ್ತಿದ್ದ ರಾಜ್ಯಪಾಲ ಸೂರಜ್ ಬಾನ್ ರವರನ್ನು ಅಲ್ಲಿಂದ ಎತ್ತಂಗಡಿ ಮಾಡಿತು. ಈ ಮೂಲಕ ಮೇಲ್ಜಾತಿಯವರನ್ನು ಓಲೈಸುವುದು ಅದರ ಇಚ್ಛೆ. ಹಿಂದುಳಿದ ವರ್ಗಗಳ ಮತ್ತು ದಲಿತರಿಂದ ತಾನು ಪ್ರತ್ಯೇಕಗೊಳ್ಳುವುದು ಗೊತ್ತಿದ್ದರೂ ಈ ಮೇಲ ಜಾತಿ ಓಲೈಕೆ ನಡೆದೇ ಇದೆ. ಇತರೆ ಬಂಡವಾಳಶಾಹಿ ಪಕ್ಷಗಳಂತೆ ಜಾತಿ ಆಧಾರದಲ್ಲಿ ರಾಜಕೀಯವನ್ನು ಕ್ರೋಢೀಕರಿಸುವಲ್ಲಿ ಬಿಜೆಪಿ ತಾನೇನು ಕಮ್ಮಿಯಲ್ಲ ಎಂದು ತೋರಿಸಿದೆ. ಈ ವಿಭಜನಕಾರಿ ತಂತ್ರಗಳಿಗೆ ತಕ್ಕ ಬೆಲೆ ತೆರಲೇಬೇಕಾಗುತ್ತದೆ.

ಗುಜರಾತ್‌ನ ಪಂಚಾಯತ್ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಬಿಜೆಪಿ ಹೀನಾಯ ಸೋಲು ಅನುಭವಿಸಿತು. ಅನಂತರ ಇಂಥದೇ ಪರಿಸ್ಥಿತಿಯನ್ನು ಉ.ಪ್ರದೇಶದಲ್ಲಿಯೂ ಎದುರು ನೋಡುತ್ತಿದೆ. ಉತ್ತರ ಪ್ರದೇಶದಲ್ಲಿನ ಯಾವುದೇ ಹಿನ್ನೆಡೆಯು ಕೇಂದ್ರದ ಎನ್‌ಡಿಎ ಸರ್ಕಾರದ ಪತನದ ಆರಂಭ. ಬಿಜೆಪಿಯೊಳಗಡೆ ತಳಮಳಿಸುತ್ತಿರುವ ಅನೇಕ ಸಮಸ್ಯೆಗಳು, ಹೊರಗೆ ಪ್ರತಿಫಲನಗೊಳ್ಳತೊಡಗಿವೆ.

ಜಾರ್ಖಂಡ್‌ನ ಮುಖ್ಯಮಂತ್ರಿ ಸ್ಥಾನದಿಂದ ವಂಚಿತರಾದ ಕರಿಯ ಮುಂಡಾಗೆ ಕೇಂದ್ರ ಸರ್ಕಾರದ ಸಚಿವ ಸಂಪುಟದಲ್ಲಿ ಯಾವುದೇ ಸ್ಥಾನ ನೀಡದಿರುವುದು ಎನ್‌ಡಿಎ ಮೈತ್ರೀಕೂಟಕ್ಕೆ ಒಳ್ಳೆಯದೇನನ್ನೂ ತರಲಾರದು. ಹೊಸ ರಾಜ್ಯದಲ್ಲಿ ಅಧಿಕಾರಕ್ಕೇರಿರುವ ಎನ್‌ಡಿಎಗೆ ಇದು ಯಾವುದೇ ಶುಭಸಂಕೇತ ಸೂಚಿಸುವುದಿಲ್ಲ.

ಹಿಂದುಳಿದ ವರ್ಗದವರನ್ನು ಸಂಪೂರ್ಣವಾಗಿ ಕಡೆಗಣಿಸಿದೆ ಎಂದೆಲ್ಲಾ ಕೂಗಾಡಿ ಕೇದಾರನಾಥಕ್ಕೆ ವನವಾಸಕ್ಕೆ ತೆರಳಿದ್ದ ಉಮಾಭಾರತಿ ಮತ್ತೆ ಕೇಂದ್ರದ ಸಚಿವ ಸಂಪುಟದಲ್ಲಿ ಮಂತ್ರಿಯನ್ನಾಗಿಸಿ, ಆಕೆಯನ್ನು ಓಲೈಸಲಾಗಿದೆ. ಶಿಬುಸೂರೇನ್‌ನನ್ನು ಹೊಸ ಜಾರ್ಖಂಡ್ ರಾಜ್ಯಕ್ಕೆ ಮುಖ್ಯಮಂತ್ರಿಯನ್ನಾಗಿಸಲಿಲ್ಲ ಎಂದು ಜಾರ್ಖಂಡ್ ಮುಕ್ತಿಮೋರ್ಚಾ ಎನ್‌ಡಿಎಯಿಂದ ಹೊರ ನಡೆಯಿತು. ಇದು ಎನ್‌ಡಿಎಯಲ್ಲಿ ಹೊಗೆಯಾಡುತ್ತಿರುವ ಅತೃಪ್ತಿಯ ಸೂಚಕ.

ಇಷ್ಟೆಲ್ಲಾ ಜನಬೆಂಬಲವನ್ನು ವಾಜಪೇಯಿ ಸರ್ಕಾರ ಕಳೆದುಕೊಳ್ಳುತ್ತಿದ್ದರೂ ತನ್ನ ಜನವಿರೋಧಿ ದುರ್ನೀತಿಗಳನ್ನು ಕೈಬಿಟ್ಟಿಲ್ಲ. ಸಿದ್ದಉಡುಪುಗಳ (ಗಾರ್ಮೆಂಟ್ಸ್) ಕೈಗಾರಿಕೆಯನ್ನು ಸಣ್ಣ ಕೈಗಾರಿಕಾ ವಲಯದಿಂದ ತೆಗೆದು ಈ ಕ್ಷೇತ್ರದಲ್ಲಿ ಶೇ 100 ರಷ್ಟು ವಿದೇಶಿ ಬಂಡವಾಳ ಹೂಡಿಕೆ ಹಾಗೂ ದೊಡ್ಡ ವ್ಯಾಪಾರಿವಲಯ ಪ್ರವೇಶಕ್ಕೆ ಈಡು ಮಾಡಲಾಗಿರುವುದು ಇತ್ತೀಚಿನ ಅಪಾಯಕಾರಿ ನಿರ್ಣಯಕ್ಕೆ ಉದಾಹರಣೆ. ರಾಮಮಂದಿರ ವಿಷಯವನ್ನು ಮತ್ತೆ ಎತ್ತುವುದಕ್ಕೆ ವಿಶ್ವಹಿಂದೂ ಪರಿಷತ್ ಸಿದ್ಧತೆ ಮಾಡುತ್ತಿರುವುದು, ತನ್ನ ಕೋಮುವಾದಿ ಅಜೆಂಡಾವನ್ನು ಜೀವಂತವಾಗಿಡುವಂಥದ್ದು.

ವಾಜಪೇಯಿ ಸರ್ಕಾರದ ವಿರುದ್ಧ ಹೋರಾಟಗಳನ್ನು ತೀವ್ರಗೊಳಿಸಲು ಕಾಲ ಪಕ್ವವಾಗಿದೆ. ಖಾಸಗೀಕರಣದ ವಿರುದ್ಧ ಬ್ಯಾಂಕ್ ನೌಕರರ ಒಂದು ದಿನ ಮುಷ್ಕರ, ಕಲ್ಲಿದ್ದಲು ಗಣಿ ಕಾರ್ಮಿಕರ ಪ್ರತಿಭಟನೆಗಳು, ಅಂಚೆ ನೌಕರರ ಹೋರಾಟಕ್ಕೆ ಸಿದ್ಧತೆ, ದೇಶಾದ್ಯಂತ ಬೆಲೆ ಕುಸಿತದ ವಿರುದ್ಧ ರೈತರ ಚಳುವಳಿ, ಶುಲ್ಕ ಏರಿಕೆ ವಿರುದ್ಧದ ವಿದ್ಯಾರ್ಥಿಗಳ ಹೋರಾಟ, ಇವೆಲ್ಲಾ ದೇಶಾದ್ಯಂತ ಬೆಳೆಯುತ್ತಿರುವ ಚಳುವಳಿಯ ಅಲೆಗಳ ಸೂಚಕ.

ಈ ಎಲ್ಲಾ ಚಳುವಳಿಗಳಿಗೆ ಸಮರ್ಥವಾಗಿ ಸೂಕ್ತವಾಗಿ ಬೆಳೆಯಲು ಸಿಪಿಐ(ಎಂ) ಮತ್ತು ಎಡಪಕ್ಷಗಳು ಮುತುವರ್ಜಿ ವಹಿಸಬೇಕು. ಇಂತಹ ಜನ ಹೋರಾಟಗಳು ಪ್ರಯಾಸದಲ್ಲಿರುವ ಬಿಜೆಪಿ ಮೈತ್ರಿಕೂಟಕ್ಕೆ ಪರಿಣಾಮಕಾರಿ ಸವಾಲು ಎಸೆಯಬಲ್ಲ ಮೂರನೇ ಪರ್ಯಾಯಕ್ಕೆ ರೂಪು ಕೊಡಲು ಕಾರಣವಾಗುತ್ತವೆ. ○

ಜನವಿರೋಧಿ ನೀತಿಗಳನ್ನು ಪ್ರತಿಭಟಿಸಿ ವಿದ್ಯಾರ್ಥಿ ಯುವಜನರ ಪಾರ್ಲಿಮೆಂಟ್ ಚಲೋ

ಕೇಂದ್ರದ ಎನ್‌ಡಿಎ ಸರ್ಕಾರದ ನೀತಿಗಳು, ದೇಶದ ಲಕ್ಷಾಂತರ ವಿದ್ಯಾರ್ಥಿ-ಯುವಜನರ ಹಿತಾಸಕ್ತಿಗಳನ್ನು ಸಂಪೂರ್ಣವಾಗಿ ಕಡೆಗಣಿಸಿದೆ. ಇದು ಭವಿಷ್ಯದಲ್ಲಿ ಇಡೀ ದೇಶವನ್ನೇ ವಿನಾಶದಂಚಿಗೆ ಕೊಂಡೊಯ್ಯುವ ನೀತಿಗಳಾಗಿವೆ. ಮಾತ್ರವಲ್ಲ ಇಡೀ ಸರ್ಕಾರವೇ ದೇಶದ ಶತ್ರುಗಳಾದ ಅಮೆರಿಕಾ ನೇತೃತ್ವದ ಸಾಮ್ರಾಜ್ಯಶಾಹಿಗೆ ಮತ್ತು ಕೋಮುಶಕ್ತಿಗಳನ್ನು ಪ್ರತಿನಿಧಿಸುತ್ತಿರುವ ಆರ್‌ಎಸ್‌ಎಸ್ ನ ದಾಳವಾಗಿ ಮಾರ್ಪಟ್ಟಿದೆ.

ಯುವಜನ ವಿರೋಧಿ ಸರ್ಕಾರ:

ಈಗಾಗಲೇ ದೇಶದಲ್ಲಿ 3.78 ಕೋಟಿ ನೊಂದಾಯಿತ ನಿರುದ್ಯೋಗಿಗಳಿದ್ದು, ಸರ್ಕಾರದ ವರದಿಯ ಪ್ರಕಾರವೇ ದೇಶದಲ್ಲಿ 15 ಕೋಟಿ ಉದ್ಯೋಗ ವಂಚಿತ ಯುವಜನರಿದ್ದಾರೆ. ಅಂದರೆ ಭಾರತದ ಒಟ್ಟು 3 ಯುವಜನರಲ್ಲಿ ಇಬ್ಬರು ಉದ್ಯೋಗ ವಂಚಿತರು. ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ 1 ವರ್ಷಕ್ಕೆ 1 ಕೋಟಿ ಉದ್ಯೋಗವಕಾಶಗಳನ್ನು ಸೃಷ್ಟಿಸುವುದಾಗಿ ಹೇಳಿದ ಎನ್‌ಡಿಎ ಸರ್ಕಾರ ತನ್ನ ಆಡಳಿತದ ಒಂದು ವರ್ಷದ ಅವಧಿಯಲ್ಲಿ ದೇಶದ ಯುವಜನತೆಗೆ ವಿಶ್ವಾಸದ್ರೋಹವೆಸಗಿದೆ. ಅದರ ಬಳಿ ಹೊಸದಾಗಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಯಾವುದೇ ಕಾರ್ಯಕ್ರಮವಿಲ್ಲ. ಬದಲಾಗಿ ಅತ್ಯುತ್ಸಾಹದಿಂದ ಇರುವ ಉದ್ಯೋಗದ ಅವಕಾಶಗಳನ್ನು ನಾಶ ಮಾಡುತ್ತಿದೆ.

ಕಳೆದ 15 ವರ್ಷಗಳಿಂದ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನೇಮಕಾತಿಯನ್ನು ಸಂಪೂರ್ಣ ನಿಷೇಧಿಸಿರುವ ಸರ್ಕಾರ ಲಕ್ಷಾಂತರ ವಿದ್ಯಾವಂತ ಯುವಜನರ ಭವಿಷ್ಯವನ್ನೇ ನಾಶಮಾಡಿದೆ. ಈಗ ಮತ್ತೆ ಶೇ 10 ರಷ್ಟು ಉದ್ಯೋಗಗಳನ್ನು ಕಡಿತಗೊಳಿಸಲು ಆದೇಶ ನೀಡಿದೆ.

ಯಾವುದೇ ಒಂದು ಸಮಾಜದಲ್ಲಿ ಯುವಜನರು ಕೇವಲ ಯುವಕ-ಯುವತಿಯ ಗುಂಪು ಸಮೂಹ ಅಲ್ಲ, ಅವರು ಶ್ರಮಶಕ್ತಿಯ ಸಂಪತ್ತಿನ ಕೇಂದ್ರವೂ ಆಗಿದ್ದಾರೆ. ಇಂಥಹ ಅಗಾಧವಾದ ಶ್ರಮಶಕ್ತಿಯನ್ನು ಆಳುವ ವರ್ಗಗಳು ಪ್ರಜ್ಞಾಪೂರ್ವಕವಾಗಿ ದೇಶವನ್ನು ಕಟ್ಟುವ ಕಾರ್ಯದಿಂದ ದೂರವಿರಿಸಿ ನಿರುದ್ಯೋಗಿಗಳ ದೊಡ್ಡ ಪಡೆಯನ್ನೇ ಸೃಷ್ಟಿಸಿದ್ದಾರೆ. ನಿರುದ್ಯೋಗ ಸಮಸ್ಯೆಯನ್ನು ಲಾಭಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ.

ವಾಸ್ತವವಾಗಿ ದೇಶದ ಲಕ್ಷಾಂತರ ಯುವಜನರಿಗೆ ಬೇಕಿರುವುದು ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿಸುವುದು, ಉದ್ಯೋಗಾವಕಾಶದ ಖಾತರಿ, ಉದ್ಯೋಗ ದೊರೆಯುವವರೆಗೆ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸುವ ಎಲ್ಲರಿಗೂ ನಿರುದ್ಯೋಗ ಭತ್ಯೆ. ಆದರೆ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಇದು ಬೇಕಿಲ್ಲ. ಭಾರತದ ಯುವಜನತೆಗೆ ಉದ್ಯೋಗದ ಹಕ್ಕನ್ನು ಆ ಮೂಲಕ ಸ್ವಾಭಿಮಾನದಿಂದ ಕೂಡಿದ ಗೌರವಯುತವಾದ ಬದುಕನ್ನು ಅದು ನಿರಾಕರಿಸುತ್ತಿದೆ. ಹೀಗಾಗಿ ನಮ್ಮ ಮುಂದಿನ ಉತ್ತಮ ಭವಿಷ್ಯಕ್ಕಾಗಿ ಇರುವ ಏಕೈಕ ಮಾರ್ಗ ಹೋರಾಟ ಮಾತ್ರ.


ರಾಷ್ಟ್ರೀಯ ಶಿಕ್ಷಣ ನೀತಿ

ಯಾವುದೇ ಒಂದು ಸಮಾಜದ ಆರ್ಥಿಕ ಬೆಳವಣಿಗೆಗೆ ಹಾಗೂ ಸಾಮಾಜಿಕ ಅಭಿವೃದ್ಧಿಗೆ ವಿಜ್ಞಾನ-ತಂತ್ರಜ್ಞಾನ ಅತೀ ಅವಶ್ಯ. ಇದರಲ್ಲಿ ಶಿಕ್ಷಣವು ಮೂಲಭೂತವಾಗಿ ಮಹತ್ತರ ಪಾತ್ರವನ್ನು ಹೊಂದಿದೆ. ಶಿಕ್ಷಣಕ್ಕೆ ಕೇಂದ್ರ ಆಯವ್ಯಯದ ಶೇ 10 ಹಾಗೂ ರಾಷ್ಟ್ರೀಯ ಉತ್ಪನ್ನದ ಶೇ 6 ರಷ್ಟು ಹಣವನ್ನು ಮೀಸಲಿಡುವುದಾಗಿ ಘೋಷಿಸಿದ್ದ ಸರ್ಕಾರ ಈಗ ಖರ್ಚು ಮಾಡುತ್ತಿರುವುದು ಆಯವ್ಯಯದಲ್ಲಿ ಕೇವಲ ಶೇ 2 ಹಾಗೂ ರಾಷ್ಟ್ರೀಯ ಉತ್ಪನ್ನದ ಶೇ 3.8 ಮಾತ್ರ.

ಇದು ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳ ನೇರ ಪರಿಣಾಮವಾಗಿದೆ. ಶಿಕ್ಷಣ ಹಾಗೂ ಸಾಮಾಜಿಕ ಕ್ಷೇತ್ರಗಳ ಮೇಲೆ ಸರ್ಕಾರವು ಖರ್ಚುಮಾಡುವ ಹಣವನ್ನು ಮತ್ತಷ್ಟು ಕಡಿತಗೊಳಿಸಲು ಒತ್ತಡ ತರಲಾಗುತ್ತಿದೆ. ಮತ್ತೊಮ್ಮೆ ಭಾರತವನ್ನು ಜಗತ್ತಿನ ಸಾಮ್ರಾಜ್ಯಶಾಹಿಗಳ ವಸಾಹತುವನ್ನಾಗಿಸಲು ನಡೆಯುತ್ತಿರುವ ಪ್ರಯತ್ನಕ್ಕೆ ಕೇಂದ್ರ ಸರ್ಕಾರವು ಸಂಪೂರ್ಣವಾಗಿ ಶರಣಾಗಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸಂಶೋಧನಾ ವಿಭಾಗಗಳನ್ನೇ ರದ್ದುಗೊಳಿಸಲಾಗುತ್ತಿದೆ. ಸರ್ಕಾರದ ಈ ಪ್ರಯತ್ನವು ದೇಶದ ಬೌದ್ಧಿಕ ಸ್ವಾವಲಂಬನೆಯನ್ನೇ ನಾಶ ಮಾಡುವಂತಹುದು. ಈ ಮೂಲಕ ದೇಶವು ತನ್ನ ವಿಜ್ಞಾನ-ತಂತ್ರಜ್ಞಾನದ ಅಭಿವೃದ್ಧಿಗೆ ನಿರಂತರವಾಗಿ ಸಾಮ್ರಾಜ್ಯಶಾಹಿ ದೇಶಗಳ ಮೇಲೆಯೇ ಅವಲಂಬಿಸುವ ಒತ್ತಡಕ್ಕೆ ಸಿಲುಕಿಸುವಂತಾಗಿದೆ.

ಈ ದುಷ್ಕೃತ್ಯವನ್ನು ಸಾಮ್ರಾಜ್ಯಶಾಹಿಗಳ ಸಹಯೋಗದೊಂದಿಗೆ ಮಾಡಲಾಗುತ್ತಿದೆ. ಈ ನೀತಿಗಳ ಫಲವಾಗಿ ಉನ್ನತ ಶಿಕ್ಷಣ ಸಂಸ್ಥೆಗಳು ತೀವ್ರ ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿದೆ.



ಅಧ್ಯಾಪಕರು-ನೌಕರ ವರ್ಗಕ್ಕೆ ಸರಿಯಾದ ಸಂಬಳ ಕೊಡಲಾಗದೆ ಹಣ ಸಂಗ್ರಹಣೆಗೆ ಹೊಸ ಹೊಸ ಮೂಲಗಳನ್ನು ಹುಡುಕಲಾಗುತ್ತಿದೆ. ಇದರ ಹೊರೆಯನ್ನು ವಿದ್ಯಾರ್ಥಿಗಳು-ಪೋಷಕರ ಮೇಲೆ ಹೊರಿಸಲಾಗುತ್ತಿದೆ. ವಿ.ವಿ.ಗಳಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿ ಸಂಬಂಧಿತ ಚಟುವಟಿಕೆಗಳ ಹಿನ್ನಡೆ ಅನುಭವಿಸುತ್ತಿವೆ. ಐಟಿಐ ಗಳು ಜಗತ್ತಿನ ಉತ್ತಮ ವೈಜ್ಞಾನಿಕ ಸಂಶೋಧನಾ ಕೇಂದ್ರಗಳು ಖಾಸಗೀಕರಣದ ದಾಳಿಗೆ ಒಳಗಾಗಿದೆ.

ಇವೆಲ್ಲವೂ ಈ ದೇಶದ ಬೌದ್ಧಿಕ ಪರಿಣತಿಯ ಕೇಂದ್ರಗಳನ್ನು ನಾಶ ಮಾಡುವ ಸಾಮ್ರಾಜ್ಯಶಾಹಿ ಕಾರ್ಯವ್ಯೂಹದ ಕುತಂತ್ರದ ಭಾಗವಾಗಿ ನಡೆಯುತ್ತಿದೆ. ಆದರೆ ದೇಶವನ್ನು ಸಾಮ್ರಾಜ್ಯಶಾಹಿಗೆ ಶರಣಾಗಿಸುವ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಪ್ರಯತ್ನವನ್ನು ದೇಶದ ಜನ ಕ್ಷಮಿಸುವುದೂ ಇಲ್ಲ ಮಾತ್ರವಲ್ಲ ಬಿಡುವುದೂ ಇಲ್ಲ.

ಯುವ ಮನಸ್ಸುಗಳ ಕೋಮುವಾದೀಕರಣ

ಇಡೀ ಶಿಕ್ಷಣ ವ್ಯವಸ್ಥೆಯನ್ನೇ ಕೋಮುವಾದೀಕರಿಸುವ ಪ್ರಯತ್ನವನ್ನು ಆರ್‌ಎಸ್‌ಎಸ್ ಸಂಘಪರಿವಾರಗಳು ಯೋಜನಾಬದ್ಧವಾಗಿ ಮಾಡುತ್ತಿವೆ. ಉನ್ನತ ಸಂಸ್ಥೆಗಳಲ್ಲಿ ಐಸಿಹೆಚ್‌ಆರ್ ನಂತಹ ಸಂಶೋಧನಾ ಕೇಂದ್ರಗಳಲ್ಲಿ ಆಡಳಿತ ಮಂಡಳಿಗಳಲ್ಲಿ ತನ್ನ ಕಾರ್ಯಕರ್ತರನ್ನು ನೇಮಿಸುವ ಮೂಲಕ ಶಿಕ್ಷಣರಂಗವನ್ನು ಕೋಮುವಾದೀಕರಿಸಲಾಗುತ್ತಿದೆ. ಆ ಮೂಲಕ ದೇಶದ ಐಕ್ಯತೆಗಾಗಿ ಪಣತೊಟ್ಟು ದುಡಿಯಬೇಕಾದ ಯುವಜನರಲ್ಲಿ ಜಾತಿ-ಧಾರ್ಮಿಕ ಸಂಕುಚಿತ ಮನೋಭಾವ ಗಳಿಂದ ಅವರ ಮನಸನ್ನು ಕೋಮುವಾದೀಕರಿಸಲಾಗುತ್ತಿದೆ.

ನ.-27 ಪಾರ್ಲಿಮೆಂಟ್ ಚಲೋ

ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಡಿವೈಎಫ್‌ಐ ಹಾಗೂ ಎಸ್‌ಎಫ್‌ಐ ಸಂಘಟನೆಗಳು ಕೇಂದ್ರದ ಎನ್‌ಡಿಎ ಸರ್ಕಾರದ ವಿರುದ್ಧ ನವೆಂಬರ್ 27 ರಂದು ಬೃಹತ್ ಪಾರ್ಲಿಮೆಂಟ್ ಚಲೋ ನಡೆಸಲು ನಿರ್ಧರಿಸಿವೆ. ಶಿಕ್ಷಣ ಹಾಗೂ ಉದ್ಯೋಗದ ಹಕ್ಕಿಗಾಗಿ ನಡೆಯುತ್ತಿರುವ ಈ ಹೋರಾಟದಲ್ಲಿ ರಾಷ್ಟ್ರಾದ್ಯಂತ 5 ಲಕ್ಷ ವಿದ್ಯಾರ್ಥಿ-ಯುವಜನರು ಪಾಲ್ಗೊಳ್ಳಲಿದ್ದಾರೆ.

ಮುಂದಿನ ದಿನಗಳಲ್ಲಿ ಈ ಹೋರಾಟವನ್ನು ಎನ್‌ಡಿಎ ಸರ್ಕಾರದ ನೀತಿಗಳಿಂದ ಕೇಂದ್ರ ಸಂಕಷ್ಟಕ್ಕೆ ಗುರಿಯಾಗಿರುವ ರೈತರು, ಕಾರ್ಮಿಕರು ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳೊಂದಿಗೆ ಸೇರಿ ಮತ್ತಷ್ಟು ಬಲಿಷ್ಟಗೊಳಿಸಬೇಕಾಗಿದೆ. ಜನತೆಯ ಹೋರಾಟಗಳು ಜನತೆಯ ಭವಿಷ್ಯವನ್ನು ನಿರ್ಧರಿಸುತ್ತವೆ. ದೇಶಪ್ರೇಮಿ ವಿದ್ಯಾರ್ಥಿ ಯುವಜನರಾದ ನಾವು ಕ್ರಾಂತಿಕಾರಿ ಭಗತ್‌ಸಿಂಗ್‌ರಂತಹ ಯುವಕರ ತ್ಯಾಗವು ವ್ಯರ್ಥವಾಗದಂತೆ ನೋಡಿಕೊಳ್ಳಬೇಕಿದೆ. ದೇಶದ ಎಲ್ಲಾ ದೇಶಪ್ರೇಮಿ ವಿದ್ಯಾರ್ಥಿ ಯುವಜನರನ್ನು ನ. 27 ಐತಿಹಾಸಿಕ ಪಾರ್ಲಿಮೆಂಟ್ ಚಲೋ ಹೋರಾಟದಲ್ಲಿ ಪಾಲ್ಗೊಳಿಸುವ ಮೂಲಕ ಹೋರಾಟವನ್ನು ಯಶಸ್ವಿಗೊಳಿಸಬೇಕಿದೆ.

- ಶ್ರೀನಿವಾಸ್

ಭತ್ತ, ಮೆಕ್ಕೆಜೋಳ ಬೆಳೆದ ರೈತ ಬೆನ್ನಿಗೆ

ಕೊಪ್ಪಳ ಮತ್ತು ಗಂಗಾವತಿಯಲ್ಲಿ ನಡೆದ ರೈತರ ಪ್ರತಿಭಟನೆಗಳ ಮುಖ್ಯ ಬೇಡಿಕೆ ತಾವು ಬೆಳೆದ ಮೆಕ್ಕೆ ಜೋಳ, ಭತ್ತಕ್ಕೆ ನ್ಯಾಯಸಮ್ಮತ ಬೆಲೆ ಸಿಗಬೇಕೆಂಬುದು. ತೀವ್ರ ಬೆಲೆ ಕುಸಿತದಿಂದ ಕಂಗಾಲಾದ ರೈತರ ಸಮಸ್ಯೆಯನ್ನು ತಾಳ್ಮೆಯಿಂದ ಕೇಳದೆ ಅವರ ಮೇಲೆ ಹರಿಹಾಯ್ದಿದ್ದಾರೆ ಸರ್ಕಾರದ ಉಸ್ತುವಾರಿ ಸಚಿವ ಮಲ್ಲಿಕಾರ್ಜುನ ನಾಗಪ್ಪ ಹಾಗೂ ಅಧಿಕಾರಿಗಳು. ಬೆಲೆ ಕೇಳಿದ್ದಕ್ಕೆ ಇವರು ನೀಡಿದ್ದು ಲಾಠಿ ಏಟು, ಗೋಲಿಬಾರ್, ಹಾಗೂ ಸುಳ್ಳು ಮೊಕದ್ದಮೆ ಹೂಡಿ ಜೈಲಿಗೆ ತಳ್ಳಿದ್ದು. ಕೇಂದ್ರ ಸರ್ಕಾರದ ಆಮದು-ರಫ್ತು ನೀತಿಗೆ ಬಲಿಯಾಗುತ್ತಿರುವವರ ಸರದಿ ಮೆಕ್ಕೆಜೋಳ, ಭತ್ತ ಬೆಳೆದ ರೈತರದ್ದು.

ಮಂಟಿನ ಗೌಡ

ಕೊಪ್ಪಳ ತಾಲೂಕಿನ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಮೊದಲು ಎಲ್ಲಾ ಬೆಳೆಗಳನ್ನು ಸಮಾನನಾಗಿ ಬೆಳೆಯುತ್ತಿದ್ದರೂ, ಪ್ರಮುಖವಾಗಿ ಹತ್ತಿ, ಜೋಳ, ಶೇಂಗಾ, ಸೂರ್ಯಕಾಂತಿ, ಇನ್ನಿತರ ಬೆಳೆಗಳು ಪ್ರಮುಖ ಬೆಳೆಗಳಾಗಿದ್ದವು. ಆದರೆ ಈ ಬೆಳೆಗಳನ್ನು ಬೆಳೆಯಲು ತಗಲುವ ವೆಚ್ಚ ಅಧಿಕವಾಗಿ ರೈತರು ನಷ್ಟ ಅನುಭವಿಸುತ್ತಿರುವುದು ಒಂದು ಕಡೆಯಾದರೆ, ಕೇಂದ್ರ ಸರಕಾರದ ಹೊಸ ಆಮದು ನೀತಿಯಿಂದ ಕೂಡಾ ಹಾನಿಯುನ್ನು ಅನುಭವಿಸುತ್ತಿದ್ದಾರೆ. ಮೆಕ್ಕಜೋಳ ಇಳುವರಿ ಚೆನ್ನಾಗಿ ಬರುತ್ತದೆಯೆಂದು, ಇದ್ದದ್ದರಲ್ಲಿ ಒಳ್ಳೆ ಬೆಲೆ ಕೂಡಾ ಇದೆಯೆಂದು ಕಳೆದ ವರ್ಷಕ್ಕಿಂತ ಅಧಿಕ ಬೆಳೆಯನ್ನು ಬೆಳೆದರು. ಕಳೆದ ವರ್ಷ 3,42,395 ಕ್ವಿಂಟಾಲ್ ಮಾರುಕಟ್ಟೆಗೆ ಬಂದಿತ್ತು. ಆದರೆ ಈ 5 ತಿಂಗಳಲ್ಲೇ 67,380 ಕ್ವಿಂಟಾಲ್ ಮೆಕ್ಕೆಜೋಳ ಮಾರುಕಟ್ಟೆಗೆ ಬಂದಿದೆ. ಇನ್ನೂ ರೈತರ ಹತ್ತಿರ ಬಹಳ ಸಂಗ್ರಹವಿದ್ದು ಏಕಾಏಕಿ ಬೆಲೆ ಕುಸಿದು 225 ರೂ ಗೆ. ಒಂದು ಕ್ವಿಂಟಾಲಾಯಿತು. ಇದರಿಂದ ರೈತರು ಸ್ವಯಂಸ್ಫೂರ್ತಿಯಿಂದ ಹೋರಾಟಕ್ಕೆ ಇಳಿದರು.

ಕೊಪ್ಪಳ ನಗರದಲ್ಲಿ ಅಕ್ಟೋಬರ್ 16 ರಂದು ಮೆಕ್ಕೆಜೋಳಕ್ಕೆ ಬೆಂಬಲ ಬೆಲೆ ನಿಗದಿ ಮಾಡಲು ಒತ್ತಾಯಿಸಿ ರೈತರು ಹೋರಾಟವನ್ನು ಪ್ರಾರಂಭ ಮಾಡಿದರು. ಆಗ ಸರ್ಕಾರ 445 ರೂ. ಗೆ ಒಂದು ಕ್ವಿಂಟಾಲ್ ಮೆಕ್ಕೆ ಜೋಳವನ್ನು ಖರೀದಿಸಲು ಸೂಚಿಸಿ ಒಂದು ಖರೀದಿ ಕೇಂದ್ರವನ್ನು ಕೊಪ್ಪಳದಲ್ಲಿ ತೆರೆಯಲಾಯಿತು. ಅಲ್ಲಿ ಮೆಕ್ಕೆ ಜೋಳವನ್ನು ಎಬಿಸಿಡಿ ಎಂದು ವರ್ಗೀಕರಿಸಿ ಖರೀದಿ ಮಾಡಲು ಪ್ರಾರಂಭ ಮಾಡಲಾಯಿತು. ಮೊದಲು ಎ ಗ್ರೇಡ್ ಜೋಳವನ್ನು ಖರೀದಿ ಮಾಡಲಾಗುವುದು ಎಂದು ಹೇಳಿ ಉಳಿದ ಗ್ರೇಡ್ ಗಳ ಬಗ್ಗೆ ಸರಕಾರದಿಂದ ಸೂಚನೆ ಬಂದ ನಂತರ ಖರೀದಿ ಮಾಡಲಾಗುವುದು ಎಂದು ಹೇಳಿ, ರೈತರ ಜೋಳಕ್ಕಿಂತ ಹೆಚ್ಚಾಗಿ ದಲ್ಲಾಳಿಗಳ ಜೋಳವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿ ಮಾಡಲಾಯಿತು. ಇದರಿಂದ ರೊಚ್ಚಿಗೆದ್ದ ರೈತರು ಅಕ್ಟೋಬರ್ 23 ರಂದು ಪುನಃ ಹೋರಾಟಕ್ಕೆ ಮುಂದಾದರು. ಆಗ ರೈತ ಮುಖಂಡ ಎಂದು ಹೇಳಿಕೊಂಡು ಬಂದ ಬಿಜೆಪಿ ರೈತ ಮೋರ್ಚಾದ ಹುರಕಡ್ಲಿ ಕೊಟ್ರಗೌಡ ಎಂಬುವರು ರೈತರ ಪರ ವಹಿಸದೆ ಸರಕಾರದ ಪರವಾಗಿ ಸಮಾಜಾಯಿಸಲು ಪ್ರಯತ್ನಿಸಿದಾಗ ರೈತರು ಈ ಮುಖಂಡನನ್ನು ಓಡಿಸಿದರು. ರೈತರ ಹಾಗೂ ಅಧಿಕಾರಿಗಳ ಜಂಟಿ ಸಭೆ ಆಗಿ ಎಲ್ಲಾ ಜೋಳವನ್ನು ಖರೀದಿ ಮಾಡುತ್ತೇವೆ ಮತ್ತು ಈಗ ಆದ ತಾರತಮ್ಯವನ್ನು ಸರಿಪಡಿಸುತ್ತೇವೆ ಎಂದು ಹೇಳಿದ್ದರಿಂದ ರೈತರು ಅಂದಿನ ಹೋರಾಟವನ್ನು ಕೈಬಿಟ್ಟರು.

ಆದರೆ ಈ ತಾರತಮ್ಯ ನಿಲ್ಲದೆ ಉಳಿದ ಜೋಳದ ಖರೀದಿ ಬಗ್ಗೆ ಯಾವುದೇ ಪ್ರಯತ್ನವಿಲ್ಲದೆ ಇದ್ದುದರಿಂದ ದಿನಾಂಕ 30.10.2000 ದಂದು ರೈತರು ತಮ್ಮ ಮೆಕ್ಕೆ ಜೋಳವನ್ನು ಖರೀದಿ ಮಾಡಲು ಒತ್ತಾಯಿಸಿ ಹೋರಾಟವನ್ನು ಮುಂದುವರೆಸಿದರು. ಈ ಹೋರಾಟ ಯಾವುದೇ ನೇತೃತ್ವವಿಲ್ಲದ ಸ್ವಯಂಪ್ರೇರಿತ ಹೋರಾಟವಾಗಿದ್ದು ರೈತರು ತಮಗೆ ತೋಚಿದ ತೀರ್ಮಾನಗಳನ್ನು ಮಾಡಿ ತಕ್ಷಣ ಜಾರಿ ಮಾಡಲು ಪ್ರಾರಂಭಿಸಿದರು. ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಎಲ್ಲಾ ರೈತರು ತಮ್ಮ ಜೋಳ ಸಮೇತ ತೆರಳಿ ತಮ್ಮ ಜೋಳವನ್ನು ಖರೀದಿ ಮಾಡಲು ಒತ್ತಾಯಿಸಿದರು. ರೈತರನ್ನು ಸಮಾಧಾನ ಮಾಡುವಲ್ಲಿ ವಿಫಲರಾದಾಗ ತಾಳ್ಮೆಗೆಟ್ಟ ಜಿಲ್ಲಾಧಿಕಾರಿಗಳು ರೈತರನ್ನು ತುಚ್ಛವಾಗಿ ಬೈದರು. ಇದರಿಂದ ರೊಚ್ಚಿಗೆದ್ದ ರೈತರು ರಾಷ್ಟ್ರೀಯ ಹೆದ್ದಾರಿಯಾದ 64 ರಲ್ಲಿ ರಸ್ತೆ ತಡೆ ಮಾಡಲು ಪ್ರಾರಂಭ ಮಾಡಿದರು. ಚಳುವಳಿ ನಿರತ ರೈತರನ್ನು ಚದುರಿಸಲು ಪ್ರಯತ್ನಿಸಿದಾಗ ರೈತರು ಬಗ್ಗಲಿಲ್ಲ. ಆಗ ತಹಶೀಲ್ದಾರ ನಾಗಪ್ಪನವರು ರೈತರ ಮೇಲೆ ಲಾಠಿ ಚಾರ್ಜ್ ಮಾಡಲು ಆದೇಶ ನೀಡಿ ರೈತರನ್ನು ಅಮಾನುಷವಾಗಿ ಚಚ್ಚಿ ಓಡಿಸಲು ಪ್ರಯತ್ನ ಮಾಡಿದ್ದಾರೆ. ಆಗ ಯಾವುದೇ ಕೇಸನ್ನು ಮಾಡದ ಪೋಲೀಸರು ರಾತ್ರಿ 30 ಮುಗ್ಧ ಜನರ ಮೇಲೆ ಕೇಸ್ ಹಾಕಿ ಅವರನ್ನು ಬಂಧಿಸಿ ಗಂಗಾವತಿ ಕಾರಾಗೃಹಕ್ಕೆ ಕಳುಹಿಸಿದ್ದಾರೆ. 2.11.2000 ರಂದು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ದಿನಾಂಕ 2.11.2000 ದಂದು ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಭೇಟಿ ನೀಡಿ ಪತ್ರಿಕಾ ಸಮ್ಮೇಳನ ಮಾಡಿ ರೈತರ ಇಂದಿನ ಪರಿಸ್ಥಿತಿ ಬಗ್ಗೆ ವಿವರಣೆ ನೀಡಿದರು. ಸರಕಾರದ ಆಮದು ನೀತಿಯಿಂದ ಈ ಪರಿಸ್ಥಿತಿ ಬಂದಿದೆ. ಇದಕ್ಕೆ ಪ್ರತಿಯಾಗಿ ರೈತರು ಸುದೀರ್ಘ ಹೋರಾಟ ಮಾಡಬೇಕು ಇಲ್ಲವಾದರೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ರೈತರು ಇಷ್ಟೆಲ್ಲ ಸಂಕಷ್ಟಕ್ಕೀಡಾಗಿ ಪರದಾಡುತ್ತಿರುವಾಗ ಜಿಲ್ಲಾ ಆಡಳಿತವಾಗಲೀ ಅಥವಾ ರಾಜ್ಯ ಸರಕಾರವಾಗಲಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಜಿಲ್ಲೆಯ ಉಸ್ತುವಾರಿ ಸಚಿವ ಮಲ್ಲಿಕಾರ್ಜುನ ನಾಗಪ್ಪ ರೈತರೊಡನೆ ಚರ್ಚೆ ಮಾಡದೆ ಕೇವಲ ತನ್ನ ವ್ಯವಹಾರದಲ್ಲಿ ಅಂದರೆ ಬಡ್ಡಿ ವ್ಯವಹಾರದಲ್ಲಿ ತೊಡಗಿದ್ದಾನೆ. ಆತನು ಒಬ್ಬ ದಲ್ಲಾಳಿಯಾಗಿದ್ದು ಗಂಗಾವತಿಯಲ್ಲಿ ತನ್ನ ವ್ಯವಹಾರವನ್ನು ನೋಡಿಕೊಳ್ಳುವುದರಲ್ಲಿ ಮಗ್ನನಾಗಿದ್ದಾನೆ. ಸರಕಾರ ಕೂಡಲೇ ಮಧ್ಯಸ್ಥಿಕೆ ವಹಿಸಿ ನಿಭಾಯಿಸಿದರೆ ಇಂತಹ ಅನಾಹುತವನ್ನು ತಪ್ಪಿಸಬಹುದಿತ್ತು ಎಂದು ಅವರು ಅಭಿಪ್ರಾಯಪಟ್ಟರು. ಮುಂದೆ ಕೆ.ಪಿ.ಆರ್.ಎಸ್. ನೇತೃತ್ವದಲ್ಲಿ ಹಳ್ಳಿಗಳಲ್ಲಿ ಜೀಪ್ ಜಾಥಾ ಮಾಡಿ ಜಿಲ್ಲಾಧಿಕಾರಿಗಳ ಕಛೇರಿ ಎದುರು ಧರಣಿ ಮಾಡಲಾಗುವುದು. 15.11.2000 ದಂದು ಕೊಪ್ಪಳ ಬಂದ್ ಮಾಡಿ ಸರಕಾರದ ಗಮನ ಸೆಳೆಯಲು ನಿರ್ಧರಿಸಲಾಗಿದೆ.

ಗಂಗಾವತಿಯಲ್ಲಿ ಗೋಲಿಬಾರ್

ಗಂಗಾವತಿ ತಾಲ್ಲೂಕು ಕೊಪ್ಪಳ ಜಿಲ್ಲೆಯಲ್ಲಿ ಅತಿ ಪ್ರಮುಖ ತಾಲ್ಲೂಕಾಗಿದ್ದು ಇದು ವ್ಯಾಪಾರ ಕೇಂದ್ರವಾಗಿದೆ. ಇಡೀ ಜಿಲ್ಲೆಯ ಗಮನ ಸೆಳೆದಿದೆ. ಈ ತಾಲೂಕಿನಲ್ಲಿ ಸುಮಾರು 85 ಅಕ್ಕಿ ಗಿರಣಿ (ರೈಸ್ ಮಿಲ್)ಗಳಿದ್ದು ಇಲ್ಲಿಯ ದುಡಿಯುವ ಜನತೆ ಹೆಚ್ಚಾಗಿ ರೈಸ್ ಮಿಲ್‌ಗಳನ್ನು ಅವಲಂಬಿಸಿದ್ದಾರೆ. ಬೇರೆ ಕಡೆಯಿಂದ ತಮ್ಮ ಉಪ ಜೀವನಕ್ಕಾಗಿ ಕೂಲಿಗಾಗಿ ಬಂದ ಜನರು ಅಧಿಕವಾಗಿದ್ದಾರೆ. ಇಲ್ಲಿ ತುಂಗಭದ್ರ ಎಡದಂಡೆ ಕಾಲುವೆ ಹರಿದಿದ್ದು ಇದರಿಂದ ನೀರಾವರಿ ಹೆಚ್ಚಾಗಿದೆ. ಇಲ್ಲಿಯ ರೈತರು ಪ್ರಮುಖ ಬೆಳೆಯಾಗಿ ಭತ್ತವನ್ನು ಬೆಳೆಯುತ್ತಿದ್ದು ರೈತರು ಬೆಳೆದ ಭತ್ತದ ಮೇಲೆ ಈ ಮಿಲ್‌ಗಳು, ಅವುಗಳನ್ನು ದುಡಿಯುವ ಕಾರ್ಮಿಕರು ಅವಲಂಬಿಸಿದ್ದಾರೆ. ವಿವಿಧ ಕಡೆಯಿಂದ ಬಂದ ಕೂಲಿಗಳು ಕೂಡಾ ಭತ್ತದ ಮೇಲೆ ಅವಲಂಬಿಸಿದ್ದಾರೆ. ಇಲ್ಲಿನ ರೈತರು ಭತ್ತ ಬೆಳೆಯಲು ವಿವಿಧ ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳನ್ನು ಉಪಯೋಗಿಸುವುದು ಅನಿವಾರ್ಯವಾಗಿದೆ. ಇದರಿಂದ ಒಂದು ಎಕರೆಗೆ ಕನಿಷ್ಟ 10 ಸಾವಿರ ರೂ. ಖರ್ಚು ತಗಲುತ್ತಿದೆ. ಇಷ್ಟು ಹಣ ಖರ್ಚು ಮಾಡದೇ ಇದ್ದರೆ ಇಳುವರಿ ಬರುವುದಿಲ್ಲ. ಹೀಗಾಗಿ ರೈತರಿಗೆ 70 ಕೆ.ಜಿ. ಭತ್ತಕ್ಕೆ 500 ರೂ. ಕನಿಷ್ಟ ಬೆಲೆಯನ್ನು ನಿಗಧಿ ಮಾಡಬೇಕೆಂದು ಸ್ವಯಂ ಸ್ಫೂರ್ತಿಯಿಂದ ಹೋರಾಟ ಮಾಡಲು ಪ್ರಾರಂಭ ಮಾಡಿದರು.



ಬೆಲೆ ಕುಸಿತದಿಂದ ಆಕ್ರೋಶಗೊಂಡ ರೈತರು

ಗಂಗಾವತಿಯಲ್ಲಿ ಭತ್ತದ ಬೆಳೆಗೆ ಬೆಂಬಲ ಬೆಲೆ ಪ್ರಕಟಿಸಲು ಒತ್ತಾಯಿಸಿ ರೈತರು ಹೋರಾಟವನ್ನು ದಿನಾಂಕ 13.11.2000 ರಂದು ಪ್ರಾರಂಭ ಮಾಡಿದರು. ಭತ್ತಕ್ಕೆ ಕಳೆದ ವರ್ಷ 450 ರೂ. ನಿಗದಿ ಮಾಡಿ ಖರೀದಿ ಮಾಡಲು ಸಚಿವರ ಅಧ್ಯಕ್ಷತೆಯಲ್ಲಿ ತೀರ್ಮಾನವಾಗಿತ್ತು. ನಂತರ ಸಚಿವ ಮಲ್ಲಿಕಾರ್ಜುನ ನಾಗಪ್ಪ ಇವರು ವ್ಯಾಪಾರಸ್ಥರ ಸಭೆ ಕರೆದು "ಯಾರೂ ಭತ್ತವನ್ನು ಈ ಬೆಲೆಗೆ ಖರೀದಿ ಮಾಡಬೇಡಿ" ಎಂದು ಹೇಳಿ ಖರೀದಿಯನ್ನು ನಿಲ್ಲಿಸಿದರು. ಇದಕ್ಕೆ ಕಾರಣ ಸಚಿವರದೇ ಹಲವಾರು ರೈಸ್ ಮಿಲ್‌ಗಳು ಹಾಗೂ 40 ದಲ್ಲಾಳಿ ಅಂಗಡಿಗಳು ಇರುವವು. ಇವುಗಳಲ್ಲದೇ ಇವರ ಹತ್ತಿರದ ಸಂಬಂಧಿಗಳ ರೈಸ್‌ಮಿಲ್‌ಗಳು ಹಾಗೂ ದಲ್ಲಾಳಿ ಅಂಗಡಿಗಳು ಗಂಗಾವತಿ ತಾಲೂಕಿನಲ್ಲಿ ಹೆಚ್ಚಾಗಿದ್ದು 350 ರೂ. ಆದರೆ ನಮಗೆ ಕೊಡಿ ಎಂದು ಕೇವಲ ಒಂದು ವಾರದ ಒಳಗೆ ಬೆಲೆ ಮತ್ತೆ ಕುಸಿಯುವಂತೆ ಮಾಡಿದರು. ಸಚಿವರ ವ್ಯಾಪಾರಸ್ಥರ ಪರ ನಿಲುವು ಹಾಗೂ ರೈತರ ವಿರೋಧಿ ಕ್ರಮದಿಂದ ಕಳೆದ ಸಾಲಿನ ಭತ್ತ ರೈತರ ಹತ್ತಿರ ಇನ್ನೂ ಸಂಗ್ರಹವಿರುವಾಗಲೇ ಈಗ ಹೊಸ ಭತ್ತ ಮಾರುಕಟ್ಟೆಗೆ ಬರಲು ಪ್ರಾರಂಭವಾಗಿದೆ. ಇದರಿಂದ ಕಳೆದ ವರ್ಷದ ಭತ್ತದ ಜೊತೆಗೆ ಈ ವರ್ಷದ ಭತ್ತ ಬಹಳಷ್ಟು ಸಂಗ್ರಹವಾಗುವ ಸಾಧ್ಯತೆಗಳು ಇರುವವು. ಇದರಿಂದ ರೈತರು ಒಂದು ಚೀಲ, 7 ಕೆ.ಜಿ. ಕನಿಷ್ಟ 450 ಕ್ಕಿಂತ ಹೆಚ್ಚಿಗೆ ಕೇಳುತ್ತಿರುವರು. 70 ಕೆ.ಜಿ. ಭತ್ತಕ್ಕೆ 500 ರೂ. ಆದರೆ ಬೆಳೆ ತೆಗೆಯಲು ಆಗುವ ಖರ್ಚಿಗೆ ಸರಿಯಾಗುತ್ತದೆ. ಇಲ್ಲವಾದರೆ ರೈತರು ನಷ್ಟಕ್ಕೆ ಸಿಕ್ಕಿ ಹಾಳಾಗುವ ಸಾಧ್ಯತೆಗಳಿವೆ. ಇದನ್ನು ಅರಿತ ರೈತರು ನಮಗೆ ಸರಿಯಾದ ಬೆಲೆ ಸಿಗಬೇಕು ಎಂದು



ಭತ್ತದ ಬೆಲೆ ಕುಸಿತದಿಂದ ಕಂಗಾಲಾಗಿರುವ ರೈತರು

ಕೇಂದ್ರ ಸರ್ಕಾರ ಭತ್ತಕ್ಕೆ ಬೆಂಬಲ ಬೆಲೆ 510 ನಿಗದಿ ಪಡಿಸಿದೆ. ಕರ್ನಾಟಕದ ರಾಯಚೂರು, ಬಳ್ಳಾರಿ, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಪ್ರಮುಖ ಬೆಳೆಯಾದ ಭತ್ತದ ಬೆಲೆ ತೀವ್ರವಾಗಿ ಕುಸಿದು 300 ರೂಗಳಿಗೆ ಒಂದು ಕ್ವಿಂಟಾಲ್ ಆಗಿದೆ. ಇಷ್ಟು ತೀವ್ರವಾಗಿ ಪ್ರತಿ ಕ್ವಿಂಟಾಲ್‌ಗೆ ಘೋಷಿತ ಬೆಂಬಲ ಬೆಲೆಗಿಂತಲೂ 200 ರೂ ಗಳವರೆಗೆ ಕಡಿಮೆಯಿದ್ದು ಕೇಂದ್ರ ಸರ್ಕಾರ ಭಾರತ ಆಹಾರ ನಿಗಮದ ಮೂಲಕ ಖರೀದಿ ಮಾಡಬೇಕೆಂದು ಒತ್ತಾಯಿಸಿ ಪ್ರತಿಭಟನೆ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರ ಭತ್ತ ಖರೀದಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬೇಕಿತ್ತು. ಇಲ್ಲವೆ ತಾನೇ ಮುಂದಾಗಿ ಭತ್ತ ಖರೀದಿಸಬೇಕಿತ್ತು. ರೈತರ ಕಷ್ಟ ಪರಿಹರಿಸಲು ಮುಂದಾಗದೇ ಶಾಂತಿಯುತ ಪ್ರತಿಭಟನೆ ನಿರತ ರೈತರ ಮೇಲೆ ಗುಂಡು ಹಾರಿಸಲಾಗಿದೆ. ಪೊಲೀಸ್ ದೌರ್ಜನ್ಯದ ಮೂಲಕ ರೈತರ ಚಳುವಳಿ ಹತ್ತಿಕ್ಕಿ ಸಮಸ್ಯೆಗಳನ್ನು ಪರಿಹರಿಸದೆ ನಿಷೇಧಾಜ್ಞೆ ಹೇರಲಾಗಿದೆ.

ಬರ್ಮಾ, ಥೈಲ್ಯಾಂಡ್, ಅರಬ್ ದೇಶಗಳಿಗೆ ಅಕ್ಕಿ ರಫ್ತು ಮಾಡುವುದನ್ನು ಕೇಂದ್ರ ಸರ್ಕಾರ ಕೈ ಬಿಟ್ಟಿರುವುದು ಮತ್ತು ಆಮದು ಮಾಡಿಕೊಳ್ಳುವುದು ಇಂದಿನ ಭತ್ತದ ಬೆಲೆ ಕುಸಿಯಲು ಕಾರಣವಾಗಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಆಮದು ರಫ್ತು ನೀತಿ ವಿರುದ್ಧ ರಾಜ್ಯದ ಕಾಂಗ್ರೆಸ್ ಸರ್ಕಾರ ಪ್ರತಿಭಟಿಸದೇ ಅದೇ ಹಾದಿಯನ್ನು ಹಿಡಿದಿದೆ. ರೈತರನ್ನು ರಕ್ಷಿಸುವ ದಿಶೆಯಲ್ಲಿ ಸೂಕ್ತ ಬೆಲೆ ನಿಗದಿ ಮಾಡಿ ಸರ್ಕಾರವು ಭತ್ತದ ಖರೀದಿ ಕೂಡಲೇ ಆರಂಭಿಸಬೇಕು. ಹೆಚ್ಚು ಖರೀದಿಸುವ ಕೇಂದ್ರಗಳನ್ನು ತೆರೆಯ ಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘ ಆಗ್ರಹಿಸಿದೆ.

...ಾಸುಂಡೆ

...ೀರಾಟವನ್ನು ಪ್ರಾರಂಭ ಮಾಡಿದರು. ಈಗ
...ಕ್ಕೆ 320 ರೂ.ಗೆ ಭತ್ತ ಖರೀದಿಸುತ್ತಿದ್ದು ರೈತರು
...ಾಲಾಗಿದ್ದಾರೆ. ಕಳೆದ ವರ್ಷ 450 ರೂ. ಇದ್ದದ್ದು
... ವರ್ಷ ಏಕಾಏಕಿ 320 ರೂ. ಇಳಿದದ್ದು ಇನ್ನೂ
...ಕೆಯಾಗುವ ಸಾಧ್ಯತೆಯನ್ನು ನೋಡಿ ರೈತರು



...ತರಾಗಿ ಹೋರಾಟಕ್ಕಿಳಿದಿರುವುದು

...ಯಂಸ್ಫೂರ್ತಿಯಿಂದ ಹೋರಾಟಕ್ಕೆ ಮುಂದಾದರು.
...ೆಂಬರ್ 3 ರಂದು ಜಿಲ್ಲಾ ಉಸ್ತುವಾರಿ ಸಚಿವ
...ಲ್ಲಿಕಾರ್ಜುನ ನಾಗಪ್ಪನವರು ರೈತರ ಹಾಗೂ
...ಧಿಕಾರಿಗಳ, ವ್ಯಾಪಾರಸ್ಥರ ಜಂಟಿ ಸಭೆಯನ್ನು
...ೆಯುವುದಾಗಿ ತೀರ್ಮಾನಿಸಿದರು.
... ದಿನಾಂಕ 6.11.2000 ರಂದು ರೈತರು ಹೆಚ್ಚಿನ
...ಮಾಣದಲ್ಲಿ ನಗರದ ಎಪಿಎಂಸಿ ಯಲ್ಲಿ
...ಮಾಯಿಸಿದರು. ಈ ಮೊದಲೇ ನಿಗದಿಯಾದಂತೆ
...ಗರದ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ
...ೆ ಸೇರಿಸಲಾಗಿತ್ತು. ಈ ಸಭೆಗೆ ರೈತ ಮುಖಂಡರು
...ಗವಹಿಸಲಿಲ್ಲ ಬದಲಾಗಿ ಎಪಿಎಂಸಿಗೆ ಎಲ್ಲರನ್ನು
...ರಲು ಒತ್ತಾಯಿಸಿದರು. ಇದಕ್ಕೆ ಅಧಿಕಾರಿಗಳು
...ಗೂ ಸಚಿವರು ಒಪ್ಪಲಿಲ್ಲ. ಕೊನೆಗೆ
...ಯಂಕಾಲ 3.00 ಗಂಟೆಗೆ ಬಿಜೆಪಿಯ ರೈತ
...ೋರ್ಚಾದ ಮುಖಂಡರು ಇದರ ನೇತೃತ್ವವಹಿಸಿ
...ಲ್ಲೂಕು ಪಂಚಾಯತ್‌ಗೆ ಹೋಗಲು
...ರ್ಧರಿಸಿದರು. ಆಗ ಅಲ್ಲಿ ಜಮಾಯಿಸಿದ ರೈತರು
...ಪ್ಪಿಗೆ ನೀಡಲಿಲ್ಲ. ಇದನ್ನು ಪರಿಗಣಿಸದೇ ಈ
...ಯಕರು ರೈತರ ಪರವಾಗಿ ಮಾತುಕತೆಗೆ
...ೋಗಲು ಮುಂದಾದರು. ನಗರದ ಪೋಲೀಸ್
...ೆ ಎದುರು ಈ ಮುಖಂಡರನ್ನು ರೈತರು
...ಡ್ಡಗಟ್ಟಿದರು ನಿಮ್ಮನ್ನು ಹೋಗಲು ಬಿಡುವುದಿಲ್ಲ
...ದು. ಆಗ ಈ ಮುಖಂಡರು ಮೊಂಡುತನದಿಂದ
...ುನ್ನುಗ್ಗಲು ಯತ್ನಿಸಿದಾಗ ರೈತರು ಈ ಬಿಜೆಪಿ
...ುಖಂಡರನ್ನು ಥಳಿಸಿ ಓಡಿಸಿದರು. ನಂತರ ಎರಡು
...ಂಪನ್ನು ಚದುರಿಸಲು ಪೋಲೀಸರು ಲಾಠಿ
...ಾರ್ಜ್ ಮಾಡಿದರು. ಇದರಿಂದ ರೊಚ್ಚಿಗೆದ್ದ ರೈತರು
...ವರ ಮನೆಗೆ ಹೋಗಲು ನಿರ್ಧರಿಸಿ ಹೋಗಲು
...ತ್ನಿಸಿದಾಗ ಪೋಲೀಸರು ಮತ್ತೆ ತಡೆಯಲು
...ುಂದಾದರು. ಪೋಲೀಸರ ಅಡ್ಡಗೋಡೆಯನ್ನು
...ಧಿಸಿ ರೈತರು ಮುನ್ನುಗ್ಗಲು ಯತ್ನಿಸಿದಾಗ
...ೋಲೀಸರು ಗೋಲಿಬಾರ್ ಮಾಡಿದರು. ಇದರಲ್ಲಿ
...ಬ್ಬರಿಗೆ ಗಾಯವಾಗಿದ್ದು ಆಸ್ಪತ್ರೆಗೆ ಸೇರಿಸಲಾಗಿದೆ.
...ರ ಮೇಲೆ ಮೊಕದ್ದಮೆ ಹೂಡಲಾಗಿದೆ.
...ಾವತಿಯಲ್ಲಿ 144 ಕಲಂ ಜಾರಿ ಮಾಡಿ ಜನರಲ್ಲಿ
...ದು ಭಯದ ವಾತಾವರಣ ನಿರ್ಮಾಣ
...ಡಲಾಗಿದೆ. ಇದು ರೈತರ ಸಮಸ್ಯೆಗಳನ್ನು
...ಹರಿಸುವ ರೀತಿ.

ವಿದ್ಯುತ್ ದರ ಹೆಚ್ಚಳ ಸೂಚನೆಗೆ ತೀವ್ರ ಆಕ್ಷೇಪ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್-ಹಿಂದಿನ ಕೆಇಬಿ) ಸೂಚಿಸಿದಂತೆ ವಿದ್ಯುತ್ ದರವನ್ನು ಹೆಚ್ಚಿಸಿದ್ದೇ ಆದಲ್ಲಿ ಆಂಧ್ರ ಮಾದರಿಯ ವ್ಯಾಪಕ ಚಳುವಳಿಯನ್ನು ಕರ್ನಾಟಕದಲ್ಲೂ ಎದುರಿಸಬೇಕಾಗುವುದು. ವಿದ್ಯುತ್ ದರಗಳನ್ನು ಹೆಚ್ಚಿಸಲು ಕೆಪಿಟಿಸಿಎಲ್ ನೀಡಿದ ಕಾರಣಗಳು ಅಸಮರ್ಥನೀಯ, ಅತಾರ್ಕಿಕ ಮತ್ತು ಅವೈಜ್ಞಾನಿಕ.

ಸಾಧಾರಣ ನೂರು ವರ್ಷಗಳ ಹಿಂದೆ(1902 ರಲ್ಲಿ) ಶಿವನಸಮುದ್ರದಲ್ಲಿ ವಿದ್ಯುತ್ ಉತ್ಪಾದನೆ ಆರಂಭಿಸಿದ ಹೆಗ್ಗಳಿಕೆ ಹೊಂದಿದ ಕರ್ನಾಟಕ ಅತ್ಯಂತ ಕಡಿಮೆ ದರದಲ್ಲಿ ಜಲ ವಿದ್ಯುತ್ ಉತ್ಪಾದಿಸಿ ಗ್ರಾಹಕರಿಗೆ ನೀಡುವ ಸೌಲಭ್ಯ ಹೊಂದಿದೆ. ಅಂತೆಯೇ ಶರಾವತಿಯಲ್ಲಿ ಉತ್ಪಾದಿಸಲಾಗುತ್ತಿರುವ ವಿದ್ಯುತ್ತನ್ನು ಪ್ರತಿ ಯೂನಿಟ್‌ಗೆ 12.5 ಪೈಸೆಯಂತೆ ಕೆಪಿಟಿಸಿಎಲ್‌ಗೆ ನೀಡಲಾಗುತ್ತಿದ್ದು, ನಾಗಝರಿ ಯಿಂದ ಪೂರೈಕೆಯಾಗುವ ವಿದ್ಯುತ್ ಯೂನಿಟ್‌ಗೆ 56ಪೈಸೆ ಮಾತ್ರ. ವರಾಹಿ, ಕಾಳಿ ಇತ್ಯಾದಿ ಜಲ ವಿದ್ಯುತ್ ಎಲ್ಲವನ್ನು ಒಟ್ಟುಗೂಡಿಸಿದರೆ ಸರಾಸರಿ ವೆಚ್ಚ ಯೂನಿಟ್‌ಗೆ 38 ಪೈಸೆ ಮಾತ್ರ. ಒಟ್ಟು ವಿದ್ಯುತ್ ಉತ್ಪಾದನೆಯ ಅರ್ಧದಷ್ಟು(ಸಾಧಾರಣ ಶೇ 45) ಜಲವಿದ್ಯುತ್ ಆಗಿದ್ದು, ಅತ್ಯಂತ ಕಡಿಮೆ ದರದಲ್ಲಿ ಉತ್ಪಾದನೆಯಾಗುತ್ತಿದೆ. ಪ್ರಕೃತಿದತ್ತ ಕೊಡುಗೆಯನ್ನು ಮಾನವ ಬಳಸಿದಾಗ ಇದು ಸಾಧ್ಯವಾಗುತ್ತದೆ.

ನೀರಾವರಿ, ಕೃಷಿ ಮತ್ತು ಗೃಹ ಬಳಕೆ ವಿದ್ಯುತ್‌ನ ಒಟ್ಟು ಬಳಕೆ ಹೆಚ್ಚು ಕಡಿಮೆ ಜಲ ವಿದ್ಯುತ್‌ನಿಂದ ಪೂರೈಕೆ ಮಾಡಬಹುದು. ಆದ್ದರಿಂದ ಈ ವಿಭಾಗದ ಜನರು ಬಳಸುವ ವಿದ್ಯುತ್‌ನಲ್ಲಿ 300 ಯುನಿಟ್‌ವರೆಗೆ ಯಾವುದೇ ಹೆಚ್ಚಳದ ಅಗತ್ಯ ಇಲ್ಲ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆ.ಇ.ಆರ್.ಸಿ.) ಕ್ಕೆ ನೀಡಿದ ತಕರಾರು ಅರ್ಜಿಯ ಪ್ರಮಾಣ ಪತ್ರದ ಪ್ರತಿಯನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿದರು. ಅದರಲ್ಲಿ ಮೇಲಿನ ಅಂಶಗಳು ಸೇರಿವೆ.

ಸಣ್ಣ ಕೈಗಾರಿಕೆಗಳು ಬಿಕ್ಕಟ್ಟಿನಲ್ಲಿವೆ. ಹೊಸ ಆರ್ಥಿಕ ನೀತಿಯ ಅಡಿಯಲ್ಲಿ ತತ್ತರಿಸುತ್ತಿರುವ ಈ ವಿಭಾಗದ ಕೈಗಾರಿಕೆಗಳಿಗೆ ವಿದ್ಯುತ್ ದರ ಹೆಚ್ಚಿಸಿದ್ದೇ ಆದಲ್ಲಿ ಮುಚ್ಚಿಕೊಂಡು ಹೋಗುತ್ತವೆ ಹಾಗೂ ನಿರುದ್ಯೋಗಿಗಳ ಸಾಗರಕ್ಕೆ ಇನ್ನೂ ಒಂದಿಷ್ಟು ಜನ ಸೇರಲಿದ್ದಾರೆ ಎಂದು ಎಚ್ಚರಿಸಲಾಗಿದೆ.

ವಿದ್ಯುತ್ ಕಳ್ಳತನ-ಸೂಕ್ತ ಕ್ರಮ ಅಗತ್ಯ:

ವಿದ್ಯುತ್ ದರ ಹೆಚ್ಚಿಸುವ ಬದಲಾಗಿ ಸರಬರಾಜು ನಷ್ಟ ಹಾಗೂ ಕಳ್ಳತನವನ್ನು ತಡೆಗಟ್ಟಬೇಕೆಂದು ಸಿಪಿಐ(ಎಂ) ಸೇರಿದಂತೆ ಹೆಚ್ಚಿನ ರಾಜಕೀಯ ಪಕ್ಷಗಳು ಹಾಗೂ ಪ್ರಗತಿಪರ ಸಂಘಟನೆಗಳು ಒತ್ತಾಯಿಸುತ್ತಾ ಬಂದಿವೆ. ಆದರೆ ವಿದ್ಯುತ್ ದರ ಹೆಚ್ಚಿದಂತೆಲ್ಲಾ, ವಿದ್ಯುತ್ ಕಳ್ಳತನವೂ ಹೆಚ್ಚುತ್ತಿದೆ. ವಿದ್ಯುತ್ ಸರಬರಾಜು ಮತ್ತು ವಿತರಣೆಯಲ್ಲಿ ಶೇ 13 ರಷ್ಟು ಕಳ್ಳತನವಾಗುತ್ತಿದೆಯೆಂದು ನಿಗಮವೇ ಒಪ್ಪಿಕೊಂಡಿದೆ. ಈ ಕಳ್ಳತನದಲ್ಲಿ ದೊಡ್ಡ ಕೈಗಾರಿಕೆಗಳು ಮತ್ತು ಉನ್ನತ ಅಧಿಕಾರಿಗಳು ಶಾಮೀಲಾಗಿದ್ದಾರೆಂದು ಬೇರೆ ಹೇಳಬೇಕಾಗಿಲ್ಲ. ಇದನ್ನು ತಡೆಯಲು ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು ತಕರಾರು ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ.

ಸಾವಿರಾರು ಕೋಟಿ ಅವ್ಯವಹಾರ:

ಕೆ.ಪಿ.ಟಿ.ಸಿ.ಎಲ್.ನಲ್ಲಿ ಸಾವಿರಾರು ಕೋಟಿ ರೂ. ಮೌಲ್ಯದ ಉಪಕರಣಗಳು(ಇನ್‌ವೆಂಟರಿ) ಕೊಳೆತು ನಾರುತ್ತಿದೆ. ಅರ್ಧಂಬರ್ಧ ಎಳೆದ ಲೈನು ಹಾಗೂ ಇತರೆ ಕೆಲಸಗಳಲ್ಲಿಯೂ ಸಾವಿರಾರು ಕೋಟಿ ರೂ. ಮೌಲ್ಯದ ವಸ್ತುಗಳು, ಉಪಕರಣಗಳು ವ್ಯರ್ಥವಾಗಿ ಬಿದ್ದಿವೆ. ಒಂದು ಅಂದಾಜಿನ ಪ್ರಕಾರ ಈ ಉಪಕರಣಗಳನ್ನು ಸರಿಯಾಗಿ ಉಪಯೋಗಿಸಿದಲ್ಲಿ 3 ಲಕ್ಷ ಪಂಪ್‌ಸೆಟ್ಟುಗಳಿಗೆ ಕೂಡಲೇ ಸಂಪರ್ಕ ಕಲ್ಪಿಸಬಹುದಾಗಿದೆ. ಈ ಅವ್ಯವಹಾರದ ಅನರ್ಥದಿಂದಾಗಿ ವಿದ್ಯುತ್ ಸರಬರಾಜು ವೆಚ್ಚ ಹೆಚ್ಚಾಗಿದೆ.

ರಾಜ್ಯ ಸರಕಾರದ ಸುಮಾರು 1200 ಕೋಟಿ ರೂ. ಬಾಕಿಯನ್ನು ನಿಗಮಕ್ಕೆ ನೀಡಬೇಕಾಗಿದೆ. ಜತೆಯಲ್ಲಿ ಗ್ರಾಮೀಣ ವಿದ್ಯುದೀಕರಣದ ಬಗ್ಗೆ 1050 ಕೋಟಿ ರೂ. ಸಬ್ಸಿಡಿಯ ಮೊತ್ತವನ್ನು ನಿಗಮಕ್ಕೆ ನೀಡಬೇಕಾಗಿದೆ. ಈ 2250 ಕೋಟಿಯಷ್ಟು ಹಣವನ್ನು ನೀಡಿದಲ್ಲಿ ನಿಗಮದ ಆರ್ಥಿಕ ಪರಿಸ್ಥಿತಿಯು ಸುಧಾರಿಸಿ, ಬಡ್ಡಿ ವೆಚ್ಚ ಕಡಿಮೆ ಆಗಿ, ಕಡಿಮೆ ದರದಲ್ಲಿ ವಿದ್ಯುತ್ ಪೂರೈಸಲು ಸಾಧ್ಯವಾಗುತ್ತದೆ.

ಈ ಹಣ ದೊರೆತಲ್ಲಿ ಕರ್ನಾಟಕ ವಿದ್ಯುತ್ ನಿಗಮ(ಕೆ.ಪಿ.ಸಿ)ಕ್ಕೆ ಕೆಪಿಟಿಸಿಎಲ್ (ಹಿಂದಿನ ಕೆಇಬಿ)ನೀಡಬೇಕಾಗಿರುವ ಸಾಧಾರಣ 1000 ಕೋಟಿ ರೂ. ಸಾಲವನ್ನು ವಾಪಾಸು ಮಾಡಬಹುದು. ಆ ಮೂಲಕ ಕೆಪಿಸಿಯು ಕಡಿಮೆ ವೆಚ್ಚದಲ್ಲಿ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಬಹುದು. ಈ ರೀತಿಯಾಗಿ ಪರ್ಯಾಯವಾಗಿ ಆಲೋಚಿಸುವ ಬದಲಾಗಿ ವಿದ್ಯುತ್ ದರ ಹೆಚ್ಚಿಸುವುದು ಹಾಗೂ ವಿದ್ಯುತ್ ಉತ್ಪಾದನೆ, ಸರಬರಾಜು, ಹಾಗೂ ವಿತರಣೆಯನ್ನು ಒಂದೊಂದಾಗಿ ಖಾಸಗಿ ಹಾಗೂ ವಿದೇಶಿ ಕಂಪನಿಗಳಿಗೆ ನೀಡುವ ಹುನ್ನಾರ ಹಾಗೂ ಅದರ ಹಿನ್ನೆಲೆಯಲ್ಲಿ ಬೆಲೆ ಏರಿಸುವ ನಾಟಕ ನಡೆಯುತ್ತಿದೆ ಎಂದು ಆಪಾದಿಸಲಾಗಿದೆ.

ರೈತರಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಪೂರೈಕೆಗೆ ಆಗ್ರಹ:

ರೈತರು ದೇಶದ ಜೀವಾಳ ಎಂದು ಭಾಷಣ ಬಿಗಿಯುವ ಆಳುವವರು ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆ ನಿಗದಿ ಪಡಿಸಿಲ್ಲ, ಮಾರುಕಟ್ಟೆ ಒದಗಿಸಿಲ್ಲ, ಜತೆಯಲ್ಲಿ ಬಿಜೆಪಿ ಸರ್ಕಾರದ ಹೊಸ ಆಮದು ನೀತಿಯಿಂದಾಗಿ ಕೃಷಿ ಕ್ಷೇತ್ರ ನಾಶವಾಗುತ್ತಿದೆ. ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ವಿದ್ಯುತ್ ದರ ಹೆಚ್ಚಿಸುವುದು, ಬಾಕಿ ವಸೂಲಿ ಹೆಸರಿನಲ್ಲಿ ಕಾನೂನು ಬಾಹಿರವಾಗಿ ಸಾವಿರಾರು ರೂಪಾಯಿ ವಸೂಲಿ ಮಾಡುವುದು, ರೈತರನ್ನು ಮತ್ತಷ್ಟು ಸಂಕಷ್ಟಕ್ಕೆ ತಳ್ಳಲಿದೆ. ಕೃಷಿ ಮತ್ತು ನೀರಾವರಿಗೆ ನೀಡುವ ವಿದ್ಯುತ್ ದರವನ್ನು ಹೆಚ್ಚಿಸುವ ಬದಲಾಗಿ ಈಗಿರುವ ಅಶ್ವಶಕ್ತಿ(HP) ಒಂದಕ್ಕೆ ರೂ. 300 ಬದಲಾಗಿ ರೂ. 200 ಕ್ಕೆ ಇಳಿಸಬೇಕೆಂದು ವಾದಿಸಲಾಗಿದೆ.

ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಮೂಲಕ ಅತ್ಯಂತ ಕಡು ಬಡವರಿಗೆ ಪೂರೈಸುವ ವಿದ್ಯುತ್ ದರ ಏರಿಸದಿರುವುದನ್ನು ಸ್ವಾಗತಿಸಿರುವ ಸಿಪಿಐ(ಎಂ) ಈಗ ನೀಡುತ್ತಿರುವ 18 ಯೂನಿಟ್‌ಗಳಿಗೆ ಬದಲಾಗಿ 36 ಯೂನಿಟ್‌ಗಳಿಗೆ ಹೆಚ್ಚಿಸಬೇಕೆಂದು ಒತ್ತಾಯಿಸಿದೆ. ಹಾಗೂ ಪ್ರತಿ ಯುನಿಟ್‌ಗೆ ನಿಗದಿಪಡಿಸಿರುವ ರೂ. 2.50 ಬದಲಾಗಿ ಉಚಿತವಾಗಿ ನೀಡಬೇಕೆಂದು ತಕರಾರು ಅರ್ಜಿಯಲ್ಲಿ ತಿಳಿಸಿದೆ.

ವರದಿ - **ಬಾಲಕೃಷ್ಣ ಶೆಟ್ಟಿ**

ನೀರಾವರಿ ವಿದ್ಯುತ್ ಪಂಪ್‌ಸೆಟ್ ರೈತರಿಂದ ಪ್ರತಿಭಟನೆ: ಪೋಲೀಸರಿಂದ ಸಾವಿರಾರು ರೈತರ ಬಂಧನ

ರಾಜ್ಯಮಟ್ಟದ ಹೋರಾಟದ ಅಂಗವಾಗಿ ನವೆಂಬರ್ 14 ರಂದು ವಿವಿಧ ಜಿಲ್ಲೆಗಳಿಂದ ಬಂದ ಸುಮಾರು ಎರಡು ಸಾವಿರ ರೈತರು ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ ಹೊರಟು ಬೆಂಗಳೂರಿನ ಕೆಪಿಟಿಸಿಎಲ್ ನ ಕೇಂದ್ರ ಕಛೇರಿ ಮುಂದೆ ಬೃಹತ್ ಪ್ರತಿಭಟನೆ ನಡೆಸಿದರು. ನೆರೆದಿದ್ದ ರೈತರನ್ನುದ್ದೇಶಿಸಿ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡುತ್ತಾ 'ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರು ವಿಶ್ವಬ್ಯಾಂಕ್ ಅಧ್ಯಕ್ಷರೊಂದಿಗೆ ಸಾಲಗಳ ಹೊಸ ಒಪ್ಪಂದಗಳಿಗೆ ಸಹಿ ಮಾಡಿದ್ದು, ರೈತ ವಿರೋಧಿ ಶರತ್ತುಗಳಿಗೆ ಒಪ್ಪಿಗೆ ನೀಡಿದ್ದಾರೆ. ಅದರಲ್ಲಿ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸುವುದು, ನೀರಾವರಿ ಪಂಪ್‌ಸೆಟ್‌ಗಳಿಗೆ ಮೀಟರ್‌ಗಳನ್ನು ಅಳವಡಿಸಲು, ವಿದ್ಯುತ್ ದರಗಳನ್ನು ತೀವ್ರವಾಗಿ ಏರಿಕೆ ಮಾಡುವ ವಿಚಾರಗಳಿವೆ. ಕೆಪಿಟಿಸಿಎಲ್‌ಗೆ ಮೂರುವರೆ ಸಾವಿರ ಕೋಟಿ ರೂಪಾಯಿಗಳ ಬಾಕಿ ಇರುವ ಸರ್ಕಾರ ರೈತರಿಂದ ವಿವರಗಳಿಲ್ಲದ, ಬಾಕಿ ವಸೂಲಿಗಾಗಿ ದುಬಾರಿ ವಿದ್ಯುತ್ ಬಿಲ್ಲುಗಳನ್ನು ನೀಡಿರುವುದು ಖಂಡನೀಯ" ಎಂದರು. "ಆಂಧ್ರದಲ್ಲಿ ವಿದ್ಯುತ್ ದರ ಏರಿಕೆಯ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ಕರ್ನಾಟಕದ ಜನರ ಮೇಲೆ ವಿದ್ಯುತ್ ದರಗಳನ್ನು ಏರಿಸುವ ತೀರ್ಮಾನದ ಮೂಲಕ ದ್ವಿಮುಖ ನೀತಿಯನ್ನು ಅನುಸರಿಸುತ್ತಿದೆ" ಎಂದರು. ಕಾಂಗ್ರೆಸ್ ಪಕ್ಷದ ಜನವಿರೋಧಿ ವಿಶ್ವಬ್ಯಾಂಕ್ ಪರ ನೀತಿಯನ್ನು ರೈತರು ಬಯಲುಗೊಳಿಸಲು ಕರೆ ನೀಡಿದರು.

ರಾಜ್ಯದ ಸಿಐಟಿಯು ಅಧ್ಯಕ್ಷರು, ಕಾರ್ಮಿಕ ಮುಖಂಡರಾದ ಎಸ್.ಸೂರ್ಯನಾರಾಯಣ ರಾವ್‌ರವರು ಕೇಂದ್ರ-ರಾಜ್ಯ ಸರ್ಕಾರಗಳ ಖಾಸಗೀಕರಣ ನೀತಿಯನ್ನು ಹಿಮ್ಮೆಟ್ಟಿಸಲು ಕರೆ ನೀಡಿದರು. ಆಡಳಿತ ನಡೆಸುತ್ತಿರುವ ಸರ್ಕಾರದ ಮುಂದಿಗೆ ರೈತರ ಕೂಗು ಕೇಳಿಸುವಂತೆ ರಾಜ್ಯಾದ್ಯಂತ ದೊಡ್ಡ ಹೋರಾಟಗಳನ್ನು ನಡೆಸಲು ಕರೆ ನೀಡಿ, ರೈತರ ಹೋರಾಟಕ್ಕೆ ಕಾರ್ಮಿಕರ ಬೆಂಬಲ ನೀಡುವರೆಂದು ತಿಳಿಸಿದರು.

ರೈತ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ, ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಉಪಾಧ್ಯಕ್ಷ ಪಿ.ಜಗನ್ನಾಥ್ ಮುಂತಾದವರು ಪ್ರತಿಭಟನೆ ನೇತೃತ್ವ ವಹಿಸಿದ್ದರು.





ಜ್ಯೋತಿಬಸು ಲಾಲ್‌ಸಲಾಮ್

ನವೆಂಬರ್ 6, 2000 - ಕಲ್ಕತ್ತದ ನೇತಾಜಿ ಇಂಡೋರ್ ಸ್ಟೇಡಿಯಂ ಕಿಕ್ಕಿರಿದು ತುಂಬಿತ್ತು. 23 ವರ್ಷಗಳ ಕಾಲ ಅವಿರತ ಮುಖ್ಯಮಂತ್ರಿಯಾಗಿದ್ದ ಕಾಮ್ರೇಡ್ ಜ್ಯೋತಿಬಸು ಅವರಿಗೆ ಹೃದಯಸ್ಪರ್ಶಿ ಬೀಳ್ಕೊಡುಗೆ. 8540 ದಿನಗಳ ಕಾಲ ಮುಖ್ಯಮಂತ್ರಿಯಾಗಿದ್ದ ಬಸುರವರನ್ನು 8540 ಗುಲಾಬಿಯ ಗೊಂಚಲು ನೀಡಿ ಗೌರವಿಸಿದರು. ಕಲ್ಕತ್ತದ ಖಾಸಗಿ ಟಿ.ವಿ. ಚಾನಲ್‌ಗಳು ಈ ಸುಂದರ ಐತಿಹಾಸಿಕ ಸಮಾರಂಭವನ್ನು ಸೆರೆ ಹಿಡಿಯಲು ಮರೆಯಲಿಲ್ಲ. ಸ್ಟೇಡಿಯಂ. ಪ್ರವೇಶಿಸಲಾಗದ ಲಕ್ಷಾಂತರ ಜನ ಟಿ.ವಿ. ನೋಡಿ ತೃಪ್ತಿ ಪಟ್ಟುಕೊಂಡರು. ಅದಕ್ಕೂ ಮೊದಲು ರೈಟರ್ಸ್ ಬಿಲ್ಡಿಂಗ್(ಕರ್ನಾಟಕದ ವಿಧಾನಸೌಧದಂತೆ) ನಿಂದ ನಿರ್ಗಮಿಸುವ ವೇಳೆಯಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ಸಾವಿರಾರು ಜನ ಹರ್ಷೋದ್ಗಾರಗೈದರೆ, ಕೆಲವರು ಕಣ್ಣೀರು ಹರಿಸಿದರು.

ದೇಶದ ಉದ್ದಗಲಕ್ಕೂ ಮಾಧ್ಯಮಗಳು ಬಸು ಮತ್ತು ಎಡರಂಗದ ಕುರಿತು ಬರೆದವು. ಕಟ್ಟಾ

ಹೃದಯಸ್ಪರ್ಶಿ ಬೀಳ್ಕೊಡುಗೆ

ಕಮ್ಯುನಿಸ್ಟ್ ವಿರೋಧಿಗಳಿಗೂ ಸುಮ್ಮನೆ ಕೂರಲಾಗಲಿಲ್ಲ. ಬರೆಯಲೇ ಬೇಕಾದ, ಬಿತ್ತರಿಸಲೇಬೇಕಾದ ಅನಿವಾರ್ಯತೆ ಇತ್ತು. ಏಕೆಂದರೆ ಇದೊಂದು ರಾಷ್ಟ್ರೀಯ ದಾಖಲೆ ಮಾತ್ರವಲ್ಲ, ವಿಶ್ವದಾಖಲೆಯೂ ಹೌದು. ಬಂಡವಾಳಶಾಹಿ ವ್ಯವಸ್ಥೆಯ ಅಡಿಯಲ್ಲಿ ಯಾವುದೇ ಕಮ್ಯುನಿಸ್ಟ್ ಸರಕಾರ ಸತತವಾಗಿ ಇಷ್ಟೊಂದು ದೀರ್ಘಕಾಲ ಅಧಿಕಾರದಲ್ಲಿರಲು ಸಾಧ್ಯವಾಗಿಲ್ಲ. ಆದ್ದರಿಂದಲೇ ಜ್ಯೋತಿಬಸು ನಂತರ ಬಂಗಾಳ ಯಾವ ದಿಕ್ಕಿನಲ್ಲಿ ಸಾಗುತ್ತದೆ ಎಂಬ ಅನುಮಾನ, ಕುತೂಹಲಗಳನ್ನು ಕೆಲವರು ವ್ಯಕ್ತಪಡಿಸುತ್ತಾರೆ. ಅದಕ್ಕೆ ಜ್ಯೋತಿಬಸು ಅವರೇ ಉತ್ತರಿಸುತ್ತಾರೆ" ಸತತ 23 ವರ್ಷಗಳ ಕಾಲ ಜನರ ಪರವಾಗಿ ಕೆಲಸ ಮಾಡಿದ್ದೇವೆ. ಆದ್ದರಿಂದ ಪುನಃ ಜನ ಎಡರಂಗವನ್ನೇ ಆಯ್ಕೆ ಮಾಡುತ್ತಾರೆ" ಎಂದು ವಿಶ್ವಾಸ ವ್ಯಕ್ತಪಡಿಸಿದರು. ಅವರು ಮುಂದುವರಿಯುತ್ತಾ "ಅನಾರೋಗ್ಯದ ನಿಮಿತ್ತ ಮುಖ್ಯಮಂತ್ರಿ ಪದವಿಯಿಂದ ನಿವೃತ್ತನಾಗುತ್ತಿದ್ದೇನೆ. ಆದರೆ ಪಕ್ಷವು ವಹಿಸಿದ ಯಾವುದೇ ಜವಾಬ್ದಾರಿಯನ್ನು ನಿರ್ವಹಿಸುವುದಾಗಿ' ತಿಳಿಸಿದರು. 'ಕಮ್ಯುನಿಸ್ಟರು ಜೀವನದ ಕೊನೆಯ ದಿನದವರೆಗೂ ಕೆಲಸ ಮಾಡುತ್ತಲೇ ಇರುತ್ತಾರೆ" ಎಂದು ಹೇಳಿದ ಕಾಂ. ಬಸು 'ಕೋಮುವಾದಿ ಬಿಜೆಪಿ ಸರ್ಕಾರದ ವಿರುದ್ಧ ಐಕ್ಯ ಹೋರಾಟಗಳನ್ನು ಮುಂದುವರಿಸಬೇಕಿರುವುದು ಇಂದಿನ ಅಗತ್ಯತೆ ಎಂದು ನುಡಿದರು.

ನವೆಂಬರ್ 3ನೇ ತಾರೀಖಿನ 'ಪ್ರಜಾವಾಣಿ' ತನ್ನ ಮುಖಪುಟದ ಲೇಖನದಲ್ಲಿ ರೈಟರ್ಸ್ ಬಿಲ್ಡಿಂಗ್‌ನಿಂದ ಜ್ಯೋತಿ ಬಸು ನಿರ್ಗಮನದ ಪ್ರತಿಯೊಂದು ಹೆಜ್ಜೆಯನ್ನು ಚಿತ್ರಿಸಿತು. "87 ವರ್ಷದ ಜ್ಯೋತಿಬಸು ಅವರ ನಡಿಗೆ ವೇಗವಾಗಿತ್ತು. ಅವರ ನಡಿಗೆಯನ್ನು ನೋಡಿದರೆ ಅವರು ಅನಾರೋಗ್ಯದಿಂದ ಬಳಲಿದಂತೆ ಕಾಣಿಸುತ್ತಿರಲಿಲ್ಲ......." ಇತ್ಯಾದಿಯಾಗಿ ಹೇಳಿತ್ತು. ಮಾರ್ಕ್ಸ್‌ವಾದ-ಲೆನಿನ್ ವಾದವನ್ನು ಅರಗಿಸಿಕೊಂಡ ಕ್ರಾಂತಿಕಾರಿಗೆ ವಯಸ್ಸು, ಅನಾರೋಗ್ಯ ತಡೆಯಾಗುವುದಿಲ್ಲ, ಹೊಣೆ ಬದಲಾಗುತ್ತದೆ ಎಂದಷ್ಟೇ ನಾವು ಹೇಳಬೇಕಾಗುತ್ತದೆ.

ಪಶ್ಚಿಮ ಬಂಗಾಳ ಸರಕಾರಿ ನೌಕರರ ಸಮನ್ವಯ ಸಮಿತಿ ಏರ್ಪಡಿಸಿದ್ದ ಬೀಳ್ಕೊಡುಗೆ ವಿಶಿಷ್ಟವಾಗಿತ್ತು. 1977 ರ ಜೂನ್ 20 ರಂದು ಮುಖ್ಯಮಂತ್ರಿಯಾಗಿ ಬಂದ ಜ್ಯೋತಿಬಸುರವರನ್ನು ಸ್ವಾಗತಿಸಿದ ಸ್ಥಳದಲ್ಲೇ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಿತ್ತು. ಕೆಂಪುಗುಲಾಬಿಯ 87 ಬೊಕ್ಕೆಗಳನ್ನು ಜೊತೆಗೆ 'ನಾಗಾಲೋಟದಿಂದ ಓಡುವ ಕುದುರೆ'ಯನ್ನು ನೆನಪಿನ ಕಾಣಿಕೆಯಾಗಿ ನೀಡಿತು. 23 ವರ್ಷಗಳ ಹಿಂದಿನ ಸಮಾರಂಭದಲ್ಲಿ ಭಾಗವಹಿಸಿದ್ದ ಹಲವರಿಗೆ ತಮ್ಮ ಭಾವೋದ್ರೇಕವನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಾಗಲಿಲ್ಲ. ಆದರೆ ಅಚಲ ಮತ್ತು ದೃಢ ಮನುಷ್ಯರಾಗಿದ್ದ ಜ್ಯೋತಿಬಸು ಯಾವುದೇ ಭಾವುಕತೆಗೆ ಎಡೆ ಕೊಡದೆ ಎಡರಂಗ ಸರ್ಕಾರದ ಕೆಲಸಗಳನ್ನು ವಿಕೇಂದ್ರೀಕರಣಗೊಳಿಸಲು ನೆರವಾದ ಸರಕಾರಿ ನೌಕರರಿಗೆ ಅಭಿನಂದನೆ ಸಲ್ಲಿಸಿದರು.

ಇಂದಿನ ಪರಿಸ್ಥಿತಿಯಲ್ಲಿ ಜನರ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಕಾಣಲು ಸಾಧ್ಯವಾಗುವುದಿಲ್ಲ. ಯಾಕೆ ಈ ಸಮಸ್ಯೆ ಪರಿಹಾರವಾಗಿಲ್ಲ ಎಂದು ಜನರಿಗೆ ನೇರ ನುಡಿಗಳಲ್ಲಿ ಸ್ಪಷ್ಟಪಡಿಸಬೇಕು. ಹುಸಿ ಭರವಸೆಗಳನ್ನು ನೀಡಬಾರದು" ಎಂದು ಕಾಮ್ರೇಡ್ ಬಸು ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು.

ಬಸು ಅವರ ಬಹುಮುಖ್ಯ ವ್ಯಕ್ತಿತ್ವ ಕ್ರಾಂತಿಕಾರಿ ಕೆಲಸಗಳನ್ನು ಕೈಗೆತ್ತಿಕೊಂಡವರಿಗೆ ಕೈದೀವಿಗೆಯಾಗುವುದರಲ್ಲಿ ಸಂದೇಹವೇ ಇಲ್ಲ.

- ಬಾಲಕೃಷ್ಣ

ಪತ್ರಿಕೆಗಳಲ್ಲಿ ಬಸು.........

"..... ಎರಡು ದಶಕಗಳಿಗೂ ಹೆಚ್ಚು ಕಾಲ ಅಧಿಕಾರದ ಚುಕ್ಕಾಣಿ ಹಿಡಿದ ಜ್ಯೋತಿಬಸು ತಮ್ಮ ಹಿರಿಮೆ ಹಾಗೂ ವರ್ಚಸ್ಸಿನಿಂದ ಎಲ್ಲರನ್ನು ಆಕರ್ಷಿಸಿದ ಕೇಂದ್ರಬಿಂದುವಾಗಿದ್ದರು. ಪಶ್ಚಿಮ ಬಂಗಾಳದಲ್ಲಿ ಸಂಯುಕ್ತ ರಾಜಕಾರಣವು ತಳವೂರುವಂತೆ ಮಾಡಿದ ಕೀರ್ತಿ ಜ್ಯೋತಿಬಸು ಅವರಿಗೆ ಸಲ್ಲುತ್ತದೆ......."

- **'ದಿ ಹಿಂದು'** ಸಂಪಾದಕೀಯ

★★★

"......... ಹಾಗೆ ನೋಡಿದರೆ ಜ್ಯೋತಿ ಬಸುರವರ ನಿವೃತ್ತಿ ಘೋಷಣೆಯು ಹೊಸ ಬೆಳವಣಿಗೆಯೇನಾಗಿಲ್ಲ. ಕಳೆದ ಒಂದು ವರ್ಷದಿಂದಲೂ ಅವರು ನಿವೃತ್ತಿ ಬಯಸುತ್ತ ಬಂದಿದ್ದರೂ ಪಕ್ಷ ಅದಕ್ಕೆ ಸಮ್ಮತಿಸಿರಲಿಲ್ಲ. ಪಕ್ಷಕ್ಕೆ ಬಸು ನಾಯಕತ್ವದ ಅನಿವಾರ್ಯತೆಗೆ ಇದು ಉದಾಹರಣೆಯಾಗಿದೆ. ಈಗಲೂ ಬಸುರವರು ಮುಖ್ಯಮಂತ್ರಿ ಹುದ್ದೆ ಬಿಟ್ಟುಕೊಡಲಿರುವರೆ ವಿನಃ ರಾಜಕೀಯದಿಂದ ಅವರು ನಿವೃತ್ತರಾಗುತ್ತಿಲ್ಲ. ಪಕ್ಷಕ್ಕೆ ಅವರ ಸೇವೆಯು ಮುಂದುವರೆಯಲಿದೆ. ಸುಮಾರು ಸತತ ಇಪ್ಪತ್ನಾಲ್ಕು ವರ್ಷಗಳ ಕಾಲ ಬಂಗಾಲದ ಮುಖ್ಯಮಂತ್ರಿಯಾಗಿ ಅವರು ಭಾರತದ ಜನತಂತ್ರ ಇತಿಹಾಸದಲ್ಲಿಯೇ ದಾಖಲೆ ನಿರ್ಮಿಸಿದ್ದಾರೆ.

.... ಆದರೆ ವಾಮರಂಗದ ಕೆಲ ಪಕ್ಷಗಳು ಬಸು ವಿಧಾನಸಭೆ ಚುನಾವಣೆ ಮುಗಿಯುವವರೆಗೂ ಮುಖ್ಯಮಂತ್ರಿಯಾಗಿ ಮುಂದುವರೆಯಬೇಕಿತ್ತೆಂದು ಅಭಿಪ್ರಾಯ ಪಡುತ್ತಿವೆ. ಮಾರ್ಕ್ಸಿಸ್ಟ್ ಮತ್ತು ವಾಮರಂಗದ ಮತ ರಾಜಕೀಯದ ಲೆಕ್ಕಾಚಾರಗಳೇನೆ ಇರಲಿ, ಬಸುರವರಂತೂ ಅತ್ಯಂತ ಸಮಂಜಸ, ಸಮಯೋಜಿತ ಹಾಗೂ ಸಮರ್ಥನೀಯ ನಿರ್ಣಯವನ್ನೇ ತೆಗೆದುಕೊಂಡಿದ್ದಾರೆ.........."

'ಸಂಯುಕ್ತ ಕರ್ನಾಟಕ'- ಸಂಪಾದಕೀಯ

★★★

"..................... ಸಿಪಿಎಂ ಪಕ್ಷದಲ್ಲಿ ಸಿದ್ಧಾಂತಗಳು ಮತ್ತು ತತ್ವಗಳಿಗೆ ಅಗ್ರಪೀಠ, ವ್ಯಕ್ತಿಗಳು ಗೌಣ. ಆದರೆ ಬಸು ಅವರು ಸುಮಾರು ಕಾಲು ಶತಮಾನ ರಾಜ್ಯದ ಆಡಳಿತ ಸೂತ್ರ ಹಿಡಿದಿರುವಷ್ಟು ಕಾಲ, ಅನಿಶ್ಚಯ, ಹಿಂಸಾಚಾರ ಮುಂತಾದ ಬಿಕ್ಕಟ್ಟುಗಳ ನಡುವೆಯೂ ರಾಜ್ಯ ರಾಜಕೀಯಕ್ಕೆ ಸ್ಥಿರತೆ ತಂದುಕೊಟ್ಟ ಘನತೆ ಅವರದು. ಅಷ್ಟೇ ಅಲ್ಲದೆ ಅವರ ನಾಯಕತ್ವದಲ್ಲಿ ರಾಜ್ಯದ ಎಡರಂಗ ಸರ್ಕಾರವು ಭೂಸುಧಾರಣೆಗಳನ್ನು ಸಮಗ್ರವಾಗಿ ಅನುಷ್ಠಾನಕ್ಕೆ ತಂದು, ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕ, ಸಾಮಾಜಿಕ ಕ್ರಾಂತಿಗೆ ನಾಂದಿ ಹಾಡಿದ ಕೀರ್ತಿಗೂ ಪಾತ್ರ.

ಬಸು ಅವರು ತಮ್ಮ ಸುತ್ತ ಭಟ್ಟಂಗಿಗಳ ಕೋಟೆಯನ್ನು ನಿರ್ಮಿಸಿಕೊಳ್ಳಲಿಲ್ಲ. ಅವರದು ಅಚಲ ಹೋರಾಟ ಮನೋಭಾವ. ಎಂದೂ ಸಶಕ್ತ ಮತ್ತು ನೆಚ್ಚಿಕೊಳ್ಳಬಹುದಾದ ನಾಯಕ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ನಂಬಿಕೊಂಡಿದ್ದ ಸಿದ್ಧಾಂತಗಳೊಂದಿಗೆ ರಾಜಿ ಆಗದ ಮನೋದಾರ್ಢ್ಯ, ಆದರೆ ಯಾರನ್ನೂ ಮನನೋಯಿಸದ ಸರಳಜೀವಿ. ಕ್ರಾಂತಿಕಾರಿ, ಸಮರ್ಥ ಆಡಳಿತಗಾರ ಎಂಬೆಲ್ಲ ಗುಣವಾಚಕಗಳೂ ಅವರಿಗೆ ಸಲ್ಲುತ್ತವೆ. ಅವರ ಆಡಳಿತ ಸಾಮರ್ಥ್ಯ ರಾಜ್ಯಮಟ್ಟಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಒಂದು ಹಂತದಲ್ಲಿ ಪ್ರಧಾನಿ ಹುದ್ದೆ ಸ್ವೀಕರಿಸುವಷ್ಟು ಸಮೀಪಕ್ಕೂ ಬಂದಿದ್ದರು ಎಂಬುದು ಅವರ ನಾಯಕತ್ವ ಗುಣಗಳ ಪ್ರತೀಕ. ರಾಜ್ಯ ರಾಜಕಾರಣದಲ್ಲಿ ಅವರು ಮೂಡಿಸಿರುವ ಹೆಜ್ಜೆ ಗುರುತು ಅಚ್ಚಳಿಯದು.

ಜನವಾಹಿನಿ ಸಂಪಾದಕೀಯ

★★★

'ಲಾಲ್ ಸಲಾಮ್'

ಮಾನ್ಯರೆ,

ದಾಖಲೆಯ 24 ವರ್ಷ ಕಳಂಕರಹಿತ ಆಡಳಿತ ಮಾಡಿ ಸ್ವತಃ ರಾಜಿನಾಮೆ ನೀಡಿ ಅಧಿಕಾರದಿಂದ ನಿರ್ಗಮಿಸಿದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಕಾಂ ಜ್ಯೋತಿಬಸುಗೆ ಸೆಲ್ಯೂಟ್, ರೆಡ್ ಸೆಲ್ಯೂಟ್!

ಸಾಮಾನ್ಯವಾಗಿ ಕಮ್ಯುನಿಸ್ಟ್ ಆಡಳಿತವೆಂದರೆ ದಬ್ಬಾಳಿಕೆಯ, ಯಾವುದೇ ಆಯ್ಕೆಗೆ ಅವಕಾಶವಿಲ್ಲದ ಸರ್ಕಾರವೆಂಬ ನಂಬಿಕೆಯನ್ನು ಸುಳ್ಳು ಮಾಡಿ, ಪ್ರಜಾಪ್ರಭುತ್ವ ರೀತಿಯಲ್ಲಿ ಆಯ್ಕೆಯಾಗಿ ಜನಪರ ಆಡಳಿತ ಮಾಡಿದ ಬಸು 'ಮಹಾಮಾನ್ಯ' ಮುಖ್ಯಮಂತ್ರಿ ಎನ್ನಬಹುದು.

ಅವರ ಸುಧಾರಣೆ ಪಟ್ಟಿ ಮಾಡಲಾಗದು. ಇಷ್ಟು ದೀರ್ಘಕಾಲ ಪ್ರಶ್ನಾತೀತ ನಾಯಕರಾಗಿ ಆಳಿದುದನ್ನು ಲೆಕ್ಕ ಹಾಕಿದರೆ ಸಾಕು, ಅವರಂತಹ ಆಡಳಿತ ನೀಡಿದಲೆಂಬುದರ ಸಂಕೇತ ಸಿಗುತ್ತದೆ.

'ನಾನು ಮುಖ್ಯಮಂತ್ರಿ ಪದವಿಗೆ ಮಾತ್ರ ರಾಜೀನಾಮೆ ನೀಡಿದ್ದೇನೆ. ನನ್ನ ರಾಜಕೀಯ ಜೀವನ ನನ್ನ ಅಂತ್ಯದವರೆಗೂ ಮುಂದುವರಿಯುತ್ತದೆ' ಎಂಬ ಅವರ ಮಾತು ಪ್ರಾಮಾಣಿಕ ಪರಿಶುದ್ಧ ರಾಜಕೀಯ ಆಡಳಿತ ಬಯಸುವವರಿಗೆ ನೆಮ್ಮದಿ ತರುತ್ತದೆ ಅಲ್ಲವೇ?

ಮಹಾಬಲೇಶ್ವರ ಸಿ. ಗಡೇದ,
ನಾಲತವಾಡ,
ಪ್ರಜಾವಾಣಿಯ ವಾಚಕರವಾಣಿ ಅಂಕಣದಲ್ಲಿ

ಸತತವಾಗಿ 24 ವರ್ಷಗಳ ಕಾಲ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿ ಅಧಿಕಾರ ನಿಭಾಯಿಸಿದ್ದು ಜ್ಯೋತಿ ಬಸು ಅವರ ಬಹುದೊಡ್ಡ ದಾಖಲೆ. ಬೇರೆಲ್ಲೂ ಇಂಥ ಒಂದು ಉದಾಹರಣೆ ಸಿಗುವುದಿಲ್ಲ. ಇದು ವಿಶ್ವದಾಖಲೆಯೂ ಹೌದು.

- ಸುಧಾ



ಕಾಲು ಶತಮಾನ ಬಂಗಾಳವನ್ನು ಬೆಳಗಿದ 'ಜ್ಯೋತಿ'

ಬುದ್ಧದೇವ ಭಟ್ಟಾಚಾರ್ಯ ಹೊಸ ಮುಖ್ಯಮಂತ್ರಿ

ಬುದ್ಧದೇವ ಭಟ್ಟಾಚಾರ್ಯರವರು ವಿದ್ಯಾರ್ಥಿ ದಿಶೆಯಲ್ಲಿ ಮಾರ್ಕ್ಸ್‌ವಾದದತ್ತ ಆಕರ್ಷಿತರಾದವರು. ನಂತರ ಯುವಜನ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಅವರು ಬಂಗಾಳದ ಯುವಜನ ಫೆಡರೇಷನ್(ಮುಂದೆ ಡಿವೈಎಫ್‌ಐ ಆಯಿತು) ನ ರಾಜ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದವರು. 1977 ರಲ್ಲಿ ಜ್ಯೋತಿಬಸು ನೇತೃತ್ವದ ಮೊದಲ ಎಡರಂಗ ಸರ್ಕಾರದಲ್ಲಿ ಸಂಸ್ಕೃತಿ ಮತ್ತು ಪ್ರಸಾರ ಸಚಿವರಾದ ಅವರು ಈವರೆಗೂ ಎಲ್ಲಾ ಸಂಪುಟಗಳಲ್ಲಿಯೂ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಈ ಅವಧಿಯಲ್ಲಿ ಗೃಹಸಚಿವರಾಗಿ, ಉಪಮುಖ್ಯಮಂತ್ರಿಯಾಗಿದ್ದರು. ಮೂಲತಃ ಬಂಗಾಳಿ ಸಾಹಿತಿಯಾಗಿ, ಹಲವಾರು ನಾಟಕ, ಕೃತಿಗಳನ್ನು ರಚಿಸಿದ್ದಾರೆ.


ಕಳೆದ 24 ವರ್ಷಗಳ ಸುದೀರ್ಘ ಆಳ್ವಿಕೆಯ ನಂತರ ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸುತ್ತಿರುವ ಜ್ಯೋತಿಬಸು ಅವರ ಸ್ಥಾನವನ್ನು ಬುದ್ಧದೇವ ಭಟ್ಟಾಚಾರ್ಯ ತುಂಬಿದ್ದಾರೆ. ಎಡರಂಗದ ಆಳ್ವಿಕೆಯಲ್ಲಿ ಇದೊಂದು ಹೊಸ ಅಧ್ಯಾಯ. ನವೆಂಬರ್ 6 ರಂದು ರಾಜಭವನದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ವೀರೆನ್ ಜೆ. ಸಹಾ ಅವರು ಗೌಪ್ಯತೆಯ ಪ್ರಮಾಣವಚನ ಬೋಧಿಸಿದರು. ರಾಜ್ಯದ 7ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಈ ಸಮಯದಲ್ಲಿ ಎಲ್ಲಾ ಸಂಪುಟದರ್ಜೆ ಸಚಿವರು, ರಾಜ್ಯ ಸಚಿವರು ಸೇರಿದಂತೆ ಸಿಪಿಐ(ಎಂ)ನ ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ, ಎಡರಂಗದ ಅಧ್ಯಕ್ಷ ಶೈಲೆನ್‌ದಾಸ್ ಗುಪ್ತ, ಪಕ್ಷದ ರಾಜ್ಯ ಕಾರ್ಯದರ್ಶಿ ಅನಿಲ್ ಬಿಸ್ವಾಸ್ ಹಾಗೂ ಅನೇಕ ಬರಹಗಾರರು, ಚಲನಚಿತ್ರ ಕಲಾವಿದರು, ಭಾರತ ಕ್ರಿಕೆಟ್ ತಂಡದ ನಾಯಕ ಸೌರವ್ ಗಂಗೂಲಿ ಹಾಗೂ ಬುದ್ಧದೇವ್ ಗುಹಾ, ಸುಚಿತ್ರ ಮಿತ್ರಾ, ಅಪರ್ಣಸೇನ್, ತರುಣ್ ಮಜುಂದಾರ್ ಮುಂತಾದವರು ಭಾಗವಹಿಸಿದ್ದರು.

ಪ್ರಮಾಣ ವಚನ ಸ್ವೀಕಾರ ಸಮಾರಂಭದ ನಂತರ ರಾಜ್ಯ ಎಡರಂಗ ಸಮಿತಿಯು ಸಂಘಟಿಸಿದ್ದ ನೇತಾಜಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಲಕ್ಷ ಲಕ್ಷ ಸಂಖ್ಯೆಯಲ್ಲಿ ಭಾಗವಹಿಸಿದ್ದ ಅಭಿಮಾನಿಗಳು ಭಾರಿ ಕರತಾಡನದೊಂದಿಗೆ ಕಾಂ. ಜ್ಯೋತಿಬಸುರವರನ್ನು ಬರಮಾಡಿಕೊಂಡರು. ಅದೊಂದು ಭಾವಪೂರ್ಣ ಸನ್ನಿವೇಶ. ಅಭಿಮಾನಿಗಳು ನೆನಪಿನ ಕಾಣಿಕೆಗಳು, ಪುಷ್ಪಗಳನ್ನು ನೀಡಿ ಗೌರವಿಸಿದರು.

ಅಭಿಮಾನಿಗಳನ್ನು ಉದ್ದೇಶಿಸಿ ಮಾತನಾಡಿದ ಬಸುರವರು "ನೀವು ನನ್ನ ಬಗ್ಗೆ ಒಳ್ಳೆಯ ಮಾತುಗಳನ್ನಾಡಿದ್ದೀರಿ, ಅದಕ್ಕೆ ನಾನು ಅಭಾರಿಯಾಗಿದ್ದೇನೆ. ನಾನೊಬ್ಬ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಲಿಕ್ಕೆ ಕಾರಣ ಜನತೆ ನನ್ನ ಪಕ್ಷ ಹಾಗೂ ಎಡರಂಗಗಳ ಅಪೇಕ್ಷೆಯಿಂದಾಗಿ. ಎಡರಂಗವು ಒಂದು ದಿನದಲ್ಲಿ ಹುಟ್ಟಿ ಬೆಳೆಯಲಿಲ್ಲ ಹಲವು ದಶಕಗಳ ನಿರಂತರ ಹೋರಾಟ, ತ್ಯಾಗ ಬಲಿದಾನಗಳಿಂದ ಬೆಳೆದು ಬಂದಿದೆ. ಕಳೆದು 24 ವರ್ಷಗಳ ಆಳ್ವಿಕೆಯಲ್ಲಿ ಸಿಪಿಐ(ಎಂ) ನೇತೃತ್ವದ ಸಮ್ಮಿಶ್ರ ಸರ್ಕಾರದಲ್ಲಿ ಉಳಿದ ಎಡರಂಗಗಳ ಪ್ರೋತ್ಸಾಹ, ಸಹಕಾರ ಸ್ಮರಣೀಯ. ಆದ್ದರಿಂದ ನಾವು ಎಡ ಚಳುವಳಿಯ ಐಕ್ಯತೆಯನ್ನು ಕಾಪಾಡಿಕೊಳ್ಳುತ್ತೇವೆ. ಕಮ್ಯುನಿಸ್ಟರಿಗೆ ಜನರ ಸೇವೆಯ ಹೊರತು ಇನ್ನಾವುದೂ ಇಲ್ಲ. ನಾವು ಜನರೊಂದಿಗಿದ್ದೇವೆ. ಸುಮಾರು 100 ರಷ್ಟು ನಮ್ಮ ಸಂಗಾತಿಗಳು ತುರ್ತು ಪರಿಸ್ಥಿತಿ ಹೇರಿಕೆಯಲ್ಲಿ ಕಾಂಗ್ರೆಸ್ ಗೂಂಡಾಗಳಿಗೆ ಬಲಿಯಾಗಿದ್ದಾರೆ. ಆದರೆ ನಾವು ಶರಣಾಗಲಿಲ್ಲ. ಈ ಸಂದರ್ಭದಲ್ಲಿ ಬಸುರವರು ತಮ್ಮ ಹಲವಾರು ಸಂಗಾತಿಗಳ ತ್ಯಾಗ ಬಲಿದಾನಗಳನ್ನು ಸ್ಮರಿಸಿಕೊಂಡರು. ಹಾಗೂ ನನ್ನ ಜೀವಿತ ಕಾಲದವರೆಗೂ ಮಾನವ ಸ್ವಾತಂತ್ರ್ಯ ವಿಮೋಚನೆಗೆ ಹೋರಾಡುತ್ತೇನೆ ಎಂದರು.



ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯ ಮಾತನಾಡಿ, ನಾವು ಜನಸಾಮಾನ್ಯರ ಹೋರಾಟವನ್ನು ಮುಂದುವರೆಸಲು ಇಚ್ಛಿಸುತ್ತೇವೆ. ನಾವು ಹಲವಾರು ಮಹತ್ವಪೂರ್ಣ ಕೆಲಸಗಳನ್ನು ಮಾಡಿದ್ದೇವೆ. ಸಾಧಿಸುವ ಕೆಲಸ ಬಹಳಷ್ಟಿವೆ. ನಾವು ಕೃಷಿ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದ್ದೇವೆ. **ನಮ್ಮ ಕೈಗಾರಿಕಾ** ಸಾಧನೆಯು ಗಣನೀಯವಾಗಿ ಅಭಿವೃದ್ಧಿ ಗೊಂಡಿದೆ. ಅಭಿವೃದ್ಧಿಗೊಳಿಸ ಬಯಸುತ್ತೇವೆ. ಜನರು ತಮ್ಮ ಸಂಪತ್ತು, ನಾವು ಮಾನವ ಸಂಪನ್ಮೂಲವನ್ನು ಯಶಸ್ವಿಯಾಗಿ ಬಳಸಲು ಪ್ರಯತ್ನಿಸುತ್ತೇವೆ.



ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ. ಸೀತಾರಾಂ ಯೆಚೂರಿ ಮಾತನಾಡಿ ನಾನು ಕಲ್ಕತ್ತಾದಲ್ಲಿ ಇಂತಹ ಭಾವಪೂರ್ಣ ಸನ್ನಿವೇಶವನ್ನು ಇದುವರೆಗೂ ನೋಡಿರಲಿಲ್ಲ. ಇದು ಜ್ಯೋತಿಬಸುರವರ ಮೇಲಿನ ಅಪ್ರತಿಮ ಗೌರವದ ಪ್ರತೀಕ. ಮುಖ್ಯಮಂತ್ರಿ ಸ್ಥಾನಕ್ಕೆ ರಾಜಿನಾಮೆ ಸಲ್ಲಿಸಿ ಹೊಸ ಉದಾಹರಣೆ ಸೃಷ್ಟಿಸಿದ್ದಾರೆ. ಬಸುರವರ ಮಾರ್ಗದರ್ಶನ ನಮಗೆ ಅವಶ್ಯ. ರಾಷ್ಟ್ರ ರಾಜಕಾರಣದಲ್ಲಿ ತೃತೀಯ ರಂಗದ ಸ್ಥಾಪನೆಗೆ ಬಸುರವರ ನಾಯಕತ್ವ ಮತ್ತು ಮಾರ್ಗದರ್ಶನ, ನಾವು ತೃತೀಯ ರಂಗವನ್ನು ಕಟ್ಟಿಬೆಳೆಸಲು ಸಹಾಯವಾಗುತ್ತದೆ ಎಂದರು.

ಸಮಾರಂಭದಲ್ಲಿ ಎಡರಂಗದ ಶೈಲೆನ್ ದಾಸ್‌ಗುಪ್ತಾ, ಫಾರ್ವರ್ಡ್ ಬ್ಲಾಕ್‌ನ ಅಶೋಕ್ ಘೋಷ್, ಆರ್. ಎಸ್.ಪಿ. ಮುಖಂಡ ದೇವವ್ರತ ಬ್ಯಾನರ್ಜಿ, ಸಿಪಿಐ ಮುಖಂಡ ಮಿಹಿರ್ ಬೈನೆ, ಬಿಬಿಸಿ ಮುಖಂಡ ಸುನಿಲ್ ಚೌಧರಿ, ಡಿಎಸ್‌ಪಿ ಮುಖಂಡ ಪ್ರಮೋದ್ ಸಿನ್ಹಾ ಮಾತನಾಡಿ ಜ್ಯೋತಿಬಸುರವರ ಕೊಡುಗೆ ಹಾಗೂ ಎಡರಂಗದ ಐಕ್ಯತೆಯನ್ನು ಶ್ಲಾಘಿಸಿದರು.

- ಎಸ್.ಜಗದೀಶ್

ಸಂಘ ಪರಿವಾರದ ಸಂಕಟಗಳು

"............. ಅವರಿಗೆ ವಿದಾಯ ಹೇಳಲು ಕಲ್ಕತ್ತೆಯ ಸುಪ್ರಸಿದ್ಧ ಚಾರಿತ್ರಿಕ ಶಹೀದ್ ಮಿನಾರ್ ಮೈದಾನದಲ್ಲಿ ಏರ್ಪಟ್ಟಿದ್ದ ಬಹಿರಂಗ ಸಭೆಯೇ ಜಗತ್ತಿಗೆಲ್ಲಾ ಸಾರಿತ್ತೆನ್ನಬಹುದು. ಇದುವರೆಗೂ ಅದೆಷ್ಟು ಭಾಷಣಗಳನ್ನು ಅದೇ ಮೈದಾನದಲ್ಲಿ ಅವರು ಮಾಡಿದ್ದಾರೋ? ಆದರೆ ಇದುವರೆಗೂ ಇಷ್ಟು ಕಡಿಮೆ ಸಂಖ್ಯೆ ಎಂದೂ ಇರಲಿಲ್ಲ. ಮುಗಿದ ಸಾಮ್ರಾಜ್ಯಕ್ಕೆ ಕಂಬನಿಗರೆಯಲೂ ಜನ ಇರಲಿಲ್ಲ. ಸುಮಾರು ಆರು ದಶಕಗಳ ಕಾಲ ದೇಶದ ರಾಜಕಾರಣದಲ್ಲಿ ಸಕ್ರಿಯವಾಗಿದ್ದ ವ್ಯಕ್ತಿಗೆ ಅತ್ಯಂತ ಉದಾಸೀನ ವಿದಾಯ ಅದಾಗಿತ್ತು"

- ವಿಕ್ರಮ,
ಆರ್.ಎಸ್.ಎಸ್. ಮುಖವಾಣಿ

"........................ ಸಚಿವಾಲಯದ ಹೊರಗಡೆ ಭಾರೀ ಸಂಖ್ಯೆಯಲ್ಲಿ ಜನರು ನೆರೆದಿದ್ದರು. ಅವರು ಸಚಿವಾಲಯದಿಂದ ಹೊರಬರುತ್ತಿದಂತೆಯೇ ಹರ್ಷೋದ್ಗಾರ ಮಾಡುತ್ತಾ ಜನರು ಭದ್ರತಾ ತಡೆಗಳನ್ನು ಮುರಿದು ಬಸು ಅವರ ದರ್ಶನ ಪಡೆದರು"

- ಪ್ರಜಾವಾಣಿ
- ಮುಖಪುಟದ ವರದಿ

ಆನೆ ತಾ ಸಾಗುತಿರೆ
ಶ್ವಾನ ತಾ ಬೊಗುಳಿದರೆ
ಮಾನ ಹೋಗುವುದು ಶ್ವಾನದ್ದಲ್ಲದೇ
ಆನೆಯದ್ದಲ್ಲ.....

- ವಚನವೊಂದರ ಸಾಲುಗಳು

....ಕೂಪಮಂಡೂಕಗಳೇ ಉತ್ತಮ

ಪುಟ 4 ರಿಂದ

ಇದೇ ಪತ್ರಿಕಾಗೋಷ್ಠಿಯಲ್ಲಿ ಜಾಗತೀಕರಣವನ್ನು ವಿರೋಧಿಸುವವರಿಗೆ ಜಗತ್ತಿನ ಅರಿವೆ ಇಲ್ಲ ಎಂದು ಈ ಮಹಾನ್ ಮೇಧಾವಿ ಪ್ರೊಫೆಸ್‌ಸನ್ ಅಪ್ಪಣೆ ಕೊಡಿಸಿದ್ದಾರೆ. ಈ ಮಹಾನ್ ಮೇಧಾವಿಗೆ ಗೊತ್ತಿರುವುದು, ಅರಿವಿರುವುದು ಯಾವ ಪ್ರಪಂಚ? ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ಅರಿವು ಮತ್ತು ಪರಿಚಯ, ಇವರ ಜಾಗತೀಕರಣ, ಉದಾರೀಕರಣ ಮತ್ತು ಜಾಗತೀಕರಣದಿಂದಾಗಿ ಇಡೀ ಜಗತ್ತಿನ ಬಡ ದೇಶಗಳಲ್ಲಿನ ಮಿಲಿಯಾಂತರ ಜನರು ಹೇಗೆ ನಾಶವಾಗುತ್ತಿದ್ದಾರೆಂಬ ಅರಿವೇ ಇಲ್ಲದೆ ಪಾಷಂಡಿಗಳು ದಕ್ಷಿಣ ಆಫ್ರಿಕ, ಲ್ಯಾಟಿನ ಅಮೆರಿಕಾ, ಏಶಿಯಾ ದೇಶಗಳಲ್ಲಿನ ಜನರು ತಮ್ಮ ಪ್ರಾಣ ಮಾನಗಳನ್ನು ಕಳೆದುಕೊಳ್ಳುತ್ತಿರುವುದರ ಜೊತೆಗೆ ತಮ್ಮ ದೇಶಗಳ ಸಾರ್ವಭೌಮತ್ವವನ್ನು ಕಳೆದುಕೊಳ್ಳುತ್ತಿದ್ದಾರೆ. ಮಿಲಿಯಾಂತರ ಜನ ಕಾರ್ಮಿಕರು ಉದ್ಯೋಗಗಳನ್ನು ಕಳೆದುಕೊಂಡು ಅವರ ಕುಟುಂಬಗಳು ಬೀದಿಪಾಲಾಗುತ್ತಿವೆ. ವ್ಯವಸಾಯ ರಂಗದಲ್ಲಿನ ರೈತರು ಭೂಮಿಯನ್ನು ಕಳೆದುಕೊಂಡು ಬಿಕಾರಿಗಳಾಗುತ್ತಿದ್ದಾರೆ. ರೈತರು ವಿಷ ಕುಡಿತು ಆತ್ಮಹತ್ಯೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ದಕ್ಷಿಣ ಕೊರಿಯಾದ ರಾಜಧಾನಿ ಸಿಯೋಲ್‌ನಲ್ಲಿ ಟ್ಯಾಕ್ಸಿ ಡ್ರೈವರ್‌ನೊಬ್ಬ ನನಗೆ ಸಂಬಳ ಬೇಡ ನನಗೆ ಎರಡು ಕೆ.ಜಿ. ಅಕ್ಕಿ ಕೊಡಿ ಎಂದು ಕೇಳಿದ್ದು ಈ ಪಾಷಂಡಿಗಳ ಕಿವಿಗೆ ಬೀಳಲಿಲ್ಲವೇ?

ಇಂತಹ ಜಗತ್ತಿನ ಅರಿವು ಈ ಮೇಧಾವಿಗಳಿಗೆ ಇದೆ. ಇಷ್ಟಾದರೂ ಈ ಜಾಗತೀಕರಣದ ನಿಜ ಸ್ವರೂಪ ತಿಳಿಯಲಾರದಷ್ಟು ಕೂಪಮಂಡೂಕಗಳು ಯಾರು? ತಿಮಿಂಗಲಗಳು ಯಾರು?

ಇವರ ಜಾಗತೀಕರಣದಲ್ಲಿ ಬಿಲ್‌ಗೇಟ್ಸ್‌ಗಳು, ಪ್ರೇಮ್ ಜೀಗಳು ಮತ್ತು ನಾರಾಯಣಮೂರ್ತಿಗಳು ಬೆಳೆಯುತ್ತಾರೆಯೆ ಹೊರತು ಸಾಮಾನ್ಯಜನರು ಬದುಕಲಾರದ ಸ್ಥಿತಿ ಜಗತ್ತಿನಲ್ಲಿ ಉಂಟಾಗಿದೆ. 5-10 ವರ್ಷಗಳ ಹಿಂದೆ ಬಿಲ್‌ಗೇಟ್ಸ್ ಆಗಲಿ ಪ್ರೇಮ್‌ಜೀ ಆಗಲೀ, ನಾರಾಯಣ ಮೂರ್ತಿ ಆಗಲಿ ಯಾರಿಗೂ ಗೊತ್ತಿರಲಿಲ್ಲ. ಈಗ ಅವರುಗಳು ಎಲ್ಲಾ ಸರ್ಕಾರಗಳಿಗೆ ಆರಾಧ್ಯ ದೈವಗಳು. ಇದು ಇವರ ಜಾಗತೀಕರಣದ ಸಾಧನೆ. ಕೆ.ಜಿ.ಎಫ್. ಚಿನ್ನದ ಗಣಿ ಕಾರ್ಮಿಕರು ಬೀದಿ ಪಾಲಾಗುತ್ತಿರುವುದು, ಮೈಸೂರ್ ಲ್ಯಾಂಪ್ಸ್‌ನ ಕಾರ್ಮಿಕರು ಬಿಕ್ಷಾಪಾತ್ರೆ ಹಿಡಿದಿರುವುದು, ಅಹಮದಾಬಾದ್ ಮತ್ತು ಮುಂಬಯಿನ ಹತ್ತಿ ಗಿರಣಿ ಕಾರ್ಮಿಕರು ಗಂಟುಮೂಟೆ ಕಟ್ಟುತ್ತಿರುವುದು, ಬ್ಯಾಂಕ್, ಎಲ್‌ಐಸಿ ನೌಕರರು ಅತಂತ್ರರಾಗಿರುವುದು, 40 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿರುವ ಕೆಪಿಟಿಸಿಎಲ್ ನೌಕರರು ಆತಂಕಕ್ಕೆ ಒಳಗಾಗಿರುವುದು, ಬಂಗಾಳದ ಲಕ್ಷಗಟ್ಟಲೆ ಜೂಟ್ ಮಿಲ್‌ಗಳ ಕಾರ್ಮಿಕರು ಕೆಲಸಗಳನ್ನು ಕಳೆದುಕೊಳ್ಳುತ್ತಿರುವುದು, ಕೃಷಿಯನ್ನೇ ಆಧರಿಸಿ ಬದುಕುತ್ತಿರುವ ಶೇಕಡ 80 ಜನ ರೈತಾಪಿಗಳು ಬೀದಿ ಪಾಲಾಗುತ್ತಿರುವುದು ಈ ಜಾಗತೀಕರಣದ ತಿಮಿಂಗಲಗಳಿಗೆ ತಿಳಿಯುವುದಿಲ್ಲ. ಇವರಿಗೆ ಗೊತ್ತಿರುವುದು ಒಂದೇ ಭಾಷೆ ಲಾಭ. ಇವರಿಗೆ ಅರಿವಿರುವುದು ಒಂದೇ ಪ್ರಪಂಚ ಬಡಜನರ ರಕ್ತ ಹೀರುವ ಪ್ರಪಂಚ. ಈ ತಿಮಿಂಗಲಗಳಿಗೆ ಏಜೆಂಟರಾಗಿ ಕೆಲಸ ಮಾಡುವ ಮಾಧ್ಯಮಗಳಿಗೆ ಗೊತ್ತಿರುವುದು ಭ್ರಮಾಲೋಕ ಮಾತ್ರವೆ. ಹಾಗಾಗಿಯೇ ಅವರಿಗೆ ಎಲ್ಲಿಲ್ಲದ ಪ್ರಚಾರ. ಈ ತಿಮಿಂಗಲಗಳ ವಿರುದ್ಧ ಪ್ರತಿಭಟನೆಯ ಸೊಲ್ಲೆತ್ತಿರುವವರ ಬಗ್ಗೆ ಇವರಿಗೆ ಬಹಳ ಕೋಪ ಮತ್ತು ಸಿಟ್ಟು. ಆದರೆ ಜಾಗತೀಕರಣದ ಈ ತಿಮಿಂಗಲಗಳು ಜಗತ್ತಿನಲ್ಲಿ ಮತ್ತು ನಮ್ಮ ದೇಶದಲ್ಲಿ ನಡೆಸುತ್ತಿರುವ ಅಮಾನುಷ ಶೋಷಣೆ ಮತ್ತು ಮರ್ದನಗಳ ವಿರುದ್ಧ ಕೂಪಮಂಡೂಕಗಳು ಕೋಪದಿಂದ ಹೊರಬಂದು ಬೆಂಕಿ ಉಂಡೆಗಳಾಗುವ ಕಾಲ ದೂರವಿಲ್ಲವೆಂಬುದನ್ನು ಈ ಮೇಧಾವಿಗಳು ತಿಳಿಯುವ [illegible]

ಅಭಿವೃದ್ಧಿಗೆ ಧಾಳಿ ಇಕ್ಕಿದ ವಿಶ್ವಬ್ಯಾಂಕ್ ಎಂಬ ಅಂತರ್ರಾಷ್ಟ್ರೀಯ ತೋಳ

ವಿಶ್ವಬ್ಯಾಂಕಿನ ಅಧ್ಯಕ್ಷ ಜೇಮ್ಸ್ ಡಿ. ವುಲ್‌ಫನ್‌ಸನ್ ಕರ್ನಾಟಕಕ್ಕೆ ಬಂದಿಳಿಯುತ್ತಿದ್ದಾನೆ. ಎಸ್.ಎಂ.ಕೃಷ್ಣ ಸರ್ಕಾರ ಅತ ಹೆಜ್ಜೆ ಇಡುವಲ್ಲಿ ಕೂಚೆಲ್ಲಿ, ಸ್ವಾಗತಿಸಿ ನಡೆದಾಡಿದ ಕಡೆಯಲ್ಲೆಲ್ಲಾ ಧೂಳನ್ನೆತ್ತಿ ಕೃತಾರ್ಥರಾಗುತ್ತಿದ್ದಾರೆ. ಆಡುವ ಆಣಿಮುತ್ತಿಗಾಗಿ ಕಾತರಿಸಿ ಕಾದಿದ್ದಾರೆ. ಕಳೆದ ವಾರದಿಂದ ರಾಜ್ಯದಾದ್ಯಂತ ಬಂದ ನೊಂದು, ಸಂಕಷ್ಟದಲ್ಲಿರುವ ರೈತರು ಧರಣಿ ನಡೆಸುತ್ತಿದ್ದರೂ ಕೂಗಳತೆ ದೂರದಲ್ಲೇ ಇರುವ ಸಚಿವರು ಕಣ್ಣೆತ್ತಿ ನೋಡದವರು, ವಿಶ್ವಬ್ಯಾಂಕ್ ಅಧ್ಯಕ್ಷರ ಹಿಂದೆ ಸಾಲುಗಟ್ಟಿದ್ದಾರೆ. ತಾನು ಹೇಳಿದಷ್ಟು ಬಗ್ಗುತ್ತಿರುವುದರಿಂದಲೇ 12 ಸಾವಿರ ಕೋಟಿ ಸಾಲವನ್ನು ಬಿಸಾಕುವ ಒಪ್ಪಂದ ಮಾಡಲಾಗಿದೆ.



ಈ ವಿದೇಶಿಯೊಬ್ಬ ನಮ್ಮ ಜನತೆಯ ಸಾರ್ವಭೌಮ ಸರಕಾರಕ್ಕೆ ಅಂಕ(ಮಾರ್ಕ್ಸ್) ಗಳನ್ನು ನೀಡಿ, ಮನಬಂದಂತೆಯೂ ಮಾತನಾಡಿರುವುದು ಅತ್ಯಂತ ಅವಮಾನಕಾರಿ ಸಂಗತಿ. ಜಾಗತೀಕರಣದ ಅಪಾಯಗಳನ್ನು, ವಿಶ್ವಬ್ಯಾಂಕ್‌ನ ಹಿಂದಿರುವ ವಂಚಕ ಹುನ್ನಾರಗಳನ್ನು ಟೀಕಿಸುವವರನ್ನು ಕೂಪಮಂಡೂಕಗಳೆಂದು ಜರಿದಿದ್ದಾರೆ. ಜನ ಜಾಗತೀಕರಣದ ಬಗ್ಗೆ ತಿಳಿಯಬಾರದು ಅವರು ಕೂಪಮಂಡೂಕಗಳಾಗಿರಬೇಕೆಂಬುದೇ ಇವರ ಇಚ್ಛೆ! ತನ್ನ ಸರ್ಕಾರದ ನೀತಿಗಳನ್ನು ಟೀಕಿಸುವ ಹಕ್ಕು ಈ ದೇಶದ ಪ್ರತಿಯೊಬ್ಬ ಪ್ರಜೆಗೂ ಇದೆ. ಇದು ಪ್ರಜೆಗಳ ಮೂಲಭೂತ ಹಕ್ಕು. ಈ ಸಾಲ ನೀಡುವ ಸುಲಿಗೆಗಾರ ಏನು ಮಾತನಾಡಿದರೂ ನಡೆಯುತ್ತೆ ಎಂದು ವರ್ತಿಸಿರುವುದು ಖಂಡನೀಯ. ಆದರೆ ಇದನ್ನು ಜನಪ್ರತಿನಿಧಿಗಳಾದರೂ ಖಂಡಿಸಲಿಲ್ಲ. ವಿಧಾನ ಸಭೆಯಲ್ಲಾದರೂ ಟೀಕಿಸಲಿಲ್ಲ. ಹಾಸ್ಯ ಚಟಾಕಿಗಳಲ್ಲಿ ಕಾಲ ಕಳೆದು ಬೇಕೆಂದೇ ವಿಶ್ವಬ್ಯಾಂಕಿನ ಅಧ್ಯಕ್ಷನ ಭೇಟಿಯ ಅಪಾಯಗಳನ್ನು ನಿರ್ಲಕ್ಷಿಸಿದರು. ಭೇಟಿಯ ವಿರುದ್ಧದ ಪ್ರತಿಭಟನೆಯನ್ನು ಬಹುತೇಕ ಪತ್ರಿಕೆ, ಟಿ.ವಿ.ಗಳು ಬೇಕೆಂದೇ ಮರೆ ಮಾಡಿದವು. ಕರ್ನಾಟಕದ ಸರ್ಕಾರ ಸರಿಯಾದ ದಿಕ್ಕಿನಲ್ಲಿದೆ ಎಂಬ ಸರ್ಟಿಫಿಕೇಟ್ ನೀಡಿದ. ಈ ಅಂತರ್ರಾಷ್ಟ್ರೀಯ ತೋಳ, ವಾಸ್ತವವಾಗಿ ತಾವು ಹಾಕಿರುವ ಎಲ್ಲಾ ಶರತ್ತುಗಳನ್ನು ಶಿರಸಾವಹಿಸಿ ಪಾಲಿಸಲಾಗುತ್ತಿದೆ ಎಂಬ ಅರ್ಥದಲ್ಲಿ ತಮಾಷೆಯೆಂದರೆ ವಿಶ್ವಬ್ಯಾಂಕ್ ನೀಡುವ ಸಾಲವನ್ನು ಸರ್ಕಾರ ಹಾಗೂ ಮಾಧ್ಯಮಗಳು ನೆರವು, ಸಹಾಯ ಎಂದೆಲ್ಲಾ ವರ್ಣಿಸಲಾದದ್ದು.

ಈ ಅವಧಿಯಲ್ಲಿ ಬಡತನದ ನಿರ್ಮೂಲನೆ ಹಾಗೂ ಅಭಿವೃದ್ಧಿಯ ಸಾಧನೆಯ ಮಾತುಗಳ ಮೂಲಕ ಎಲ್ಲಾ ಅನಾಹುತಗಳನ್ನು ಮುಚ್ಚಿಹಾಕಲು ಯತ್ನಿಸಿದ್ದಾರೆ. ಸರ್ಕಾರೇತರ ವ್ಯಕ್ತಿಯೊಬ್ಬ ಸರ್ಕಾರದ ಯೋಜನೆಗಳನ್ನು ಉದ್ಘಾಟಿಸಿ ದ್ದಾರೆ. ಸಚಿವರು, ಅಧಿಕಾರಿಗಳು ಅಂತರ್ರಾಷ್ಟ್ರೀಯ ದಗಾಖೋರ ಸಂಸ್ಥೆಯ ಪ್ರತಿನಿಧಿಯಿಂದ ಪಾಠ ಹೇಳಿಸಿಕೊಂಡಿದ್ದಾರೆ!

ಈ ಹಿಂದೆ ಮುಖ್ಯಮಂತ್ರಿ ಕೃಷ್ಣ ಹೇಳುತ್ತಿದ್ದ ಕುಡಿಯುವ ನೀರು ಸರಬರಾಜು ಸುಧಾರಣೆ, ನೀರಾವರಿ ಕ್ಷೇತ್ರದಲ್ಲಿ ಬದಲಾವಣೆ, ರಸ್ತೆ, ಸೇತುವೆ ನಿರ್ವಹಣೆ, ಆಡಳಿತವನ್ನು ಚಿಕ್ಕದಾಗಿಸಿ-ಚುರುಕುಗೊಳಿಸುವ ಮಾತು, ಪಡಿತರ ವಸ್ತುಗಳಿಗೆ ಸಬ್ಸಿಡಿ ಹಾಗೂ ಕಾರ್ಡ್‌ಗಳ ಇಳಿಕೆ, ಶಿಕ್ಷಣ ಶುಲ್ಕ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಸುಧಾರಣೆ ಎಂಬಿತ್ಯಾದಿ ಗಿಲೀಟಿನ ಮಾತುಗಳನ್ನೇ ವುಲ್ಫನ್ ಸನ್ ಪುನರುಚ್ಚರಿಸಿರುವುದು. ಈ ಮೊದಲೇ ಆದ ಒಳಒಪ್ಪಂದ, ಪೂರ್ವಭಾವಿ ಸಿದ್ಧತೆಯನ್ನು ಮತ್ತೆ ಬಯಲುಗೊಳಿಸಿದೆ. ಈ ಎಲ್ಲಾ ಕ್ಷೇತ್ರಗಳನ್ನು ಖಾಸಗಿಯವರಿಗೆ ಅಂದರೆ ವಿಶ್ವಬ್ಯಾಂಕ್ ನಿರ್ದೇಶನದ ಕಂಪನಿಗಳಿಗೆ (ಅದರಲ್ಲಿ ಒಂದೆರಡರು ಕಂಪನಿಗಳು ದೇಶಿಯ ಕಂಪನಿಗಳಿಗೆ) ಕೊಡಬೇಕು ಎಂಬ ಹುನ್ನಾರ. ತಮ್ಮ ನಿರ್ದೇಶನಗಳನ್ನು ಜಾರಿ ಮಾಡುತ್ತಿರುವುದನ್ನು ದೃಢಪಡಿಸಿಕೊಂಡ ಮೇಲೆಯೇ ಹೊಸ ಸಾಲ ನೀಡಲು ಮುಂದಾಗಲಾಗಿದೆ. ಈನಡುವೆ ಆದ ಮಾತುಕತೆ, ಒಪ್ಪಂದಗಳ ವಿವರಗಳನ್ನು ಕೃಷ್ಣರವರ ಸರ್ಕಾರ ಜನರ ಮುಂದೆ ಇಡಬೇಕು. ಆದರೆ ಈ ಬಗ್ಗೆ ಒಂದೇ ಒಂದು ಅಂಶವನ್ನ ನುಡಿಯದೇ, ವಿಶ್ವಬ್ಯಾಂಕಿನ ಪಿತೂರಿಯಲ್ಲಿ ಇವರೂ ಭಾಗಿಯಾಗಿದ್ದಾರೆ. ಇನ್ನು ವಿರೋಧ ಪಕ್ಷವಾಗಿರುವ ಬಿಜೆಪಿಯೇ ಹೇಳಿಕೇಳಿ ಅವರ ಸ್ವದೇಶಿ ಗುಲಾಮರು. ಈ ಒಟ್ಟು ಪರಿಸ್ಥಿತಿಯ ಎದುರಿನಲ್ಲಿ ದಿಟ್ಟವಾಗಿ ಜನರ ಧ್ವನಿಯಾಗಿ ಗುಡುಗಿದ್ದ ಎಡಪಕ್ಷಗಳು ಇತರೆ ಶಕ್ತಿಗಳು ಪ್ರತಿಭಟನೆ ಮುಂದಾಗದಿರುವುದು ಗಂಭೀರ ವಿಚಾರ: ಪ್ರಜಾಸತ್ತಾತ್ಮಕ ಹಕ್ಕಿನಂತೆ ವಿಶ್ವಬ್ಯಾಂಕ್ ಅಧ್ಯಕ್ಷನ ಭೇಟಿ ವಿರೋಧಿಸಿ, ಪ್ರತಿಭಟಿಸಿದವರನ್ನು ಆಂಧ್ರದ ಚಂದ್ರಬಾಬು ನಾಯ್ಡು ಮಾಡಿದಂತೆ ಕರ್ನಾಟಕದಲ್ಲಿಯೂ ಹೊಸಪೇಟೆ-ಹಂಪಿಯಲ್ಲಿ ಸಿಪಿಐ(ಎಂ) ಕಾರ್ಯಕರ್ತ ರನ್ನು ಪೂರ್ವಭಾವಿಯಾಗಿ ಬಂಧಿಸಿರುವುದು ನಾಚಿಕೆಗೇಡಿನ ಖಂಡನೀಯ ವಿಚಾರ.

ಕೊಡಗು ಪ್ರತ್ಯೇಕತಾ ರ್‍ಯಾಲಿ-ಎಲ್‌ಟಿಟಿಇ ಸಂಬಂಧ:ಸರ್ಕಾರದ ದೃಢ ಕ್ರಮದ ಅಗತ್ಯ

ಪ್ರತ್ಯೇಕ ರಾಜ್ಯದ ಬೇಡಿಕೆ ಹೊತ್ತು ಮತ್ತೆ ದೆಹಲಿಯತ್ತ ಕೊಡಗು ರಾಜ್ಯ ಮುಕ್ತಿ ಮೋರ್ಚಾದ ನಾಯಕ ಎನ್.ಯು.ನಾಚಪ್ಪ ದೌಡಾಯಿಸಿದ್ದಾರೆ. ಸದ್ಯ ಕೊಡಗಿನಲ್ಲಿ ಮೊದಲಿನಂತೆ ಜನಸ್ಪಂದನವನ್ನು ಕಳೆದುಕೊಂಡು ವಿರೋಧವೂ ಹೆಚ್ಚಿನ ಸನ್ನಿವೇಶದಲ್ಲಿ ದೆಹಲಿಯಲ್ಲಿ ನವೆಂಬರ್ 21 ರಂದು ರ್‍ಯಾಲಿ ನಡೆಸುವುದಾಗಿ ಘೋಷಿಸಿದ್ದಾನೆ. ತಮ್ಮ ಪ್ರತ್ಯೇಕತೆಯ ಬೇಡಿಕೆಗೆ ದೆಹಲಿಯ ಬಿಜೆಪಿ ಸರ್ಕಾರ ಕುಮ್ಮಕ್ಕು ನೀಡಿರುವುದು, ಅಲ್ಲದೇ ದೇಶ ಬೇರೆ ರಾಜ್ಯಗಳನ್ನು ವಿಭಜನೆ ಮಾಡಿ ಹೊಸ ರಾಜ್ಯ ನಿರ್ಮಿಸಿರುವುದು ನಾಚಪ್ಪನವರಲ್ಲಿ ಆಸೆ ಹೆಚ್ಚಿ ಹುಚ್ಚರನ್ನಾಗಿಸಿದೆ.

ಸಚಿವ ಧನಂಜಯ್ ಕುಮಾರ್ ಬಹಿರಂಗವಾಗಿಯೇ ಈ ರ್‍ಯಾಲಿ ಸ್ವಾಗತಿಸುವ ಮಾತನ್ನಾಡಿದ್ದಾರೆ. ಇದು ಭಾಷಾವಾರು ಪ್ರಾಂತ್ಯಗಳನ್ನು ಜನರ ವಿಶಾಲ ಒಗ್ಗಟ್ಟನ್ನು ಒಡೆಯಲು ಹಾತೊರೆಯುವ ಬಿಜೆಪಿ ಅಜೆಂಡಾಕ್ಕೆ ಅನುಗುಣವಾಗಿದೆ. ಈ ಎಲ್ಲಾ ಪ್ರಯತ್ನಗಳನ್ನು ತೀವ್ರವಾಗಿ ವಿರೋಧಿಸಬೇಕು, ವಿಫಲಗೊಳಿಸಬೇಕು. ಈ ವಿಷಯದಲ್ಲಿ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ತಮ್ಮ ನಿಲುವನ್ನು ಪುನರುಚ್ಚರಿಸಿ, ವಿರೋಧಿಸಬೇಕು.

ಇದರ ಜೊತೆಗೆ ಆತಂಕದ ಬೆಳವಣಿಗೆಯೆಂದರೆ ನಾಚಪ್ಪನವರಿಗೂ ಎಲ್‌ಟಿಟಿಇ ಬೆಂಬಲ 'ತನಿ ತಮಿಝುಮಿರೆ ಸೇನಾ (ಟಿಟಿಎಫ್)' ಎಂಬುದರ ಜೊತೆಗಿರುವ ಸಂಬಂಧ. ಇದು ಕಳೆದ ಹಲವಾರು ವರ್ಷಗಳಿಂದ ಮುಂದುವರಿದಿದೆ ಎನ್ನಲಾಗಿದೆ. ಕೊ.ರಾ.ಮು. ಮೋರ್ಚಾದ ಸಭೆಗಳಿಗೂ ಆ ಸಂಘದ ಮುಖಂಡರು ಹಾಜರಿದ್ದಾರೆ. ಇದು ಅತ್ಯಂತ ಗಂಭೀರ ಬೆಳವಣಿಗೆ. ಇಂತಹ ವಿಷಯಗಳ ಬಗ್ಗೆ ಸರ್ಕಾರ ಗಂಭೀರ ಕ್ರಮ ವಹಿಸದೆ ಇರುವುದು ಆತಂಕದ ವಿಷಯ. ಎಷ್ಟೆಲ್ಲಾ ಅಸಂವಿಧಾನಿಕ, ಕಾನೂನು ಬಾಹಿರವಾಗಿ ಹೇಳಿಕೆ ನೀಡುತ್ತಾ ಕಾರ್ಯವೆಸಗುತ್ತಿರುವ ಮೋರ್ಚಾದ ಸಂಘಟನೆ, ನಾಯಕರ ಮೇಲೆ ನಿಷ್ಠುರ ಕ್ರಮವಹಿಸದಿರುವುದು ಕಾಂಗ್ರೆಸ್ ಸರ್ಕಾರದ ಹಲವಾರು ಅನುಮಾನ ಹುಟ್ಟಿಸುತ್ತದೆ ಅಥವಾ ಈ ಸಮಸ್ಯೆಯನ್ನು ನಿರ್ಲಕ್ಷಿಸ ಬೇಕಾದ್ದು ಎಂಬ ಬೇಜವಾಬ್ದಾರಿತನವನ್ನು

ಪುಟ 11 ಕ್ಕೆ

ಕರ್ನಾಟಕ ಈ ವಾರ



ಇತಿಹಾಸದ ಪುಟಗಳಿಂದ

ವಿದ್ಯಾವಂಚಿತನಾದ ಒಬ್ಬ ಬಡಹುಡುಗ ಜಗತ್ತಿನ ಅತ್ಯಂತ ಪ್ರಸಿದ್ಧ ಬುದ್ಧಿಜೀವಿಗಳಿಗೆಲ್ಲಾ - "ಸಾಗಿದೆ ಸಮರ ಹೇಳಿ ನೀವು ಯಾರ ಕಡೆ?" ಎಂದು ಕೇಳಿ ಪ್ರಪಂಚದ ಅತ್ಯಂತ ಮಹತ್ವದ ಪ್ರಗತಿಪರ ಸಾಂಸ್ಕೃತಿಕ ಚಳುವಳಿಯನ್ನು - ಹಿಟ್ಲರ್-ಮುಸಲೊನಿಗಳ ವಿರುದ್ಧದ ಫ್ಯಾಸಿಸ್ಟ್ ವಿರೋಧಿ ಚಳುವಳಿಯನ್ನು ಕಟ್ಟಲು ನೆರವಾದ.

'ತಾಯಿ' ಕಾದಂಬರಿಯ ಮೂಲಕ ವಿಶ್ವದ ಕೋಟ್ಯಾಂತರ ಹೃದಯಗಳಲ್ಲಿ ಕ್ರಾಂತಿಯ ಕಿಡಿ ಹೊತ್ತಿಸಿದ ಮಾಕ್ಸಿಂ ಗೋರ್ಕಿಯೇ ಆ ಹುಡುಗ. ಜಗತ್ತಿನ ಸಾಹಿತ್ಯ ಚರಿತ್ರೆಯಲ್ಲಿ ಮುಂದಿನ ಯುಗದ ಹರಿಕಾರನಾಗಿ ಸ್ಥಾನ ಪಡೆದ ಮಾಕ್ಸಿಂ ಗೋರ್ಕಿ ಒಬ್ಬ ಬಡ ಹುಡುಗನಾಗಿ ಹಲವಾರು ಕಡೆ ಕೂಲಿಯಾಳಾಗಿ ಕೆಲಸ ಮಾಡುತ್ತಲೇ ಓದಿನ ಹಸಿವನ್ನು ಬೆಳೆಸಿಕೊಂಡು ಜ್ಞಾನವಂತನಾದ ನಮ ನಿಮಗೆಲ್ಲರಿಗೂ ಮಾದರಿಯಾದ ಕಥೆ ಇಲ್ಲಿದೆ. ಅವರದೇ ಆಕರ್ಷಕ ಬರವಣಿಗೆಯಲ್ಲಿ.

ಬಡತನ ಮತ್ತು ಓದಿನ ಹಸಿವು

ಓದುವುದರ ಬಗೆಗೆ ಇದ್ದಕ್ಕಿದ್ದಂತೆ ನನ್ನಲ್ಲುಂಟಾದ ಈ ರಾಗೋದ್ವೇಗದ ಫಲವಾಗಿ ನಾನು ಅನುಭವಿಸಬೇಕಾಗಿ ಬಂದ ಅವಮಾನ, ನೋವು, ಗಾಬರಿ ಅಷ್ಟಿಷ್ಟಲ್ಲ. ಅದನ್ನೆಲ್ಲ ಈಗ ಸ್ಮರಿಸಿಕೊಳ್ಳಲು ವ್ಯಥೆ ಎನಿಸುತ್ತದೆ, ತಮಾಷೆ ಎನಿಸುತ್ತದೆ.

ಅರಿವೆ ಕತ್ತರಿಸುವವನ ಹೆಂಡತಿಯು ಆ ಪುಸ್ತಕಗಳು ಬಹಳ ಬೆಲೆಯವೆಂದು ನನಗೆ ಅನಿಸಿತು. ನನ್ನ ಮುದಿ ಯಜಮಾನಿ ಆ ಪುಸ್ತಕಗಳನ್ನು ಸುಟ್ಟು ಬಿಡಬಹುದೆಂಬ ಭಯದಿಂದ ಅವುಗಳನ್ನು ಮರತೇ ಬಿಡಲು ನಾನು ಯತ್ನಿಸಿದೆ. ಬೆಳಗಿನ ಉಪಹಾರಕ್ಕಾಗಿ ಬ್ರೆಡ್ಡು ತರುತ್ತಿದ್ದ ಅಂಗಡಿಯಿಂದ ಬಣ್ಣ ಬಣ್ಣದ ಸಣ್ಣ ಪುಸ್ತಕಗಳನ್ನು ಪಡೆಯಲು ಆರಂಭಿಸಿದೆ.

ಮಿಶಾ ಯೆವ್‌ಸ್ತಿಗ್ನಿಯಿವನ ನೀರಸ ಪುಸ್ತಕಗಳನ್ನು ನಾನು ಓದಿದೆ. ಬಾಡಿಗೆಯೆಂದು ಒಂದೊಂದು ಪುಸ್ತಕಕ್ಕೆ ಒಂದೊಂದು ಕೊಪೆಕ್ ನಾನು ಕೊಡಬೇಕಾಯಿತು. ಈ ವೆಚ್ಚ ದುಬಾರಿಯಾಗಿ ನನಗೆ ಕಂಡಿತು. ಆ ಪುಸ್ತಕಗಳಂತೂ ಯಾವ ತೃಪ್ತಿಯನ್ನೂ ನನಗೆ ಕೊಡಲಿಲ್ಲ. ಗ್ವಾಕ್ ಅಥವಾ ನಿಜಸ್ನೇಹ', 'ವೆನಿಸಿನ ಪ್ರಾನ್ಸಿಲ್', 'ಕಬಾರ್ದಿನ್ನಿಯನರ ಜತೆ ರಷ್ಯನರ ಕದನ', 'ತನ್ನ ಪ್ರಣಯಿಯ ಶವದಾನಿಯ ಮೇಲೆ ಸತ್ತ ಮಹಮದೀಯ ಮಹಿಳೆ' - ಇಂಥ ಸಾಹಿತ್ಯದಿಂದ ನನಗೆ ತೃಪ್ತಿಯಾಗಲಿಲ್ಲ. ಬದಲು ಎಷ್ಟೋ ವೇಳೆ ನನ್ನನ್ನು ಕೋಪೋದ್ರಿಕ್ತನನ್ನಾಗಿ ಅವು ಮಾಡಿದವು. ಅಂತಹ ಅಸಂಭವನೀಯ ವಿಷಯಗಳನ್ನು ಅಷ್ಟೊಂದು ಒರಟು ಭಾಷೆಯಲ್ಲಿ ಹೇಳಿ, ನನ್ನನ್ನೊಬ್ಬ ಮೂರ್ಖನೆಂದು ಪರಿಗಣಿಸಲು ಆ ಪುಸ್ತಕಗಳು ಯತ್ನಿಸುತ್ತಿದ್ದಂತೆ ಅನಿಸಿತು.

'ಸ್ತ್ರೆಲ್‌ತ್ಸಿ' 'ಯೂರಿ ಮಿಲೊಸ್ಲಾವ್‌ಸ್ಕಿ', 'ರಹಸ್ಯಮಯಿಯಾದ ಸನ್ಯಾಸಿ' 'ತಾತರ್ ಸವಾರ ಯಾಪಂಚ' - ಇವು ನನಗೆ ಹೆಚ್ಚು ತೃಪ್ತಿಯನ್ನು ನೀಡಿದವು. ಓದಿದ ಬಳಿಕ ಮನಸ್ಸಿನಲ್ಲಿ ಸ್ವಲ್ಪಮಟ್ಟಿಗಾದರೂ ಉಳಿದವು. ಆದರೆ, ಅತ್ಯಂತ ಹೆಚ್ಚು ನಾನು ಇಷ್ಟಪಟ್ಟುದು 'ಸಂತರ ಜೀವನಗಳು' ಎಂಬ ಪುಸ್ತಕವನ್ನು. ಗಂಭೀರವಾದುದು, ನಿಜವೆಂದು ಮನಗಾಣಿಸಿಕೊಡುವಂಥದು - ಕೆಲವೇಳೆ ಬಲು ಹೃದಯಸ್ಪರ್ಶಿಯಾದುದು ಕೂಡಾ - ಇಲ್ಲಿತ್ತು. ಯಾವುದೋ ಕಾರಣಕ್ಕಾಗಿ, ಪುರುಷಹುತಾತ್ಮರೆಲ್ಲ 'ಭೇಷ್'ನ ನೆನಪನ್ನು ಸ್ತ್ರೀಹುತಾತ್ಮರೆಲ್ಲ ನನ್ನ ಅಜ್ಜಿಯ ನೆನಪನ್ನೂ ಉನ್ನತ ಧರ್ಮಾಧಿಕಾರಿಗಳು ಅತ್ಯುತ್ತಮ ಗಳಿಗೆಯಲ್ಲಿ ಅಜ್ಜ ಇರುತ್ತಿದ್ದ ರೀತಿಯ ನೆನಪನ್ನೂ ಮಾಡಿಕೊಡುತ್ತಿದ್ದರು.

ಪುಸ್ತಕವಾಚನವನ್ನು ಮೇಲೆ ಅಟ್ಟದಲ್ಲಿ, ಇಲ್ಲವೆ ಸೌದೆ ಸೀಳಲು ಹೋದಾಗ ಹೊರಗೆ ಶೆಡ್ಡಿನಲ್ಲಿ ಮಾಡುತ್ತಿದ್ದೆ. ಎರಡು ಸ್ಥಳಗಳೂ ಒಂದಕ್ಕೊಂದು ಕಡಿಮೆ ಇಲ್ಲದಂತೆ ಚಳಿಯಿಂದ ಕೊರೆಯುತ್ತಿದ್ದವು. ಅಲ್ಲಿ ಯಾವ ಅನುಕೂಲವೂ ಇರಲಿಲ್ಲ. ಪುಸ್ತಕದಲ್ಲಿ ವಿಶೇಷ ಸ್ವಾರಸ್ಯವಿದ್ದರೆ ಅಥವಾ ಅವಸರದಲ್ಲಿ ಅದನ್ನು ಮುಗಿಸಬೇಕಾಗಿ ಬಂದರೆ, ರಾತ್ರಿ ಎದ್ದು ಮೊಂಬತ್ತಿಯ ಬೆಳಕಿನಲ್ಲಿ ಓದುತ್ತಿದ್ದೆ. ಆದರೆ ರಾತ್ರಿ ಹೊತ್ತು ಮೊಂಬತ್ತಿಗಳು ಚಿಕ್ಕವಾಗುತ್ತಿದ್ದುದನ್ನು ಮುದುಕಿ ಗಮನಿಸಿದಳು. ಒಂದು ಸೌದೆಯ ಕಡ್ಡಿಯಲ್ಲಿ ಮೊಂಬತ್ತಿಗಳನ್ನು ಅಳೆದು ಆ ಚೂರನ್ನು ಬಚ್ಚಿಡತೊಡಗಿದಳು. ಸಾಧಾರಣವಾಗಿ ನಾನು ಆ ಕಡ್ಡಿಯನ್ನು ಕಂಡುಹಿಡಿದು, ಉರಿದು ಚಿಕ್ಕದಾದ ಮೊಂಬತ್ತಿಯ ಅಳತೆಗೆ ಸರಿಯಾಗಿ ಕತ್ತರಿಸಿ ಇಡುತ್ತಿದ್ದೆ. ಹಾಗೇನಾದರೂ ಮಾಡದ ಹೋದೆನೆಂದರೆ, ಮಾರನೆಯ ಬೆಳಿಗ್ಗೆ ಮುದುಕಿ ಸೌದೆ ಕಡ್ಡಿಗೂ ಮೊಂಬತ್ತಿಗೂ ಇರುವ ವ್ಯತ್ಯಾಸವನ್ನು ಕಂಡುಹಿಡಿದು, ಗದ್ದಲ ಆರಂಭಿಸುತ್ತಿದ್ದಳು. ಅಡುಗೆ ಮನೆಯ ಆ ರಂಪಾಟ ತಡೆಯಲಾಗದೆ, ಮಂಚದ ಮೇಲೆ ಮಲಗಿದ್ದಲ್ಲಿಂದಲೆ ವಿಕ್ಟರ್ ಸಿಟ್ಟುಗೊಂಡು ಒಮ್ಮೆ ಕೂಗಾಡಿದ:

'ಬೊಗಳೋದು ನಿಲ್ಸೆ, ಅಮ್ಮ! ನಿನ್ನ ಜತೆ ವಾಸ ಸಾಧ್ಯವೇ ಇಲ್ಲ! ಪುಸ್ತಕಗಳನ್ನು ಓದೋದರಿಂದ ಅವನು ಮೊಂಬತ್ತಿ ಉರಿಸಿಯೇ ಉರಸ್ತಾನೆ. ಆ ಪುಸ್ತಕಗಳನ್ನು ಕೆಳಗಿನ ಅಂಗಡಿಯಿಂದ ತರ್ತಾನೆ. ನಾನು ನೋಡಿದೀನಿ. ಹೋಗಿ ಅಟ್ಟವನ್ನು ಶೋಧಿಸು"


ಮುದುಕಿ ಅಟ್ಟವನ್ನು ಓಡಿಹತ್ತಿದಳು. ಸಣ್ಣದೊಂದು ಪುಸ್ತಕ ಅವಳ ಕಣ್ಣಿಗೆ ಬಿತ್ತು. ಅದನ್ನು ಚೂರು ಚೂರಾಗಿ ಹರಿದು ಹಾಕಿದಳು.

ಸ್ವಾಭಾವಿಕವಾಗಿಯೇ ಇದೊಂದು ಅಘಾತವಾಯಿತು. ಆದರೆ, ಓದುವ ಬಯಕೆಯನ್ನು ಅದು ಮತ್ತಷ್ಟು ಹೆಚ್ಚಿಸಿತು, ಅಷ್ಟೆ. ಸಂತರಲ್ಲೊಬ್ಬ ಈ ಮನೆಗೆ ಬಂದಿಳಿದನೆಂದರೆ, ನನ್ನ ಯಜಮಾನಿಯರು, ಆತ ಹೇಗೆ ವರ್ತಿಸಬೇಕೆಂದು ಅವನಿಗೆ ಹೇಳಿಕೊಡುವುದು ಖಂಡಿತ; ಒಟ್ಟಿನಲ್ಲಿ ತಮಗೆ ಸರಿಕಂಡಂತೆ ಅವನನ್ನು ರೂಪಿಸಿಯೇ ರೂಪಿಸುತ್ತಾರೆ - ಎಂಬುದು ನನಗೆ ಖಚಿತವಾಗಿತ್ತು.

ಓದು ಸಾಧ್ಯವಾಗುವಂತೆ, ಬಗೆ ಬಗೆಯ ತಂತ್ರಗಳನ್ನು ನಾನು ಹೂಡತೊಡಗಿದೆ. ಅನೇಕ ಸಲ ಮುದುಕಿ ನನ್ನ ಪುಸ್ತಕಗಳನ್ನು ನಾಶಪಡಿಸಿದಳು. ಹೀಗಾಗಿ ಕೊನೆಯಲ್ಲಿ, ಅಂಗಡಿಯವನಿಗೆ ನಾನು ಸಾಲಗಾರನಾಗಿ ಹೋದೆ. ಸಾಲದ ಹಣವೋ ನಾಲ್ವತ್ತೇಳು ಕೊಪೆಕ್‌ಗಳ ದೊಡ್ಡ ಮೊತ್ತದ ಹಣ. ತಕ್ಷಣವೇ ಬೇಕೆಂದು ಆತ ತಗಾದೆ ಪಡಿಸಿದ. ಬ್ರೆಡ್ಡಿಗೋಸ್ಕರ ನಾನು ಬಂದಾಗ ಮಾಲಿಕರ ಹಣದಿಂದ ಅಷ್ಟನ್ನು ತೆಗೆದುಬಿಡುವುದಾಗಿ ಬೆದರಿಸಿದ.

"ಆಗ ಏನಾದೀತು?" ಎಂದು ಆತ ಛೇಡಿಸುತ್ತ ಕೇಳಿದ.

"ಇಲ್ಲ? ನಿನ್ನನ್ನು ಏನಪ್ಪ ಮಾಡಬೇಕು ನಾನು? ನ್ಯಾಯಾಸ್ಥಾನಕ್ಕೆ ದೂರು ಒಯ್ದು, ಅವರು ನಿನ್ನನ್ನು ಹಡಗಿನಲ್ಲಿ ಹಾಕಿ ಹುಡುಗರ ಸೆರೆಮನೆಗೆ ಸಾಗಿಸೋ ಹಾಗೆ ಮಾಡಲಿ?"



ಆ ಹಣ ದೊರಕಿಸುವ ಯಾವ ಹಾದಿಯೂ ನನಗಿರಲಿಲ್ಲ. ಯಾಕೆಂದರೆ ನನ್ನ ಸಂಬಳವನ್ನು ನನ್ನ ಅಜ್ಜನಿಗೇ ಕೊಡುತ್ತಿದ್ದರು. ಏನು ಮಾಡಬೇಕೆಂಬುದು ನನಗೆ ತೋಚಲಿಲ್ಲ. ಹಣಕ್ಕಾಗಿ ಸ್ವಲ್ಪ ಸಮಯ ತಾಳೆಂದು ಅಂಗಡಿಯವನಿಗೆ ಹೇಳಿದೆ. ಅವನು ಸಿಹಿರೊಟ್ಟಿಯ ಹಾಗೆ ಉಬ್ಬಿಕೊಂಡು ಜಿಗುಟಾಗಿದ್ದ ಕೈಯನ್ನು ಮುಂದಕ್ಕೆ ಚಾಚಿ ಅಂದ: "ಇದನ್ನು ಚುಂಬಿಸು, ಹಣಕ್ಕಾಗಿ ಕಾಯ್ತೀನಿ"

'ಗಲ್ಲ'ದ ಮೇಲಿನಿಂದ ತೂಕದ ಕಲ್ಲನ್ನೆತ್ತಿಕೊಂಡು ಅವನ ತಲೆಗೇ ಗುರಿ ಇಟ್ಟೆ. ಆತ ಅದು ತಗಲದಂತೆ ತಪ್ಪಿಸಿಕೊಂಡು ಬೊಬ್ಬಿಟ್ಟ.

"ಏಯ್, ಏನ್ಮಾಡ್ತಿದ್ದೀಯ? ನಾನು ತಮಾಷೆಗೆ ಹೇಳ್ದೆ ಅಷ್ಟೆ!"

ಅದು ತಮಾಶೆಯ ಮಾತಲ್ಲವೆಂದು ನನಗೆ ಅನಿಸಿತು. ಅವರ ಕಾಟದಿಂದ ಮುಕ್ತನಾಗುವುದಕ್ಕೋಸ್ಕರ ಹಣ ಕದಿಯಲು ನಾನು ತೀರ್ಮಾನಿಸಿದೆ.

ಹಣ ಕದಿಯಲು ಈಗ ತೀರ್ಮಾನಿಸಿದಾಗ ಅವನ ಆ ಮಾತುಗಳೂ ವಿಶ್ವಾಸದ ಆ ಮುಗುಳುನಗೆಯೂ ನೆನಪಿಗೆ ಬಂದವು. ಇದರಿಂದ ನನ್ನ ಕೆಲಸ ಕಠಿಣವಾಯಿತು. ಎಷ್ಟೋ ವೇಳೆ ಅವನ ಜೇಬುಗಳಿಂದ ಚಿಲ್ಲರೆಯನ್ನು ನಾನು ಹೊರತೆಗೆದೆ, ಎಣಿಸಿದೆ, ಬಳಿಕ - ಪುನಃ ಅಲ್ಲೇ ಇರಿಸಿದೆ. ಮೂರು ದಿನಗಳವರೆಗೆ ನನ್ನೊಳಗೆ ನಾನು ಚಡಪಡಿಸಿದೆ. ಬಳಿಕ ಇದ್ದಕ್ಕಿದ್ದಂತೆ ಬಹುಸುಲಭವಾಗಿ ಸಮಸ್ಯೆ ಬಗೆಹರಿಯಿತು.

ನನ್ನ ಯಜಮಾನ ಅನಿರೀಕ್ಷಿತವಾಗಿ ಕೇಳಿದ "ಈಚೀಚೆಗೆ ನಿನಗೇನಾಗಿದೆ ಪೆಶ್ಕೊವ್? ನೀನು ಮೊದಲು ಇದ್ದಹಾಗಿಲ್ಲ. ಆರೋಗ್ಯ ಸರಿ ಇಲ್ವೇನು?"

ನನ್ನನ್ನು ಏನು ಕಾಡುತ್ತಿತ್ತೆಂಬುದನ್ನು ಸ್ಪಷ್ಟವಾಗಿ ಅವನಿಗೆ ನಾನು ಹೇಳಿದೆ

ಸ್ವಲ್ಪ ಹುಬ್ಬು ಗಂಟಿಕ್ಕಿ ಅವನೆಂದ:

'ಪುಸ್ತಕಗಳಿಂದ ಎಂಥ ಪರಿಣಾಮ ಆಗ್ತದೆ - ನೀನೇ ನೋಡು. ಒಂದಲ್ಲ ಒಂದು ರೀತೀಲಿ ಅವು ನಿನಗೆ ಹಾನಿಯುಂಟುಮಾಡೋದೇ ಖಂಡಿತ"

ಆದರೆ ಆತ ಐವತ್ತು ಕೊಪೆಕ್‌ಗಳನ್ನು ಕೊಟ್ಟು, ಜತೆಯಲ್ಲಿ ಎಚ್ಚರಿಕೆಯ ಮಾತನ್ನು ಹೇಳಿದ.

"ನನ್ನ ಹೆಂಡತಿಗಾಗಲಿ ತಾಯಿಗಾಗಲಿ ಇದು ಗೊತ್ತಾಗದ ಹಾಗೆ ನೋಡ್ಕೋ. ಇಲ್ಲದೇ ಹೋದರೆ ತೊಂದರೆಯಾಗ್ತದೆ"

ಬಳಿಕ, ಸೌಹಾರ್ದಪೂರ್ಣನಗೆ ನಕ್ಕು ಆತ ಮಾತು ಸೇರಿಸಿದ

"ನೀನು ಅದಮ್ಯನಾದ ಪುಟ್ಟ ಪಿಶಾಚಿಯೇ ಸರಿ! ಹಾಳಾಗಿ ಹೋಗಲಿ ಇದೆಲ್ಲ! ಹುಂ, ಆಗಲಿ ಇದು ಕೆಟ್ಟ ಗುಣವೇನೂ ಅಲ್ಲ. ಆದರೆ, ಪುಸ್ತಕಗಳ ಸಹವಾಸ ಬಿಟ್ಟುಬಿಡು! ಹೊಸ ವರ್ಷದಿಂದ ಒಂದು ಒಳ್ಳೇ ವೃತ್ತಪತ್ರಿಕೆಗೆ ಚಂದಾ ಕಟ್ತೀನಿ. ಆಗ ನಿನಗೆ ಓದೋದಕ್ಕೆ ಏನಾದರೂ ಇರ್ತದೆ"

ಅವನು ಹಾಗೆಯೇ ಮಾಡಿದ. ಪ್ರತಿ ಸಂಜೆಯೂ ಚಹಾ ಮತ್ತು ರಾತ್ರಿಯ ಭೋಜನಗಳ ನಡುವೆ ನನ್ನ ಮಾಲಿಕನಿಗೆ ಮಾಸ್ಕೋ ಕರಪತ್ರವನ್ನು ನಾನು ಓದಿ ಹೇಳತೊಡಗಿದೆ. ಮಾಡಲು ಕೆಲಸವಿಲ್ಲದೆ ಬೇಸರದಿಂದ ಸಾಯುತ್ತಿರುವ ಜನರಿಗಾಗಿಯೇ ಬರೆಯುತ್ತಿದ್ದ ಯಾಶ್ಕೋವ್, ರೋಕ್ಷಾನಿಕ್, ರುದ್ನಿಕೋವ್‌ಸ್ಕಿ ಮತ್ತಿತರ ಗ್ರಂಥಕರ್ತರ ಕಾದಂಬರಿಗಳು ಆ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದವು.

ಗಟ್ಟಿಯಾಗಿ ಓದುವುದನ್ನು ನಾನು ಇಷ್ಟಪಡುತ್ತಿರಲಿಲ್ಲ. ಅದರಿಂದ ಬರೆವಣಿಗೆಯ ವಿಷಯನ್ನು ತಿಳಿದುಕೊಳ್ಳಲು ನನಗೆ ತಡೆಯಾಗುತ್ತಿತ್ತು. ಆದರೆ ನನ್ನ ಶ್ರೋತೃಗಳು ಶ್ರದ್ಧೆಯಿಂದ ಆಲಿಸುತ್ತಿದ್ದರು. ಅವರಲ್ಲಿ ಒಂದು ಬಗೆಯ ಭಕ್ತಿಪೂರ್ವಕವಾದ ವಿಶ್ವಾಸವಿರುತ್ತಿತ್ತು. ನಡೆಯಲಾದ ದೌರ್ಜನ್ಯದ ವಿವರ ಕೇಳಿ, ಉಸಿರು ಬಿಗಿಹಿಡಿದು ಉದ್ಗರಿಸುತ್ತ, ಹೆಮ್ಮೆಯಿಂದ ಅವರು ಪರಸ್ಪರ ನುಡಿಯುತ್ತಿದ್ದರು.

"ನಾವಾದರೋ, ಹೊರಗಿನ ಪ್ರಪಂಚದಲ್ಲಿ ಏನಾಗ್ತಿದೆ ಅನ್ನೋದರ ಪರಿವೆಯೇ ಇಲ್ಲದೆ ಇಷ್ಟೊಂದು ಶಾಂತವಾಗಿ ನೆಮ್ಮದಿಯಿಂದ ಜೀವಿಸ್ತಿದ್ದೇವೆ, ದೇವರು ತೇಜೋಮಯ!"

(ಮುಂದಿನ ವಾರಕ್ಕೆ)

ಕರ್ನಾಟಕದಲ್ಲಿ ಕಳೆದ ವಾರ

ಪುಟ 11 ರಿಂದ

ತೋರಿಸುತ್ತಿದೆ. ರಾಜ್ಯ ಸರ್ಕಾರ ಹಾಗೂ ಕೊಡಗಿನ ಮತ್ತು ರಾಜ್ಯದ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ಪ್ರತ್ಯೇಕ ರಾಜ್ಯದ ಪ್ರಶ್ನೆಯನ್ನು ಕಾನೂನುಬದ್ಧವಾಗಿ ಮತ್ತು ಜನಸಮೂಹದ ನಡುವೆ ಎಚ್ಚರ ಮೂಡಿಸಲು ಕ್ರಿಯಾಶೀಲರಾಗಬೇಕು. ಇದು ಎಳ್ಳಷ್ಟು ನಿರ್ಲಕ್ಷಿಸುವ ಪ್ರಶ್ನೆಯೇ ಅಲ್ಲ.

ಬಿಜೆಪಿ ಖಾಜಿ ನ್ಯಾಯಕ್ಕೆ ಪೇಜಾವರರು

ಇವರು ಮಠಾಧೀಶರೇ? ಧಾರ್ಮಿಕ ಪ್ರತಿನಿಧಿಗಳೇ? ಸಂಘ ಪರಿವಾರದ ಕಟ್ಟಾಳುವೇ? ಅಥವಾ ರಾಜಕಾರಣಿಯೋ? ಎಂಬ ಪ್ರಶ್ನೆ ಉದ್ಭವವಾದಾಗಲೆಲ್ಲ 'ಗೊಂದಲಕಾರಿ' ಉತ್ತರಗಳನ್ನು ಹುಟ್ಟಿಸುವ ಉಡುಪಿ ಮಠದ ಪೇಜಾವರ ಸ್ವಾಮಿಗಳು ಬಿಜೆಪಿಗಳ ಕೋಳಿ ಜಗಳದಲ್ಲಿ 'ಖಾಜಿ ನ್ಯಾಯ' ಮಾಡಲು ಮುತುವರ್ಜಿ ವಹಿಸಿದ್ದಾರೆ. ಸ್ವಾಮಿಯವರು ಮಾಡಿಯೂ ಆಡದ, ಆಡಿಯೂ ನಿರಾಕರಿಸುವ ಕಲೆ ಕರಗತಗೊಂಡ ನಿಸ್ಸೀಮರು. ಅಸ್ಪೃಶ್ಯತೆ ಆಚರಿಸಿಯೂ ಸಾಮಾಜಿಕ ಸಮಾನತೆಗೆ ಟೊಂಕ ಕಟ್ಟಬಲ್ಲರು. ಪತ್ರಿಕೆಗಳನ್ನು ಸುಡಿಸಬಲ್ಲರು, ಪ್ರಜಾಪ್ರಭುತ್ವದ ಪಾಠ ಒಪ್ಪಿಸಬಲ್ಲರು. ವಿಹೆಚ್‌ಪಿ-ಬಜರಂಗಿಗಳ ಬಾಯಲ್ಲಿ 'ಸೆಕ್ಯುಲಿಸ್ಟರ' ಕೈಕಾಲು ಮುರಿಸುವ ಧಮಕಿ ನುಡಿಸಬಲ್ಲರು. ಮಸೀದಿ ಒಡೆಯುವ ಕಪಿ ಸೈನ್ಯಕ್ಕೆ ರಥಯಾತ್ರೆಗೆ ಮಂತ್ರ ಹೇಳಿ ಶುಭ ಹಾರೈಸಬಲ್ಲರು.... ಹೀಗೆ ಅನೇಕ ಲೀಲೆಗಳುಳ್ಳ ಪೇಜಾವರರು ಮೊನ್ನೆ ಬಿಜೆಪಿಯ ಯಡಿಯೂರಪ್ಪನವರ ಕೋರಿಕೆಯಂತೆ ಉಚ್ಚಾಟಿತ ನಾಯಕ ಶಿವಪ್ಪನವರನ್ನು ಕರೆಸಿ, ಜಗಳಕ್ಕೆ ಮಂಗಳಗೀತೆ ಹಾಡಲು ಮಧ್ಯಸ್ಥಿಕೆ ವಹಿಸಿದ್ದಾರೆ. ಈ 'ಗುಪ್ತ ಸಮಾಲೋಚನೆ' ಈಗ ಬಹಿರಂಗಗೊಂಡಿದೆ. ಭಿನ್ನಮತೀಯರ ರಸಗವಳಕ್ಕೆ ಆಹಾರವಾಗಿದೆ. ಬಿಜೆಪಿಯ ಒಳಗಿನ ಈ ಬಂಡಾಯ ತಾತ್ಕಾಲಿಕವಾದರೂ ಶಮನಗೊಳ್ಳದಿದ್ದರೆ ತಮಗೆ ಮುಳುವಾಗಬಹುದೆಂದೂ, ಕಾರ್ಪೋರೇಷನ್, ಮುನ್ಸಿಪಾಲಿಟಿ ಚುನಾವಣೆಯಲ್ಲಿ ಪೂರ್ಣ ಎತ್ತಂಗಡಿಯಾಗಬಹುದೆಂದು ಭೀತಿ ಆವರಿಸಿದೆಯಂತೆ.

ಆದರೆ ಪೇಜಾವರರ ಈ ಖಾವೀ ರಾಜಕೀಯ ಮಧ್ಯಪ್ರವೇಶವೂ ಈಗ ವಿಫಲವಾಗಿದೆ, ಯಡಿಯೂರಪ್ಪನವರ ಪರಿವಾರದ ಮೇಲೆ ಬಂಡಾಯಗಾರರು ಹರಿಹಾಯುವುದನ್ನು ಮುಂದುವರಿಸಿದ್ದಾರೆ. ಶಿವಪ್ಪನವರು ಕ್ಷಮೆ ಕೋರಿದರೆ ಸಾಕು ಎಂಬ ಪೇಜಾವರರ ಸಲಹೆಯನ್ನು ತಿರಸ್ಕರಿಸಿದ್ದಾರೆ. ಆದರೆ ಈ ಎಲ್ಲಾವುಗಳ ನಂತರ ಕುತೂಹಲಕಾರಿ ವಿಷಯವೆಂದರೆ ಶಿವಪ್ಪನವರ ಧ್ವನಿ ಬದಲಾಗಿದೆ. 'ಏನೇ ಆಗಲಿ ನಾನು ಮೊದಲಿಂದಲೂ ಬಿಜೆಪಿ, ಮುಂದೆಯೂ ಸಹ.... ಬೇರೆ ಪಕ್ಷ ಕಟ್ಟಲಾರೆ, ಆರು ವರ್ಷಗಳವರೆಗೂ ಕಾದು ಮತ್ತೆ ಅರ್ಜಿ ಗುಜರಾಯಿಸುತ್ತೇನೆ" ಎಂದು ಶಿಸ್ತಿನ ಪಾಲನೆಯನ್ನು ನಟಿಸುತ್ತಿದ್ದಾರೆ. ನಾಯಕ ಹೃದಯ ಪರಿವರ್ತನೆಗೆ ಕಾಯಬಯಸಿದ್ದಾರೆ. ಹುಲಿಯಂತೆ ಘರ್ಜಿಸುತ್ತಿದ್ದ ಶಿವಪ್ಪನವರು "ಕೃಷ್ಣನ ದರ್ಶನಕ್ಕೆ ಕೀರಲು ರಾಗದಲ್ಲಿ ಹಾಡುತ್ತಾ ನಿಲ್ಲುವ ಹೀನೇಶಿತನದ ಸ್ಥಿತಿ ತಲುಪುವಂತಹ ಅದಾವ ಮಂತ್ರೋಪದೇಶಗಳನ್ನು ಪೇಜಾವರು ಮಾಡಿದರೋ? ಅವರೇ ಹೇಳಬೇಕು. 'ಇದನ್ನೇ ಬಳಸಿ ವಿರೋಧ ಪಕ್ಷದ ಸ್ಥಾನ ಇಲ್ಲವೇ ರಾಜ್ಯದ ಅಧ್ಯಕ್ಷತೆ ಕೊಡಿ ಎಂಬ ಬೇಡಿಕೆಗಳೂ ಬರತೊಡಗಿವೆ.

ಕ್ರಿಕೆಟ್ಟನ್ನು ನುಂಗಿದ ಬಂಡವಾಳಶಾಹಿ



ಬಂಡವಾಳಶಾಹಿ ಎಲ್ಲ ಮಾನವೀಯ ಮೌಲ್ಯಗಳು ಹಣದಾಹಕ್ಕೆ ಬಲಿ. ಸಾಹಿತ್ಯ, ರಂಗಭೂಮಿ, ಚಿತ್ರಕಲೆ, ನೃತ್ಯಕಲೆ, ಜಾನಪದ, ಯಾವುದು ತಾನೇ ಮಾನವೀಯ ಮಿಡಿತಗಳ ಅಭಿವ್ಯಕ್ತಿಯ ಸಾಧನವಾಗಿ ಉಳಿದಿದೆ? ಸಿನಿಮಾ, ಟಿ.ವಿ. ತಲುಪಿರುವ ಅಧೋಗತಿಯ ಆಳವನ್ನು ವರ್ಣಿಸುವುದೇ ಬೇಕಾಗಿಲ್ಲ. ಮಾನವನ ಆಳದ ತುಡಿತ ಇನ್ನೂ ಪುಟಿಯುತ್ತಿದ್ದರೆ ಅದು ಬಂಡವಾಳ ಇನ್ನೂ ಪ್ರವೇಶಿಸಿರದ ಅಥವಾ ಬಂಡವಾಳದ ಪ್ರವೇಶವನ್ನು ನಿರಾಕರಿಸಿದ ರಂಗಗಳಲ್ಲಿ ಮಾತ್ರ.

ಇದು ಕ್ರೀಡೆಗಳಿಗೂ ಅದರಲ್ಲಿಯೂ ಅಪಾರ ಜನಪ್ರಿಯತೆಯನ್ನು ಪಡೆದು ದೊಡ್ಡ ಪ್ರಮಾಣದ ಬಂಡವಾಳವನ್ನು ಆಕರ್ಷಿಸಿದ ಕ್ರೀಡೆಗಳಲ್ಲಿ - ಇನ್ನೂ ದೊಡ್ಡ ಪ್ರಮಾಣದಲ್ಲಿ ಅನ್ವಯಿಸುತ್ತದೆ. ಕ್ರಿಕೆಟ್‌ನ ಅತಿರಥ, ಮಹಾರಥರೆಲ್ಲಾ ಮೋಸದಾಟವೆಂಬ ಕೊಚ್ಚೆಯಲ್ಲಿ ಮುಳುಗಿರುವುದು ಹೊರಬಿದ್ದಿದೆ. ಜಗತ್ತಿನ ಕ್ರಿಕೆಟ್ ರಂಗದ ಪ್ರಮುಖರಿಗೆಲ್ಲಾ ಹತ್ತಾರು ವರ್ಷಗಳಿಂದ ಗೊತ್ತಿದ್ದ ಸತ್ಯದ ಒಂದು ಸಣ್ಣ ಭಾಗ ಮಾತ್ರ ಇದು. ಭಾರತದಲ್ಲಿಯೂ, ವಿಶ್ವದ ಇತರ ಕ್ರಿಕೆಟ್ ದೇಶಗಳಲ್ಲಿಯೂ ಇನ್ನೂ ಎಷ್ಟು ಭಾಗ ಹುದುಗಿಡಲಾಗಿದೆಯೋ. ಕೇವಲ ಒಂದು ಸಣ್ಣ ಸಂದಿನಿಂದ ಸ್ವಲ್ಪ ಮಾತ್ರ ಸತ್ಯ ಸೋರಿದೆ.

ಬೆಟ್ಟಿಂಗ್ ಎಂಬ ರಕ್ಕಸ ದೋಚುವಿಕೆ ಹಲವು ಕ್ರೀಡೆಗಳಲ್ಲಿ-ಜನಪ್ರಿಯವಾದ ಹಲವು ಕ್ರೀಡೆಗಳಲ್ಲಿ ಪ್ರವೇಶಿಸಿ ಕ್ರೀಡಾಗುಣಕ್ಕೆ ಹಾನಿ ಮಾಡಿದೆ. ಸಾಹಿತ್ಯ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿಯೂ ಹಾನಿಕಾರಕ ಪಾತ್ರವಿದೆ. ಬೆಟ್ಟಿಂಗ್ ಎಂಬುದು ಮಾಫಿಯಾ ಎಂಬ ಕಾನೂನುಬಾಹಿರ ಬಂಡವಾಳಶಾಹಿಯ ಕ್ರೂರ ಆಟ. ಸಾಮಾನ್ಯವಾಗಿ ಬಂಡವಾಳ ಶಾಹಿ ಜಗತ್ತಿನ ಹೀಯಾಳಿಕೆಗೆ ತುತ್ತಾದ ಚಟುವಟಿಕೆ. ಅಷ್ಟೇ ಹಾನಿಕರವಾದ, ಅದಕ್ಕಿಂತಲೂ ಹಾನಿಕಾರಕವಾದ ಸ್ಪಾನ್ಸರಿಂಗ್-ಸ್ಪರ್ಧೆಗಳನ್ನು, ಪಂದ್ಯಗಳನ್ನು ದೊಡ್ಡ ದೊಡ್ಡ ಕಂಪನಿಗಳು ನಡೆಸುವುದು ಮತ್ತು ಜಾಹೀರಾತುಗಳು ಕ್ರಿಕೆಟ್ ಬ್ಯಾಟ್‌ಗಳ ಮೇಲೆ, ಉಡುಪಿನ ಮೇಲೆ, ಶೂಗಳ ಮೇಲೆ ಜಾಹೀರಾತುಗಳು ಪಂದ್ಯಗಳ ಟಿ.ವಿ. ಪ್ರದರ್ಶನದ ನಡುನಡುವೆ ಜಾಹೀರಾತುಗಳು ಇವುಗಳು ಕಾನೂನುಬದ್ಧವಾಗಿಯೇ ನಡೆಯುತ್ತಿವೆ.

ಇನ್ನೂ ಆಟಗಾರರಿಗೆ ನೀಡುವ ಭಾರಿ ಮೊತ್ತದ ಬಹುಮಾನಗಳು-ಹಣ ಮತ್ತು ವಸ್ತುಗಳು, ವೈಯಕ್ತಿಕವಾಗಿ ನೀಡುವ ಜಾಹೀರಾತುಗಳು ಆಟಗಾರರಲ್ಲಿ ಅನೈತಿಕತೆಯನ್ನು ಹೆಚ್ಚಿಸಿವೆ. ಹಣಕ್ಕಾಗಿ ಬಾಯಿ ಬಿಡುವಂತೆ ಮಾಡಿದೆ. ಸ್ಪಾನ್ಸರಿಂಗ್ ಮತ್ತು ಜಾಹೀರಾತಿನ ಅವಶ್ಯಕತೆಗಾಗಿ ಪಂದ್ಯಗಳ ಸಂಖ್ಯೆ ಅನಾರೋಗ್ಯಕರವಾಗಿ ಹೆಚ್ಚುವಂತೆ ಮಾಡಿವೆ.

ವಿವಿಧ ತಂಡಗಳ ನಡುವಿನ ಕೌಶಲ್ಯವನ್ನು ಅಳೆಯುವುದು ಕ್ರೀಡೆಯ ಅವಕಾಶವನ್ನು ಹಲವರಿಗೆ ವಿಸ್ತರಿಸುವುದಲ್ಲ ಇಂದಿನ ಸ್ಪರ್ಧೆಗಳ ಉದ್ದೇಶ ಕೇವಲ ಸ್ಪರ್ಧೆಗಾಗಿ ಸ್ಪರ್ಧೆಗಳು. ಅವೇ ತಂಡಗಳು ಅದೇ ಆಟಗಾರರು. ಇದರಿಂದಾಗಿ ಕ್ರಿಕೆಟ್ ಆಟದ ಗುಣಮಟ್ಟ ಕುಸಿಯುತ್ತಿದೆ. ಆದರೆ ಅದೇ ಸಮಯದಲ್ಲಿ ಒಂದೇ ಆಟಕ್ಕೆ ನೀಡುತ್ತಿರುವ ಅನವಶ್ಯಕ ಅಪರಿಮಿತ ಪ್ರಾಮುಖ್ಯತೆಯಿಂದಾಗಿ ಉಳಿದೆಲ್ಲ ಆಟಗಳೂ ಸೊರಗುತ್ತವೆ. ಮಿತಿಮೀರಿದ ಪಂದ್ಯಗಳಿಂದಾಗಿ ಕ್ರಿಕೆಟ್‌ನ ಆಟಗಾರರ ಮೇಲೆ ಮಿತಿಮೀರಿದ ದೈಹಿಕ ಹಾಗೂ ಮಾನಸಿಕ ಒತ್ತಡ, ಅನೇಕ ಆಟಗಾರರು ಯಂತ್ರಗಳಂತೆ ಕೆಲಸ ಮಾಡಬೇಕಾಗಿದೆ. ಜಾವಗಲ್ ಶ್ರೀನಾಥ್, ಅನಿಲ್ ಕುಂಬ್ಳೆಯವರಂತಹ ಉತ್ತಮ ಆಟಗಾರರ ಮೇಲೆ ಆಗಿರುವ ಪರಿಣಾಮ ಇಂತಹ ಬಂಡವಾಳಶಾಹಿ ಹಣದಾಸೆಯ ಫಲವಾಗಿದೆ. ಅವರು ಕೇವಲ ಕೇವಲ ಚೆಂಡನ್ನು ಎಸೆಯುವ ಭುಜವಷ್ಟೇ ಆಗಿದ್ದಾರೆ.

ಈ ಕ್ರೀಡೆಯಿಂದ ದೊರೆಯುವ ಅಪಾರ ಹಣ-ಜನರಿಂದ ಸುಲಿಯಲ್ಪಡುತ್ತಿರುವ ಹಣ. ಕ್ರಿಕೆಟ್‌ನ ತರಬೇತಿ, ಅವಕಾಶಗಳ ವಿಸ್ತರಣೆಗಾಗಿ ಉಪಯೋಗವಾಗದೆ ಕೆಲವರ ಕಿಸೆಗೆ ಸೇರುತ್ತಿದೆ. ಒಟ್ಟಿನಲ್ಲಿ ಹಲವರು ಹಣ ಸಂಪಾದಿಸಲೆಂದೇ ಕ್ರೀಡೆ ಹುಟ್ಟಿದೆಯೇನೋ ಎಂಬಂತಾಗಿದೆ.

ಬಂಡವಾಳಶಾಹಿ ಸಮಾಜದಲ್ಲಿ ಒಂದು ಕ್ರೀಡೆ ತಲುಪುವ ಕೆಳಹಂತಕ್ಕೆ ಉದಾಹರಣೆಯಾಗಿ ರೇಸಿಂಗ್ ಅನ್ನು ನೋಡಬಹುದು. ಕುದುರೆ ಸವಾರಿಯಂತಹ ಒಂದು ಉತ್ತಮ ಮತ್ತು ಅತ್ಯಂತ ಪ್ರಾಚೀನ ಕ್ರೀಡೆ ಬೆಟ್ಟಿಂಗ್‌ನ ಪ್ರಭಾವಕ್ಕೆ ಒಳಗಾಗಿ ಆಟವಾಗಿ ಉಳಿಯದೆ ಕೇವಲ ಜೂಜಾಟವಾಗಿದೆ. ಈಗ ಯಾರೂ ಅದನ್ನು ಕ್ರೀಡೆ ಎಂದು ಪರಿಗಣಿಸುವುದೇ ಇಲ್ಲ. ಅಂತಹ ಗತಿ ಕ್ರಿಕೆಟ್‌ಗಾಗಲಿ ಬೇರೆ ಯಾವುದೇ ಕ್ರೀಡೆಗಾಗಲಿ ಬರಬಾರದು. ಕ್ರೀಡೆಯನ್ನು ಈ ಅಧೋಗತಿಯಿಂದ ಮೇಲೆತ್ತಬೇಕಾದರೆ ಇಡೀ ಬೆಟ್ಟಿಂಗ್ ಮತ್ತು ಮೋಸದಾಟದ ಬಗ್ಗೆ ಆಮೂಲಾಗ್ರ ತನಿಖೆ ಹಾಗೂ ಶಿಕ್ಷೆಯಾಗುವುದರ ಜೊತೆಗೆ ಬೆಟ್ಟಿಂಗ್, ಸ್ಪಾನ್ಸರಿಂಗ್ ಜಾಹೀರಾತುಗಳು ಅತಿಯಾದ ಬಹುಮಾನಗಳು, ಪಂದ್ಯಗಳು, ಇವೆಲ್ಲವನ್ನು ನಿಷೇಧಿಸಬೇಕು.

ಎಲ್ಲ ಕ್ರೀಡೆಗಳಿಗೂ ಸಮಾನ ಅವಕಾಶ, ಜನ ಸಾಮಾನ್ಯರಿಗೂ ಕ್ರೀಡವಕಾಶವಿರುವ ಪ್ರಜಾಸತ್ತಾತ್ಮಕ ಕ್ರೀಡಾ ನೀತಿಗಾಗಿ ಸತತ ಹಾಗೂ ಸಾಮೂಹಿಕ ಹೋರಾಟ ನಡೆಯಬೇಕು.

- ಜಿ.ಎನ್.ನಾಗರಾಜ್

ಭಾರತೀಯ ಕ್ರೀಡಾರಂಗ ಇಂದು ಅತ್ಯಂತ ಹೀನಾಯ ಮಟ್ಟ ತಲುಪಿದೆ. ಪ್ರತಿಯೊಂದು ಆಟದಲ್ಲೂ ಹಣ ದೋಚುವ ಹೊಲಸು ರಾಜಕಾರಣವೆಂಬ ಮಹಾಮಾರಿ ಹಾಸುಹೊಕ್ಕಿದೆ. ಆಳುವವರಲ್ಲಿನ ಧನದಾಹ, ನಿರ್ಲಕ್ಷ್ಯತನ, ಬಾಲಬಡುಕತನ, ಭ್ರಷ್ಟತೆ ಈ ಅಧೋಗತಿಗೆ ಪ್ರಮುಖ ಕಾರಣವಾಗಿದೆ.

ಉದಾಹರಣೆಗೆ ಸೆಪ್ಟೆಂಬರ್‌ನಲ್ಲಿ ನಡೆದ ಸಿಡ್ನಿ ಒಲಂಪಿಕ್ಸ್‌ಗೆ ಕ್ರೀಡಾಳುಗಳ ಆಯ್ಕೆಯಲ್ಲಿ ರಾಜಕೀಯ ಕುತಂತ್ರದಿಂದ ಭಾರತದ ವೈಟ್‌ಲಿಫ್ಟರ್ ಕುಂಜುರಾಣಿ ದೇವಿ ತನ್ನ ಆಯ್ಕೆಯಾಗಲಿಲ್ಲ ಎಂದರು. ಇದು ನಂತರ ಸಾಬೀತಾಯಿತು. ಹಾಗೆಯೆ 1998 ರಲ್ಲಿ ನಡೆದ ಸಿಯೋಲ್ ಒಲಂಪಿಕ್ಸ್‌ಗೆ ಆಯ್ಕೆಯಾಗಿದ್ದ ವೈಟ್‌ಲಿಫ್ಟರ್ ಪುಷ್ಪರಾಜ್ ಹೆಗ್ಡೆರವರನ್ನು ಕೈಬಿಡಲಾಯಿತು. ಸಿಡ್ನಿ ಒಲಂಪಿಕ್ಸ್‌ನಲ್ಲಿ ಭಾರತಕ್ಕೆ ಕಂಚಿನ ಪದಕ ತಂದ ಸರಳಾ ಮಹೇಶ್ವರಿಯವರನ್ನು ಕೈಬಿಡುವ ಹುನ್ನಾರ ನಡೆದಿತ್ತು ಎನ್ನುವುದು ಜಗಜ್ಜಾಹೀರು. ಇಂತಹ ಹೊಲಸು ರಾಜಕೀಯದಿಂದಾಗಿ ನೂರು ಕೋಟಿ ಜನಸಂಖ್ಯೆಯ ಭಾರತ ಸಿಡ್ನಿ ಒಲಂಪಿಕ್ಸ್‌ನಿಂದ ಜಾಲಿ ಟ್ರಿಪ್ ಮುಗಿಸಿ ಮುಖ ರಹಿತಗೊಂಡರೆ, ಇತ್ತ ಭಾರತೀಯ ಕ್ರಿಕೆಟ್ 'ಬಂಡವಾಳ'ದ ಬಾಯಿಯಲ್ಲಿ ಸಿಕ್ಕಿ ಮೋಸದಾಟ, ಬಾಜಿ ಹಗರಣವೆಂಬ ಕೆಸರಲ್ಲಿ ಒದ್ದಾಡುತ್ತಿದೆ.

ಆಘಾತ ತಂದ ಕ್ರಿಕೆಟ್ ಮೋಸದಾಟ

ವಿಶ್ವದಲ್ಲಿ ಕೇವಲ ಡಜನ್ ದೇಶಗಳು ಕ್ರಿಕೆಟ್ ಆಡುತ್ತಿದ್ದರೂ, ಜಗತ್ತಿನ ಜನಪ್ರಿಯ ಕ್ರೀಡೆಗಳಲ್ಲೊಂದಾಗಿ ಹೊರಹೊಮ್ಮಿದೆ ಭಾರತದ ಬಹಳಷ್ಟು ಜನತೆಗೆ ಈ ಆಟದೆಡೆಗೆ ಇನ್ನಿಲ್ಲದ ಗೀಳಿತ್ತು. ಆದರೆ ಇಂದು ಈ ತಾರಕದ ಜನಪ್ರಿಯತೆಯ ಆಟ ಕುಗ್ಗಿ, ಪಾತಾಳಕ್ಕಿಳಿದಿದೆ. ಕಾರಣ? ಕ್ರಿಕೆಟ್ ಆಡುವ ಬಹುತೇಕ ಆಟಗಾರರು ಹಣ, ಆಸ್ತಿ, ಅಂತಸ್ತುಗಳ ಮೋಹದಲ್ಲಿ ಜನತೆಯ ಪ್ರೀತಿ, ನಂಬಿಕೆ, ಅಭಿಮಾನಕ್ಕೆ ಕಿಚ್ಚು ಹಚ್ಚಿದ್ದಾರೆ. ಊಟ, ತಿಂಡಿ, ನಿದ್ದೆ ಬಿಟ್ಟು ಕ್ರಿಕೆಟ್ ನೋಡುತ್ತಿದ್ದ ಜನ ಇಂದು ಈ ಆಟದ ಬಗ್ಗೆ ನಿರ್ಲಕ್ಷ್ಯ ವಹಿಸತೊಡಗಿದ್ದಾರೆ. ಹಲವಾರು ವರ್ಷಗಳಿಂದ ಹಿರೋಗಳಾಗಿ ಮೆರೆಯುತ್ತಿದ್ದ ಘಟಾನುಘಟಿ ಕ್ರಿಕೆಟ್ಟಿಗರು ಇಂದು ಬಾಜಿ ಹಗರಣದಲ್ಲಿ ಸಿಲುಕಿ ಕ್ರೀಡಾಭಿಮಾನಿಗಳಿಗೆ ಆಘಾತ ತಂದು ಅವರ ಆಕ್ರೋಶಕ್ಕೆ ಈಡಾಗಿದ್ದಾರೆ.

ಕ್ರಿಕೆಟ್‌ನ ಮೋಸದಾಟದ ತನಿಖೆ ನಡೆಸುತ್ತಿದ್ದ ಸಿಬಿಐ ನವೆಂಬರ್ 1 ರಂದು ಕೇಂದ್ರ ಸರ್ಕಾರಕ್ಕೆ ತನ್ನ ತನಿಖಾ ವರದಿ ಸಲ್ಲಿಸಿದೆ. ಭಾರತದ ಅಜರುದ್ದೀನ್, ಅಜಯ್ ಜಡೇಜ, ಅಜಯ್ ಶರ್ಮ, ನಯನ್ ಮೊಂಗಿಯಾ, ಮನೋಜ ಪ್ರಭಾಕರ್ ಜೊತೆಗೆ ತಂಡದ ವೈದ್ಯ ಅಲಿ ಇರಾನಿ ಸೇರಿದಂತೆ ಪಾಕಿಸ್ತಾನದ ಮಾಜಿ ನಾಯಕ ವಾಸಿಂ ಅಕ್ರಂ, ವಕಾರ್ ಯೂನಸ್, ಇಂಜುಮಾಮ್ ಉಲ್‌ಹಕ್, ಸಯಿದ್ ಅನ್ವರ್, ಆಸ್ಟ್ರೇಲಿಯದ ಮಾರ್ಕ್‌ವಾ ಮತ್ತು ಡೀನ್ ಜೋನ್ಸ್, ಇಂಗ್ಲೆಂಡಿನ ಮಾಜಿ ನಾಯಕ ಅಲೆಕ್ ಸ್ಟುವರ್ಟ್, ವೆಸ್ಟ್‌ಇಂಡೀಸ್‌ನ ಬ್ರಿಯಾನ್ ಲಾರಾ, ಶ್ರೀಲಂಕಾದ ಮಾಜಿ ನಾಯಕ ಅರ್ಜುನ್ ರಣತುಂಗ ಮತ್ತು ಅರವಿಂದ ಡಿಸಿಲ್ವ, ನ್ಯೂಜಿಲೆಂಡ್‌ನ ಮಾರ್ಟಿನ್ ಕ್ರೋವ್‌ರಂತಹ ಘಟಾನುಘಟಿ ಕ್ರೀಡಾಳುಗಳು ಆರೋಪಿಗಳೆಂದು ಸಿಬಿಐ ಹೆಸರಿಸಿದೆ. ಜೊತೆಗೆ ಹೊಂದಾಣಿಕೆ ಪಂದ್ಯವೊಂದರಲ್ಲಿ ನೂರಾರು ಕೋಟಿ ಡಾಲರ್ ಕೈಬದಲಾಯಿಸುತ್ತಿತ್ತು ಎಂದು ವರದಿಯಲ್ಲಿ ಉಲ್ಲೇಖಿಸಿದೆ. ಇದರಿಂದ ಕ್ರಿಕೆಟ್ ಜಗತ್ತು ಅಲ್ಲೋಲ ಕಲ್ಲೋಲವಾಗಿದೆ.

ಕ್ರಿಕೆಟ್ ಆಟಗಾರರು ಹಣ, ಕೀರ್ತಿ, ಪ್ರತಿಷ್ಠೆ ಜೊತೆಗೆ ಎಲ್ಲ ರೀತಿಯ ಸೌಕರ್ಯಗಳನ್ನು ಹೊಂದಿಯೂ ಈ ನೀಚ ಹಣಕ್ಕೆ ಬಾಯಿ ಹಾಕಿರುವ ಆಟಗಾರರ ಪ್ರವೃತ್ತಿ ನಿಜಕ್ಕೂ ದುರದೃಷ್ಟಕರ ಹಾಗೂ ಖಂಡನೀಯ. ಆದರೂ ಪಂದ್ಯ ಹೊಂದಾಣಿಕೆ ಬಾಜಿ ವ್ಯವಹಾರದ ವಾಸನೆ ಬಂದು ಬಹಳ ದಿನವಾದರೂ ಭಾರತ ಕ್ರಿಕೆಟ್ ಮಂಡಳಿ ನಿರಾಳವಾಗಿದ್ದುದ್ದು ಹಲವಾರು ಅನುಮಾನಗಳಿಗೆ ಆಸ್ಪದ ನೀಡಿದೆ.

ಬಂಡವಾಳದ ಬಾಯಲ್ಲಿ ಕ್ರಿಕೆಟ್!

ಈ ಬಾಜಿ ವ್ಯವಹಾರ, ಮೋಸದಾಟ ಕೇವಲ ಕ್ರಿಕೆಟ್‌ಗೆ ಮಾತ್ರ ಸೀಮಿತವಾಗಿರದೇ ಯುರೋಪ್, ಆಫ್ರಿಕಾ, ಅಮೆರಿಕಾಗಳಲ್ಲಿ ಜನಪ್ರಿಯ ಕ್ರೀಡೆ ಫುಟ್‌ಬಾಲ್‌ಗೂ ವ್ಯಾಪಿಸಿದೆ. ಇಂದು ಸಾಮ್ರಾಜ್ಯ ಶಾಹಿಗಳು ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ಕಾಲಿಟ್ಟ ಕಡೆ ಲಂಚ, ಕಮಿಷನ್ ಎಂಬ ರೋಗ ಎಲ್ಲಾ ರಂಗಗಳಿಗೂ ಹರಡತೊಡಗಿದೆ. (ಹಿಂದೆ 1995-96 ರಲ್ಲಿ 'ಹವಾಲ' ಹೆಸರಲ್ಲಿ ರಾಜಕೀಯದಲ್ಲೂ ಪ್ರವೇಶಿಸಿ ಭಾರತೀಯ ಭೂರ್ಜ್ವಾ ಪಕ್ಷಗಳಲ್ಲಿ ತಲ್ಲಣ ಗೊಳಿಸಿದ್ದನ್ನು ನೆನಪಿಸಿಕೊಳ್ಳಬಹುದು). ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಉತ್ಪನ್ನಗಳಿಗೆ ಮಾರುಕಟ್ಟೆ ಬಾಚಲು ಮಿಲಿಯ ಗಟ್ಟಲೆ ಹಣ ವ್ಯಯಿಸುತ್ತಿದೆ. ಹೆಚ್ಚು ಪಂದ್ಯಗಳನ್ನು ಏರ್ಪಡಿಸಿ ತಮಗೆ ಬೇಕಾಗುವ ತಂಡವನ್ನೇ ಗೆಲ್ಲಿಸಿ ಅದರ ಹಿರೋವನ್ನು ಜಾಹೀರಾತಿಗೆ ಬಳಸಿ ತನ್ನ ಉತ್ಪನ್ನ ಮಾರಾಟವಾಗುವಂತೆ ರೂಪಿಸುವ ತಂತ್ರವೂ ಒಂದು ಎಂಬ ಅನುಮಾನ ನಿಜವಾಗುವಂತೆ ಎಲ್ಲಾ ತಂಡಗಳ ಆಟಗಾರರಿಗೆ ಬೇರೆ ಬೇರೆ ಅವಧಿಯಲ್ಲಿ ಬುಕ್ಕಿಗಳ ಮೂಲಕ ಹಣದ ಆಮಿಷ ಒಡ್ಡಿರುವುದು ಖಚಿತವಾಗತೊಡಗಿದೆ. ಇದರಿಂದಾಗಿ ಇಂದು ಇಡೀ ಕ್ರೀಡೆಯನ್ನು ಬಂಡವಾಳ ನುಂಗತೊಡಗಿದೆ. ಈ ಮಾಫಿಯಾಪಡೆ ಭಾರತದಲ್ಲಿ ಸದ್ಯ ಕ್ರಿಕೆಟ್‌ನ್ನು ನುಂಗಿದೆ.

ಯಾರನ್ನೋ ರಕ್ಷಿಸಲು ಯತ್ನಿಸಿದಂತಿದೆ

ಪ್ರಾರಂಭದಲ್ಲಿ ಮೋಸದಾಟಕ್ಕೆ ಸಂಬಂಧಿಸಿದಂತೆ ಶಂಕೆಗೊಳಗಾಗಿದ್ದ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯ ಮಾಜಿ ಅಧ್ಯಕ್ಷ ಜಗನ್ಮೋಹನ್ ದಾಲ್ಮಿಯ ಸೇರಿದಂತೆ ಕ್ರಿಕೆಟ್ ಮಂಡಳಿಯ ಹಲವರು, "ಸ್ವತಃ ಕಪಿಲ್ ದೇವ್ ನನಗೆ 25 ಲಕ್ಷ ರೂ. ನೀಡಲು ಬಂದಿದ್ದರು" ಎಂದು ಮನೋಜ್ ಪ್ರಭಾಕರ್ ಹೇಳಿದರೂ ಆ ವಿಷಯ ನನಗೆ ಪ್ರಭಾಕರ್ ತಿಳಿಸಿದ್ದರೆಂದು ರವಿಶಾಸ್ತ್ರಿ ಹೇಳಿದರೂ ಕಪಿಲ್ ನಿರ್ದೋಷಿ ಎಂದು, ತೆಂಡೂಲ್ಕರ್ ಮದುವೆಗೆ ಬುಕ್ಕಿಗಳ ಹಿಂಡೆ ಬಂದಿತೆಂದು ಅಜರುದ್ದೀನ್ ಹೇಳಿದರೂ ಈ ಬಗ್ಗೆ ನಿಖರ ಹಾಗೂ ಸಮಗ್ರ ತನಿಖೆ ನಡೆದ ವರದಿ ಇಲ್ಲ. ಇದನ್ನು ಗಮನಿಸಿದರೆ ಸಿಬಿಐ ವರದಿಯು ಏಕಪಕ್ಷೀಯವಾಗಿದ್ದು ಯಾರನ್ನೋ ರಕ್ಷಿಸಲು ಯತ್ನಿಸಿದಂತಿದೆ ಎಂಬ ಮನೋಜ್ ಪ್ರಭಾಕರ್ ಹೇಳಿಕೆ ಹಲವು ಅನುಮಾನಗಳಿಗೆ ಎಡೆಮಾಡಿದೆ. ಕೇವಲ ಅಜರುದ್ದೀನ್ ಹಾಗೂ ಅಜಯ್ ಶರ್ಮರ ಆದಾಯ ತೆರಿಗೆ ವಿವರ ಕೇಳಿರುವ ಸಿಬಿಐ ಉಳಿದ ಎಲ್ಲ ಪ್ರಮುಖ ಕ್ರಿಕೆಟ್ ಆಟಗಾರರ ಆದಾಯ ತೆರಿಗೆ ಹಾಗೂ ಭಾರತೀಯ ಕ್ರಿಕೆಟ್ ಮಂಡಳಿ ಹಾಗೂ ಅದರ ಪ್ರಮುಖರ ಆದಾಯದ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಿ ಭಾರತೀಯ ಕ್ರಿಕೆಟನ್ನು ಶುದ್ಧೀಕರಿಸಬೇಕಾಗಿದೆ.

ಏತನ್ಮಧ್ಯೆ ಈ ಎಲ್ಲಾ ಕುತೂಹಲ ಶಂಕೆಗಳ ಮಧ್ಯೆ ಕ್ರೀಡಾಜಗತ್ತು ಬೆಚ್ಚಿ ಬೀಳಿಸುವಂಥ ಮತ್ತೊಂದು ಅಂಶವನ್ನು ಸಿಬಿಐ ಎತ್ತಿ ಹಿಡಿದಿದೆ. ಕ್ರಿಕೆಟ್ ಮೋಸದಾಟ, ಜೂಜಿನಲ್ಲಿ ಭೂಗತ ದೊರೆಗಳು ಆಸಕ್ತರಾಗಿದ್ದಾರೆ ಎಂಬುದೇ ಈ ಆಘಾತಕರ ಅಂಶ. ಇದನ್ನು ಹೀಗೆಯೇ ಮುಂದುವರಿಯಲು ಬಿಟ್ಟರೆ ಮುಂದಿನ ದಿನಗಳಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಆಟದ ಸಮಸ್ತ ಚಟುವಟಿಕೆಗಳು ಮಾಫಿಯಾ ಜಗತ್ತೇ ನಿಯಂತ್ರಿಸಬಹುದು ಎಂದು ತನಿಖಾದಳದ ಕಳವಳ ಕ್ರಿಕೆಟ್ ಜಗತ್ತಿಗೆ ಎಚ್ಚರಿಕೆಯ ಗಂಟೆಯಾಗಿದೆ. ಈಗಾಗಲೇ ಹಿಂದಿ ಚಲನಚಿತ್ರರಂಗವನ್ನು ತನ್ನ ಹಿಡಿತದಲ್ಲಿಟ್ಟಿರುವ ಮಾಫಿಯಾ ತಾರೆಯರನ್ನು ಭಯದ ನೆರಳಲ್ಲಿ ಬದುಕುವಂತೆ ಮಾಡಿದೆ. ಈಗ ಕ್ರೀಡಾ ಲೋಕವನ್ನು ತಮ್ಮತ್ತ ತೆಗೆದುಕೊಳ್ಳಬಹುದು. ಆಗ ಅದರ ಪರಿಣಾಮ ಅಪಾರ. ಅದು ಆಗದಂತೆ ಸಂಬಂದಪಟ್ಟವರೆಲ್ಲರು ಸೇರಿ ಈಗಾಗಲೇ ಎಲ್ಲ ಬಗೆಯ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

- ಜಯರಾಮು

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : G.N. NAGARAJ